ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಐಕ್ಯರಂಗ

23 ಜುಲೈ 1995

ಸಂಪುಟ 17 ಸಂಚಿಕೆ 29-30 ರೂ. 2.00



ರೈತ-ಕಾರ್ಮಿಕ ಸಂಘಟನೆಗಳ ಸಮಾವೇಶದ ಕರೆ

ಕೊಜೆಂಟ್ರಿಕ್ಸ್ ಒಪ್ಪಂದ ಹೇರದಂತೆ ಮಾಡಲು ಪ್ರಚಂಡ ಜನತಾ ಆಂದೋಲನ

ಕರ್ನಾಟಕದಲ್ಲಿ ವಿಪರೀತ ವಿದ್ಯುತ್ ಅಭಾವ ಇದೆ. ಆದರೆ ಈ ಅಭಾವವನ್ನು ತಪ್ಪಿಸಲು ಎನ್ರೋನ್ ಮಾದರಿಯೇ ಏಕೈಕ ದಾರಿ ಎಂಬ ಕೇಂದ್ರ ಸರಕಾರದ ಮತ್ತು ರಾಜ್ಯ ಸರಕಾರದ ನೀತಿ ಸರಿಯಲ್ಲ. ವಿದ್ಯುಚ್ಛಕ್ತಿ ಅಭಾವವನ್ನು ನೀಗಿಸಲು ಕೊಜೆಂಟ್ರಿಕ್ಸ್ ಒಪ್ಪಂದದ ಮಾದರಿಗಿಂತ ಭಿನ್ನ ಮಾದರಿ ಸಾಧ್ಯವಿದೆ. ರಾಜ್ಯ ಸರಕಾರ ಈ ಪರ್ಯಾಯವನ್ನು ಒಪ್ಪಿಕೊಳ್ಳುವಂತೆ ಮಾಡಲು ಎಲ್ಲಾ ಜಿಲ್ಲೆಗಳಲ್ಲಿ ಸಮಾವೇಶಗಳನ್ನು ನಡೆಸಿ ತಾಲ್ಲೂಕು ಮಟ್ಟಕ್ಕೂ ತೆಗೆದುಕೊಂಡು ಹೋಗಿ ವಿಶಾಲವಾದ ಹೋರಾಟದ ವೇದಿಕೆಯನ್ನು ರೂಪಿಸಿ ಕೊಜೆಂಟ್ರಿಕ್ಸ್ ತನ್ನ ಒಪ್ಪಂದವನ್ನು ಹೇರದಂತೆ ಮಾಡಲು ಪ್ರಚಂಡ ಜನತಾ ಆಂದೋಲನವನ್ನು ನಡೆಸಬೇಕು ಎಂದು ಜುಲೈ 2ರಂದು ಬೆಂಗಳೂರಿನಲ್ಲಿ ನಡೆದ "ಕೊಜೆಂಟ್ರಿಕ್ಸ್ ಹಾಗೂ ವಿದ್ಯುತ್ ನೀತಿ" ಎಂದು ಸಮಾವೇಶ ಕರೆ ನೀಡಿದೆ.

ಸಿಐಟಿಯು ಹಾಗೂ ಕರ್ನಾಟಕ ಪ್ರಾಂತ ರೈತ ಸಂಘ ಜಂಟಿಯಾಗಿ ಏರ್ಪಡಿಸಿದ ಈ ಸಮಾವೇಶ ಇನ್ನೊಂದು ನಿರ್ಣಯವನ್ನು ಅಂಗೀಕರಿಸಿ ರಾಜ್ಯದ ನೀರಿನ ಸಂಪತ್ತನ್ನು ಉಪಯೋಗಿಸಿ ತಯಾರಾಗುವ ಯೋಜನೆಗಳು ಅತೀ ಕಡಿಮೆ ಖರ್ಚಿನಲ್ಲಿ ಕರ್ನಾಟಕದ ಜನತೆಗೆ ವಿದ್ಯುಚ್ಛಕ್ತಿ ಒದಗಿಸಲು ಸಾಧ್ಯವಾದ್ದರಿಂದ ಈ ಬಗ್ಗೆ ಅಧ್ಯಯನ ಮಾಡಿ ಬಿಹೆಚ್‌ಇಎಲ್ ಸಹಭಾಗಿತ್ವದಿಂದ ರಾಜ್ಯದಲ್ಲಿಯೇ ಹಣ ಒದಗಿಸುವ ಬಗ್ಗೆ ವರದಿ ಮಾಡಲು ಒಂದು ತಜ್ಞರ ಸಮಿತಿಯನ್ನು ರಚಿಸಲು ಕೂಡಾ ನಿರ್ಧರಿಸಿದೆ. ಪರಿಸರವಾದಿಗಳ ಒತ್ತಡಕ್ಕೆ ಮಣಿದು ಕೈಬಿಟ್ಟಿರುವ *1110* ಮೆಗಾವಾಟ್ ವಿದ್ಯುತ್ ಉತ್ಪಾದಿಸುವ ಬರಪೊಳೆ ಹಾಗೂ ಬೇಡ್ತಿ ಯೋಜನೆಗಳನ್ನು, ವಿಶ್ವಬ್ಯಾಂಕ್ ಹೊಸ ಶರತ್ತುಗಳು ಹಾಕಿದ ಪರಿಣಾಮವಾಗಿ ಅರ್ಧಂಬರ್ಧ ಆಗಿರುವ *610* ಮೆಗಾವಾಟ್ ವಿದ್ಯುತ್ ಉತ್ಪಾದಿಸಬಹುದಾದ ಅರ್ಧಕ್ಕೆ ಕೈಬಿಟ್ಟಿರುವ ಯೋಜನೆಗಳನ್ನು ಅಗತ್ಯ ಹಣ ಪೂರೈಕೆಗೆ ಕ್ರಮ ತೆಗೆದುಕೊಂಡು ಯುದ್ಧೋಪಾದಿಯಲ್ಲಿ ಪೂರ್ಣಗೊಳಿಸಬೇಕೆಂದು ಸರಕಾರವನ್ನು ಒತ್ತಾಯಿಸಿದೆ.

ಪಶ್ಚಿಮ ಬಂಗಾಳದ ವಿದ್ಯುತ್ ಮಂತ್ರಿ ಡಾ.ಶಂಕರ್‌ಸೇನ್ ಸಮಾವೇಶವನ್ನು ಉದ್ಘಾಟಿಸಿದರು. ಸಿಐಟಿಯು ಅಖಿಲ ಭಾರತ ಅಧ್ಯಕ್ಷರು ಹಾಗೂ ಭಾರತ ವಿದ್ಯುತ್ ನೌಕರರ ಒಕ್ಕೂಟದ ಅಧ್ಯಕ್ಷರೂ ಆಗಿರುವ ಇ.ಬಾಲಾನಂದನ್ ಪ್ರಮುಖ ಭಾಷಣ ಮಾಡಿ ನರಸಿಂಹರಾವ್ ಸರಕಾರದ ವಿದ್ಯುತ್ ನೀತಿ ಹಾಗೂ ಪಶ್ಚಿಮ ಬಂಗಾಳದಲ್ಲಿ ಎಡರಂಗ ಸರಕಾರ ಕೇಂದ್ರ ಸರಕಾರ ಹಾಕಿದ ಚೌಕಟ್ಟಿನೊಳಗೇ ಅನುಸರಿಸಿರುವ ಪರ್ಯಾಯ ನೀತಿಯನ್ನು ಸಮಾವೇಶದ ಪ್ರತಿನಿಧಿಗಳ ಮುಂದೆ ಇಟ್ಟರು. ಸಿಐಟಿಯು ರಾಜ್ಯ ಅಧ್ಯಕ್ಷ ಎಸ್.ಸೂರ್ಯನಾರಾಯಣರಾವ್ ಅಧ್ಯಕ್ಷತೆ ವಹಿಸಿದ್ದರು.

ಉದ್ಘಾಟನಾ ಭಾಷಣ ಮಾಡುತ್ತಾ ಡಾ.ಶಂಕರ್‌ಸೇನ್ ವಿದ್ಯುತ್ತಿನ ಅಭಾವ ಎದುರಿಸುತ್ತಿದ್ದ ಪಶ್ಚಿಮ ಬಂಗಾಳ ನೆರೆರಾಜ್ಯಗಳಿಗೆ ವಿದ್ಯುತ್ ಪೂರೈಸುವ ಮಟ್ಟಕ್ಕೆ ಬಂದ ಎಡರಂಗ ಸರಕಾರದ ವಿದ್ಯುತ್ ನೀತಿಯ ಬಗ್ಗೆ ವಿವರಿಸಿದರು. ಕೇಂದ್ರದ ಬಳಿ ಹಣ ಇಲ್ಲ ಎಂಬುದನ್ನು ಒಪ್ಪಲಾಗದು. ಆದರೆ ರಾಜ್ಯ ಸರಕಾರಗಳ ಬಳಿ ಹಣ ಇಲ್ಲ, ಆದ್ದರಿಂದ ವಿದೇಶೀ ಬಂಡವಾಳವನ್ನು ಸ್ವಾಗತಿಸಬೇಕಾಗುತ್ತದೆ. ಆದರೆ ಅದನ್ನು ನಮ್ಮ ಶರತ್ತಿನ ಮೇಲೆ ಕರೆಯಬೇಕು ಹಾಗೂ ಹೀಗೆ ಮಾಡಲು ಸಾಧ್ಯ ಎಂದು ಅವರು ಹೇಳಿದರು. ಏಕೆಂದರೆ ಅಮೇರಿಕಾದ ಕಂಪೆನಿಗಳ ಬಳಿ ಬಹಳ ಬಂಡವಾಳ ಇದೆ, ಆದರೆ ಅಮೇರಿಕಾದಲ್ಲಿ ಸಿಗುವ ಬಡ್ಡಿ ದರ ಕೇವಲ 4%. ಎನ್ರೋನ್ ವಿರೋಧಿ ಆಂದೋಲನದಿಂದಾಗಿ ಅಮೇರಿಕನ್ ಸರಕಾರ ಬೆದರಿಕೆ ಹಾಕಿದಾಗ ಪ.ಬಂಗಾಳದ ಎಡರಂಗ ಸರಕಾರದೊಡನೆ ಒಂದು ತಿಳುವಳಿಕೆಗೆ ಬಂದಿರುವ ಸಿಎಂಎಸ್ ಕಂಪೆನಿ ಕೂಡಾ ಹಿಂದೇಟು ಹಾಕುತ್ತಾರೆ ಎಂಬ ಸುದ್ದಿ ಪ್ರಕಟವಾಗಿತ್ತು. ಆದರೆ ಆ ಸುದ್ದಿಯನ್ನು ನಂಬಬೇಡಿ ಎಂದು ಅಮೇರಿಕನ್ ಕಂಪೆನಿಯ ಮುಖ್ಯಸ್ಥರೇ ತಮಗೆ ಖುದ್ದಾಗಿ ಹೇಳಿದುದಾಗಿ ಡಾ.ಸೇನ್ ತಿಳಿಸಿದರು.

ಪರ್ಯಾಯ ವಿದ್ಯುತ್ ನೀತಿ

ಎಡರಂಗ ಸರಕಾರದ ವಿದ್ಯುತ್ ನೀತಿಯ ಮುಖ್ಯ ಅಂಶಗಳೆಂದರೆ

i) ಜಂಟಿ ವಲಯದಲ್ಲಿ ವಿದ್ಯುತ್ ಸ್ಥಾವರಗಳು,

ii) B.O.T. ಪರಿಕಲ್ಪನೆ ಅಂದರೆ ವಿದೇಶೀ ಕಂಪನಿ ಸ್ಥಾವರವನ್ನು ಕಟ್ಟಿ ಒಂದು ನಿರ್ದಿಷ್ಟ ಸಮಯದವರೆಗೆ ನಡೆಸಿ ತನ್ನ ಬಂಡವಾಳಕ್ಕೆ ಸೂಕ್ತ ಪ್ರತಿಫಲ ಪಡೆದ ಮೇಲೆ ಒಂದು ರೂಪಾಯಿ ಸಾಂಕೇತಿಕ ಬೆಲೆಗೆ ಅದನ್ನು ಸರಕಾರಕ್ಕೆ ಬಿಟ್ಟುಕೊಡಬೇಕು,

iii) ಯಂತ್ರ ಸಾಮಗ್ರಿಗಳಿಗೆ ಬಹಿರಂಗ ಟೆಂಡರ್ ಹಾಗೂ

iv) ರಾಜ್ಯದ ಹಿತಾಸಕ್ತಿಗಳನ್ನು ಬಲಿಕೊಡದ ವಿದ್ಯುತ್ ಖರೀದಿ ಒಪ್ಪಂದ. ಎನ್ರೋನ್‌ನಲ್ಲಿ 90% ವಿದ್ಯುತ್ತನ್ನು ಖರೀದಿಸುವ 16% ಗ್ಯಾರಂಟಿ ಪ್ರತಿಫಲ ನೀಡುವ ಶರತ್ತುಗಳಿದ್ದರೆ ಪಶ್ಚಿಮ ಬಂಗಾಳ 60% ವಿದ್ಯುತ್ತನ್ನು ಖರೀದಿಸುವ ಹಾಗೂ 12% ಪ್ರತಿಫಲ ನೀಡುವ ಶರತ್ತಿನೊಂದಿಗೆ ಮಾತುಕತೆ ಆರಂಭಿಸಿತು. ವಿದೇಶೀ ಕಂಪನಿಗಳು 68.5%ದವರೆಗೆ ಬಂದಿದ್ದಾರೆ. ಕೇಂದ್ರ ಸರಕಾರ 16% ಗ್ಯಾರಂಟಿ ಪ್ರತಿಫಲ ನೀಡಿರುವುದರಿಂದ ರಾಜ್ಯ ಸರಕಾರ

ಪುಟ 3 ಕ್ಕೆ

ಎನ್ರೋನ್-ಕೆಟ್ಟ ಚೌಕಟ್ಟಿನಲ್ಲಿ ಮಾಡಿಕೊಂಡ ಒಂದು ಕೆಟ್ಟ ವ್ಯವಹಾರ- ವಿದ್ಯುತ್ ತಜ್ಞರ ಎಚ್ಚರಿಕೆ

ವಿದ್ಯುತ್ ಸಚಿವಾಲಯ ಪ್ರಾಮಾಣಿಕವಾಗಿ ಆತ್ಮಶೋಧನೆ ಮಾಡಿಕೊಂಡು ತನ್ನ ಸದ್ಯದ ನೀತಿಗಳ ಬಗ್ಗೆ ವ್ಯಾಪಕ ಸಂದೇಹಗಳು ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ, ಮುಖ್ಯವಾಗಿ ಸಂಸದೀಯ ಸ್ಥಾಯಿ ಸಮಿತಿಯ 26ನೇ ವರದಿಯ ಹಿನ್ನೆಲೆಯಲ್ಲಿ ಈ ನೀತಿಗಳ ಬಗ್ಗೆ ಇನ್ನೊಮ್ಮೆ ದೃಷ್ಟಿ ಹರಿಸಬೇಕು ಎಂದು ದೇಶದ ಹಲವು ಪ್ರಮುಖ ವಿದ್ಯುತ್ ತಜ್ಞರು ಜುಲೈ 1 ರಂದು ನೀಡಿದ ಒಂದು ಜಂಟಿ ಹೇಳಿಕೆಯಲ್ಲಿ ಆಗ್ರಹಪಡಿಸಿದ್ದಾರೆ.

"ಸರಕಾರ ತನ್ನ ಸರಿಯಾಗಿ ಯೋಚಿಸದ ನೀತಿಯಿಂದಾಗಿ ವಿದ್ಯುತ್ ವಲಯದಲ್ಲಿ ತಾನು ಏನು ಗೋಜಲು ಸೃಷ್ಟಿಸಿದ್ದೇನೆ" ಎನ್ನುವುದನ್ನು ಪರಿಶೀಲಿಸಬೇಕಾದ ಸಮಯ ಬಂದಿದೆ. ವಿದ್ಯುತ್ ವಲಯದಲ್ಲಿ ಬಂಡವಾಳವನ್ನು ಆಕರ್ಷಿಸುವ ಪ್ರಯತ್ನದಲ್ಲಿ ಅವರು ಅತ್ಯಂತ ಕಮ್ಮಿ ಖರ್ಚಿನಲ್ಲಿ ವಿದ್ಯುತ್ ಉತ್ಪಾದಿಸಬೇಕು ಹಾಗೂ ಸ್ವದೇಶೀ ಇಂಧನವನ್ನು ಬಳಸಬೇಕು ಎಂಬ ನೀತಿಯನ್ನು ಕೈಬಿಟ್ಟಿದೆ. ಅದರ ಬದಲು ವಿದ್ಯುತ್ ಸಚಿವಾಲಯ ಬಂಡವಾಳ ವಿನಿಯೋಗದ ಖರ್ಚನ್ನು ಬಡಾಯಿಸಿ ಪ್ರೋತ್ಸಾಹ ನೀಡುವ, ಪ್ರತಿಫಲವನ್ನು ಹಣದುಬ್ಬರಕ್ಕೆ ಬೆಸೆಯುವ ಮೂಲಕ ಹೆಚ್ಚು ದರ ನೀಡುವ ಹಾಗೂ ಆಮದಾದ ಇಂಧನವನ್ನು ಬಳಸಲು ಅವಕಾಶ ಒದಗಿಸುವ ಒಂದು ನೀತಿಯನ್ನು ತಯಾರಿಸಿದೆ. ಇಂತಹ ಒಂದು ನೀತಿ ವಿದ್ಯುಚ್ಛಕ್ತಿ ಮಂಡಳಿಗಳನ್ನು ದಿವಾಳಿಯೆಬ್ಬಿಸುವ ಬೆದರಿಕೆಯೊಡ್ಡಿದೆ ಹಾಗೂ ವಿದ್ಯುತ್ ಬೆಲೆಗಳನ್ನು ಸ್ವೀಕಾರಾರ್ಹವಲ್ಲದ ಮಟ್ಟಕ್ಕೆ ಏರಿಸುತ್ತದೆ" ಎಂದು ಈ ಜಂಟಿ ಹೇಳಿಕೆ ಅಭಿಪ್ರಾಯಪಟ್ಟಿದೆ.

"ಎನ್ರೋನ್ ಒಂದು ಕೆಟ್ಟ ನೀತಿಯ ಚೌಕಟ್ಟಿನಲ್ಲಿ ಪೂರೈಸಿದ ಒಂದು ಕೆಟ್ಟ ವ್ಯವಹಾರದ ಒಂದು ಉದಾಹರಣೆಯಷ್ಟೆ" ಎಂದಿರುವ ವಿದ್ಯುತ್ ತಜ್ಞರು ಈ ಚೌಕಟ್ಟಿನಲ್ಲೇ ಗಂಭೀರ ಮರಣಾಂತಿಕ ದೋಷ ಇದೆ, ಇದನ್ನು ಆಮೂಲಾಗ್ರವಾಗಿ ಬದಲಿಸಬೇಕಾಗಿದೆ ಎಂದಿದ್ದಾರೆ.

ವಿದ್ಯುತ್ ವಲಯದಲ್ಲಿನ ಬಿಕ್ಕಟ್ಟು ಹೆಚ್ಚುವ ಸನ್ನಿವೇಶವಿದ್ದು ಎಂಟನೇ ಯೋಜನೆಯಲ್ಲಿ 16000 ಮೆಗಾವಾಟ್ ಗಿಂತ ಹೆಚ್ಚು ವಿದ್ಯುತ್ ಸಾಮರ್ಥ್ಯ ಸೇರಿಸುವ ಸಾಧ್ಯತೆಯಿಲ್ಲ. ಭಾರತದ ಪ್ರಧಾನ ವಿದ್ಯುತ್ ಯಂತ್ರೋಪಕರಣಗಳ ಉತ್ಪಾದನೆ ನಡೆಸುವ ಕಾರ್ಖಾನೆ ಬಿಹೆಚ್‌ಇಎಲ್‌ಗೆ ಆರ್ಡರುಗಳು ಇಲ್ಲವಾಗುತ್ತಿವೆ.

ತಕ್ಷಣ ದೀರ್ಘಕಾಲದ ಹಾಗೂ ಅಲ್ಪಕಾಲದ ಕ್ರಮಗಳನ್ನು ಕೈಗೊಳ್ಳದಿದ್ದರೆ ಭಾರತೀಯ ವಿದ್ಯುತ್ ವಲಯದ ಭವಿಷ್ಯ ಮಂಕಾಗುತ್ತದೆ. ಬಹಳ ವಿಳಂಬವಾಗುವ ಮೊದಲು ಕಾರ್ಯಾಚರಣೆಗಿಳಿಯಬೇಕಾಗುತ್ತದೆ" ಎಂದು ಈ ಜಂಟಿ ಹೇಳಿಕೆ ಎಚ್ಚರಿಸಿದೆ.

ಈ ಜಂಟಿ ಹೇಳಿಕೆಗೆ ಸಹಿ ಮಾಡಿದ ತಜ್ಞರೆಂದರೆ ಪಂಜಾಬ್ ರಾಜ್ಯ ವಿದ್ಯುತ್ ಮಂಡಳಿಯ ಹಿಂದಿನ ಅಧ್ಯಕ್ಷ ಎನ್.ಎಸ್. ವಸಂತ್, ಯೋಜನಾ ಆಯೋಗದ ವಿದ್ಯುತ್ ವಿಭಾಗದ ಸದಸ್ಯ ಹಿತೇನ್ ಭಯ್ಯಾ, ಹಿಂದಿನ ಹಣಕಾಸು ಕಾರ್ಯದರ್ಶಿ ಎಸ್.ಪಿ.ಶುಕ್ಲಾ, ಕೇಂದ್ರ ವಿದ್ಯುತ್ ಪ್ರಾಧಿಕಾರದ ಹಿಂದಿನ ಅಧ್ಯಕ್ಷರುಗಳಾದ ಎ.ಎನ್.ಸಿಂಗ್, ಎಂ.ಕೆ. ಸಾಂಬಮೂರ್ತಿ ಹಾಗೂ ಜೆ.ಕೆ. ಭಾಸಿನ್, ಬಿಹಾರ್ ರಾಜ್ಯ ವಿದ್ಯುತ್ ಮಂಡಳಿಯ ಹಿಂದಿನ ಅಧ್ಯಕ್ಷರಾದ ಬಿ.ಎನ್.ಓಝಾ, ಅಧಿಕಾರಿಗಳ ಸಂಘಗಳ ರಾಷ್ಟ್ರೀಯ ಒಕ್ಕೂಟದ ಅಧ್ಯಕ್ಷ ಅಶೋಕ್ ರಾವ್, ದಿಲ್ಲಿ ವಿಜ್ಞಾನ ವೇದಿಕೆಯ ಪ್ರೊಬೀರ್ ಪುರಕಾಯಸ್ಥ ಹಾಗೂ ಎಐಪಿಇಎಫ್‌ನ ಡಿ.ಕೆ.ಪುರಿ. (ಐಎನ್‌ಎನ್)

ಬಹುಸದಸ್ಯ ಚುನಾವಣಾ ಆಯೋಗ ಕುರಿತು ಸುಪ್ರೀಂಕೋರ್ಟ್ ತೀರ್ಪು

ಸಂಸದೀಯ ಪ್ರಜಾಪ್ರಭುತ್ವಕ್ಕೊಂದು ಗಮನಾರ್ಹ ಕೊಡುಗೆ

ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ ದೇಶದ ಸರ್ವೋಚ್ಚ ನ್ಯಾಯಾಲಯದ ಐವರು ನ್ಯಾಯಾಧೀಶರ ಸಂವಿಧಾನ ಪೀಠ ಚುನಾವಣಾ ಆಯೋಗವನ್ನು ಬಹು ಸದಸ್ಯ ಚುನಾವಣಾ ಆಯೋಗವಾಗಿ ಮಾಡಿದ ಮುಖ್ಯ ಚುನಾವಣಾ ಆಯುಕ್ತರಲ್ಲದೆ ಇನ್ನಿಬ್ಬರು ಚುನಾವಣಾ ಆಯುಕ್ತರನ್ನು ನೇಮಿಸಿ ಮೂವರಿಗೂ ಸಮಾನ ಸ್ಥಾನ-ಮಾನ ನೀಡಿದ ರಾಷ್ಟ್ರಪತಿಗಳ ಎರಡು ಅಧಿಸೂಚನೆಗಳನ್ನು ಎತ್ತಿ ಹಿಡಿದಿರುವ ತೀರ್ಪು ನೀಡಿದೆ. ಈ ಎರಡೂ ಅಧಿಸೂಚನೆಗಳನ್ನು ಪ್ರಶ್ನಿಸಿ ಮುಖ್ಯ ಚುನಾವಣಾ ಆಯುಕ್ತ ಶೇಷನ್ ಸಲ್ಲಿಸಿದ ಅರ್ಜಿಯನ್ನು ಸಂವಿಧಾನ ಪೀಠ ತಿರಸ್ಕರಿಸಿದೆಯಲ್ಲದೆ ಶೇಷನ್‌ರವರು ತಾನು ರಜಾದ ಮೇಲೆ ಹೋಗುವಾಗ ಉಪ ಆಯುಕ್ತರಿಗೆ ಅಧಿಕಾರ ವಹಿಸಿ ಹೋದದ್ದು ಕಾನೂನುಬಾಹಿರ ಎಂದಿದೆ.

ಸಿಪಿಐ(ಎಂ) ಪೊಲಿಟ್‌ಬ್ಯೂರೋ ಈ ತೀರ್ಪನ್ನು ಸ್ವಾಗತಿಸುತ್ತಾ ಇದು ಸಂಸದೀಯ ಪ್ರಜಾಪ್ರಭುತ್ವಕ್ಕೊಂದು ಗಮನಾರ್ಹ ಕೊಡುಗೆ ಎಂದು ವರ್ಣಿಸಿದೆ. ಬಹುಸದಸ್ಯ ಚುನಾವಣಾ ಆಯೋಗದ ಈ ಪರಿಕಲ್ಪನೆಯನ್ನು ಸಿಪಿಐ(ಎಂ) ಎತ್ತಿ ಹಿಡಿದಿದ್ದು ಶೇಶನ್‌ರವರು ಇದನ್ನು ಪ್ರಶ್ನಿಸಿ ವಿಪರೀತ ಅಧಿಕಾರ ವಹಿಸಿಕೊಂಡು ವರ್ತಿಸಲಾರಂಭಿಸಿದಾಗ ಈ ಬಗ್ಗೆ ಸ್ಥಿತಿ ಸ್ಪಷ್ಟಪಡಿಸಲು ಸಂವಿಧಾನ ತಿದ್ದುಪಡಿ ತರಬೇಕೆಂದು ಒತ್ತಾಯಿಸಿತ್ತು. ಸುಪ್ರಿಂ ಕೋರ್ಟ್ ತೀರ್ಪಿನಿಂದ ಸಿಪಿಐ(ಎಂ)ನ ಈ ನಿಲುವು ಸರಿಯೆಂದು ಸಾಬೀತಾಗಿದೆ ಎಂದು ಪೊಲಿಟ್‌ಬ್ಯೂರೋ ಹೇಳಿದೆ. ಶೇಷನ್‌ರ ವರ್ತನೆಗಳಿಗೆ 'ಅರ್ಹ' ಟೀಕೆಗಳನ್ನು ಮಾಡಿರುವ ಈ ತೀರ್ಪು ಮುಖ್ಯ ಚುನಾವಣಾ ಆಯುಕ್ತರಿಗೆ ಹೆಚ್ಚಿನ ಅಧಿಕಾರ ನೀಡುವುದನ್ನು ಬೆಂಬಲಿಸಿದ್ದ ರಾಜಕೀಯ ಪಕ್ಷಗಳು ಈಗಲಾದರೂ ಸಂವಿಧಾನದ ನಿಲುವನ್ನು ಅರಿತುಕೊಳ್ಳಬೇಕು ಎಂದು ಪಿ.ಬಿ. ಆಶಿಸಿದೆ.

ದಿಲ್ಲಿ ಆರೋಪಿಗೆ ಮದ್ರಾಸಿನಲ್ಲಿ ಜಾಮೀನು ಕೇರಳದ ಆರೋಪಿಗೆ ದಿಲ್ಲಿಯಲ್ಲಿ ಜಾಮೀನು!


ಕಾಂಗ್ರೆಸ್ಸಿನಲ್ಲಿ ಅಪರಾಧೀಕರಣದ ದುರ್ನಾತ!

ರಾಜಧಾನಿಯಲ್ಲಿ ನೈನಾ ಸಾಹ್ನಿ ಕೊಲೆ ಮೊಕದ್ದಮೆಯ ಪ್ರಧಾನ ಆರೋಪಿ ಹಾಗೂ ದಿಲ್ಲಿ ಯುವ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ಸುಶೀಲ್ ಶರ್ಮಾಗೆ ಮದ್ರಾಸ್‌ನ ಸೆಶನ್ಸ್ ಕೋರ್ಟಿನಿಂದ ನಿರೀಕ್ಷಣಾ ಜಾಮೀನು ಪಡೆಯಲು ಸಾಧ್ಯವಾಗಿದೆ ಎಂಬ ಸುದ್ದಿಯ ಬಗ್ಗೆ ಸಿಪಿಐ(ಎಂ) ಪೊಲಿಟ್‌ಬ್ಯೂರೋ ತನ್ನ ತೀವ್ರ ಕ್ರೋಧವನ್ನು ವ್ಯಕ್ತಪಡಿಸುತ್ತಾ ಅದನ್ನು ಖಂಡಿಸಿದೆ. ಎರಡು ದಿನಗಳ ಹಿಂದೆ ಕೇರಳದ ಕಣ್ಣೂರಿನ ಕಾಂಗ್ರೆಸ್ ಜಿಲ್ಲಾ ಸಮಿತಿ ಅಧ್ಯಕ್ಷ ಹಾಗೂ ಎಂಎಲ್‌ಎ ಸುಧಾಕರನ್‌ಗೆ ದಿಲ್ಲಿ ಕೋರ್ಟಿನಿಂದ ನಿರೀಕ್ಷಣಾ ಜಾಮೀನು ಪಡೆಯಲು ಸಾಧ್ಯವಾಗಿದೆ. ಸಿಪಿಐ(ಎಂ) ಶಾಸಕ ಹಾಗೂ ಸಿಪಿಐ(ಎಂ)ನ ಕಣ್ಣೂರು ಜಿಲ್ಲಾ ಸಮಿತಿಯ ಕಾರ್ಯದರ್ಶಿ ಇ.ಪಿ. ಜಯರಾಜನ್ ಮೇಲೆ ಪ್ರಾಣಾಂತಿಕ ಹಲ್ಲೆ ನಡೆಸಿದ ಕೇಸಿನಲ್ಲಿ ಈ ಸುಧಾಕರನ್ ಒಬ್ಬ ಆರೋಪಿ. ಇ.ಪಿ.ಜಯರಾಜನ್ 15ನೇ ಮಹಾಧಿವೇಶನದಿಂದ ಹಿಂದಿರುಗುವಾಗ ಆಂಧ್ರದಲ್ಲಿ ಅವರ ಮೇಲೆ ಗುಂಡು ಹಾರಿಸಿದಾಗ ಅವರು ಗಾಯಗೊಂಡಿದ್ದರು. ಈ ಎರಡೂ ಸಂದರ್ಭದಲ್ಲಿ ನಿರೀಕ್ಷಣಾ ಜಾಮೀನಿನ ದುರುಪಯೋಗ ನಡೆದಿದ್ದು ಜನ ನ್ಯಾಯಾಂಗದ ವಿಶ್ವಾಸಾರ್ಹತೆಯಲ್ಲಿ ನಂಬಿಕೆ ಕಳೆದುಕೊಳ್ಳುವಂತಾಗಿದೆ ಎಂದು ಪೊಲಿಟ್‌ಬ್ಯೂರೋ ಖೇದ ವ್ಯಕ್ತಪಡಿಸಿದೆ.

ಸುಶೀಲ್ ಶರ್ಮಾಗೆ ಸಂಬಂಧಪಟ್ಟಂತೆ ಮದ್ರಾಸಿನಲ್ಲಿ ಆತನ ಪರವಾಗಿ ಜಾಮೀನು ಅರ್ಜಿ ಹಾಕಿದ ವಕೀಲರ ಪ್ರಕಾರ ದಿಲ್ಲಿಯಲ್ಲಿ ಒಬ್ಬ ರಾಜಕಾರಣಿಯ ನಿರ್ದೇಶನದ ಮೇರೆಗೆ ಹಾಗೆ ಮಾಡಲಾಗಿದೆ. ಇದರ ಬೆನ್ನಹಿಂದೆಯೇ ಸುಶೀಲ್ ಶರ್ಮಾ ಕೆಲವು ಕೇಂದ್ರ ಮಂತ್ರಿಗಳೊಂದಿಗೆ ನಿಕಟ ಹಾಗೂ ಸಂದೇಹಾಸ್ಪದ ಸಂಬಂಧ ಹೊಂದಿರುವ ಸುದ್ದಿಗಳೂ ಬಂದಿವೆ. ಕಾಂಗ್ರೆಸ್ ಪಕ್ಷದಲ್ಲಿ ಅಪರಾಧೀಕರಣ ಕಾಲು ಹಾಕಿ ಎಂತಹ ಕೊಳೆತು ನಾರುವ ಸ್ಥಿತಿ ಬಂದಿದೆ ಎಂಬುದರ ಸಂಕೇತ ಇದು ಎಂದು ಪಿ.ಬಿ. ಬೇಸರ ವ್ಯಕ್ತಪಡಿಸಿದೆ.

ಕೇಂದ್ರದಲ್ಲಿ ಆಳುತ್ತಿರುವ ಪಕ್ಷದೊಂದಿಗಿನ ತಮ್ಮ ಸಂಬಂಧಗಳಿಂದಾಗಿ ಅಪರಾಧಿಗಳು ತಪ್ಪಿಸಿಕೊಳ್ಳದಂತೆ ಅವರು ಶಿಕ್ಷೆಗೆ ಗುರಿಯಾಗುವ ಹಾಗೆ ನೋಡಿಕೊಳ್ಳಲು ಜನ ಎಚ್ಚರದಿಂದಿರಬೇಕು ಎಂದು ಪೊಲಿಟ್ ಬ್ಯೂರೋ ಆಗ್ರಹಪಡಿಸಿದೆ.

ಲೇನಿನ್‌ರ 125ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಒಂದು ವಿಶೇಷ ಲೇಖನ



ಮಾರ್ಕ್ಸ್‌ವಾದ-ಲೆನಿನ್‌ವಾದ

ಸಮಾಜದ ಕ್ರಾಂತಿಕಾರಕ ಪರಿವರ್ತನೆಯ ವಿಜ್ಞಾನ

ಸಿ.ಆರ್. ಭಟ್

(ಹಿಂದಿನ ಸಂಚಿಕೆಯಿಂದ)

ಜಾಗತಿಕ ಯುದ್ಧ (1914-18) ಸಂಭವಿಸಿತೆಂದು ಲೆನಿನ್ ಸರಿಯಾಗಿಯೇ ವಿಶ್ಲೇಷಿಸಿದರು. ಘೋರ ಯುದ್ಧ ನಡೆಯುತ್ತಿರುವಾಗಲೇ ಲೆನಿನ್‌ರ ಬೊಲ್ಶೆವಿಕ್ ಪಕ್ಷದ ನೇತೃತ್ವದಲ್ಲಿ 1917ರ ಫೆಬ್ರವರಿಯಲ್ಲಿ ಝಾರ್ ಚಕ್ರವರ್ತಿಯನ್ನು ಪದಚ್ಯುತಗೊಳಿಸುವ ಮೂಲಕ ಪ್ರಜಾಸತ್ತಾತ್ಮಕ ಕ್ರಾಂತಿಯನ್ನು ಅಕ್ಟೋಬರ್ 25ರಂದು ಕರೆನ್ಸ್ಕಿಯ ಬಂಡವಾಳಶಾಹಿ ಸರ್ಕಾರವನ್ನು ಕಿತ್ತೊಗೆಯುವ ಮೂಲಕ ಸಮಾಜವಾದಿ ಕ್ರಾಂತಿಯನ್ನು ಯಶಸ್ವಿಗೊಳಿಸಲಾಯಿತು. ಲೆನಿನ್ ಮಾರ್ಕ್ಸ್‌ವಾದವನ್ನು ಸೃಜನಾತ್ಮಕವಾಗಿ ವಾಸ್ತವಿಕ ಪರಿಸ್ಥಿತಿಗೆ ಅನ್ವಯಿಸಿಕೊಂಡು ಏಕಕಾಲದಲ್ಲಿ ಎರಡು ಕ್ರಾಂತಿಗಳನ್ನು ಸಾಧಿಸಿರುವುದು, ಮಾನವ ಇತಿಹಾಸದಲ್ಲಿಯೇ ಅದ್ವಿತೀಯ ವಿಜಯವಾಗಿದೆ. 1871ರಲ್ಲಿ ಪ್ಯಾರಿಸ್ ಕಮ್ಯೂನ್‌ನಲ್ಲಿ ಪ್ರಾಯೋಗಿಕವಾಗಿ ಸ್ಥಾಪಿಸಿದ ಕಾರ್ಮಿಕ ವರ್ಗದ ಪ್ರಭುತ್ವ, 1905ರಲ್ಲಿ ರಷ್ಯಾದ ವಿಫಲ ಕ್ರಾಂತಿಯ ಸಂದರ್ಭ ದೇಶದಾದ್ಯಂತ ಸ್ಥಳೀಯವಾಗಿ ಸ್ಥಾಪಿತವಾದ ಕಾರ್ಮಿಕರ-ರೈತರ-ಸೈನಿಕರ ಆಡಳಿತದ ಸೋವಿಯೆತ್ ಗಳು, ಅಂತಿಮವಾಗಿ ರಷ್ಯಾದಲ್ಲಿ 1917ರ ಅಕ್ಟೋಬರ್ ಕ್ರಾಂತಿಯಾಗಿ ಪರಿಣಮಿಸಿತು. ಜಗತ್ತಿನಲ್ಲಿ ಮೊತ್ತ ಮೊದಲಿಗೆ ಸಾಮ್ರಾಜ್ಯಶಾಹಿಗಳಿಗೆ ಸವಾಲಾಗಿ ಅಲ್ಪಸಂಖ್ಯಾತ ಬಂಡವಾಳಶಾಹಿ-ಭೂಮಾಲಕ ಶೋಷಕ ವರ್ಗದ ಮೇಲೆ ಬಹುಸಂಖ್ಯಾತ ಶ್ರಮಿಕ ವರ್ಗದ ಸರ್ವಾಧಿಕಾರ ಸಾಧಿಸುವ ಮೂಲಕ ಸಮಾಜವಾದಿ ಸಮಾಜ ಸ್ಥಾಪಿಸಲ್ಪಟ್ಟಿತು. ರಷ್ಯಾದ ಅಕ್ಟೋಬರ್ ಕ್ರಾಂತಿಯು, ಜಗತ್ತಿನಲ್ಲಿ ಅದುವರೆಗೆ ಶ್ರಮಿಕ ವರ್ಗ ಶೋಷಕ ವರ್ಗದ ವಿರುದ್ಧ ನಡೆಸಿದ ನೂರಾರು ಕ್ರಾಂತಿಗಳ ಪ್ರತಿಫಲವೇ ಆಗಿದೆ.

ಆ ಕಾಲ ಘಟ್ಟದಲ್ಲಿ ಯುರೋಪ್ ದೇಶಗಳ ಕಾರ್ಮಿಕ ವರ್ಗ ತನ್ನ ಅಂತರ್ರಾಷ್ಟ್ರೀಯತೆಯನ್ನು ಮರೆತು ರಾಷ್ಟ್ರೀಯ ಬಂಡವಾಳಶಾಹಿಗಳ ಜೊತೆ ರಾಜಿ ಮಾಡಿಕೊಂಡು ಅಲ್ಲಿ ಸಮಾಜವಾದಿ ಕ್ರಾಂತಿ ನಡೆಸುವ ತನ್ನ ಚಾರಿತ್ರಿಕ ಕರ್ತವ್ಯದಿಂದ ವಿಮುಖವಾದುದನ್ನು ಲೆನಿನ್ ಕಟುವಾಗಿ ಖಂಡಿಸಿದರು. ಬಂಡವಾಳಶಾಹಿಯು ಸಾಮ್ರಾಜ್ಯಶಾಹಿಯು ಬೆಳೆದು ಬಂದುದರಿಂದಲೂ, ಬಂಡವಾಳಶಾಹಿ ದೇಶಗಳ ಕಾರ್ಮಿಕ ವರ್ಗ ನಿರ್ಣಾಯಕ ಕಾಲ ಘಟ್ಟದಲ್ಲಿ ತನ್ನ ಕ್ರಾಂತಿಕಾರಕ ಕರ್ತವ್ಯದಿಂದ ವಿಮುಖವಾದುದರಿಂದಲೂ ಮಾರ್ಕ್ಸ್ ಎಂಗೆಲ್ಸ್ ನಿರೀಕ್ಷಿಸಿದಂತೆ ಈ ದೇಶಗಳಲ್ಲಿ ಸಮಾಜವಾದಿ ಕ್ರಾಂತಿಯು ನಡೆಯದೆ ದೂರ ಸರಿಯುವಂತಾಯಿತು.

ಅಕ್ಟೋಬರ್ ಕ್ರಾಂತಿಯ ವಿಜಯದ ನಂತರ ಝಾರ್ ನ ತುಳಿತಕ್ಕೆ ಒಳಗಾದ ರಷ್ಯಾದ ಸುತ್ತಮುತ್ತಲಿನ ಏಷ್ಯಾ ಮೂಲದ ರಾಷ್ಟ್ರಗಳಿಗೆ ಲೆನಿನ್ ಸ್ವಾತಂತ್ರ್ಯ, ಸ್ವಾಯತ್ತತೆ ಘೋಷಿಸಿದರು. ಅವುಗಳು ಸ್ವಯಂ ಪ್ರೇರಣೆಯಿಂದ ಸಮಾನತೆಯ ಗೌರವದಿಂದ ಸೋವಿಯೆತ್ ಒಕ್ಕೂಟಕ್ಕೆ ಸೇರುವಂತೆ ಮಾಡಿದರು. ಸಾಮ್ರಾಜ್ಯಶಾಹಿ ರಾಷ್ಟ್ರಗಳು ನೂತನ ಸೋವಿಯೆತ್ ಒಕ್ಕೂಟದ ಮೇಲೆ ಹೊರಗಿನಿಂದ ಮತ್ತು ಒಳಗಿನಿಂದ ನಡೆಸಿದ ದೀರ್ಘಕಾಲದ ಯುದ್ಧವನ್ನು (1918-21) ಹಿಮ್ಮೆಟ್ಟಿಸಿ ಶಾಂತಿ ಸ್ಥಾಪಿಸಿದರು. ಆಗಿನ ಅತಿ ಕೇಂದ್ರೀಕೃತ 'ಯುದ್ಧಕಾಲದ ಕಮ್ಯುನಿಸಂ'ನ ಆರ್ಥಿಕ ವ್ಯವಸ್ಥೆಯನ್ನು ಕ್ರಮೇಣ ಮಾರುಕಟ್ಟೆ ಆಧಾರಿತ ಹೊಸ ಆರ್ಥಿಕ ನೀತಿಯ ಮೂಲಕ ಪರಿವರ್ತಿಸಿದರು. ಯುದ್ಧಕಾಲದಲ್ಲಿ ರೈತರು ತಮಗೆ ಅಗತ್ಯವಾದುದಕ್ಕಿಂತ ಹೆಚ್ಚಿನ ಕೃಷಿ ಉತ್ಪನ್ನಗಳನ್ನು ಸರ್ಕಾರಕ್ಕೆ ಕಡ್ಡಾಯವಾಗಿ ಸಲ್ಲಿಸಬೇಕಾಗಿತ್ತು. ಆದರೆ ಹೊಸ ಆರ್ಥಿಕ ನೀತಿಯಲ್ಲಿ ರೈತರು ಆಹಾರ ಧಾನ್ಯಗಳ ರೂಪದಲ್ಲಿ ನಿಶ್ಚಿತ ತೆರಿಗೆ ನೀಡಿದ ನಂತರ ಉಳಿದ ಉತ್ಪನ್ನಗಳನ್ನು ಮಾರುಕಟ್ಟೆಯಲ್ಲಿ ವಿಕ್ರಯಿಸುವ ಅವಕಾಶ ನೀಡಲಾಯಿತು. ಇದರಿಂದ ಕೃಷಿ ಉತ್ಪಾದನೆಗಳಿಗೆ ವಿಶೇಷ ಪ್ರೋತ್ಸಾಹ ದೊರಕಿತು. ಕೈಗಾರಿಕೆಗಳಿಗೆ ಬೇಕಾದ ಕಚ್ಚಾ ಸಾಮಗ್ರಿಗಳು ಧಾರಾಳವಾಗಿ ಸಿಗುವಂತಾಯಿತು. ಕೃಷಿ ಕ್ಷೇತ್ರದಲ್ಲಿ ಸಮಾಜವಾದಿ ಉತ್ಪಾದನಾ ಸಂಬಂಧ ಸ್ಥಾಪಿಸಲು ದೀರ್ಘಕಾಲದ ಸಂಯಮದ ಪ್ರಯತ್ನ ಅಗತ್ಯವೆಂದು ಲೆನಿನ್ ಮನಗಂಡು ಮಧ್ಯಂತರ ಕಾಲಕ್ಕೆ ಸಕಾಲದಲ್ಲಿಯೇ ಹೊಸ ಆರ್ಥಿಕ ನೀತಿಯ ಮೂಲಕ ಸುಧಾರಣೆ ಜ್ಯಾರಿಗೊಳಿಸಿದರು. ಅನತಿ ಕಾಲದಲ್ಲಿಯೇ ಅತ್ಯಂತ ಹಿಂದುಳಿದ ಸೋವಿಯೆತ್ ಒಕ್ಕೂಟ ಅಭಿವೃದ್ಧಿ ಹೊಂದಿದ ಸಂಪತ್‌ಭರಿತ, ಬಡತನ-ನಿರುದ್ಯೋಗ-ಅಸಮಾನತೆ-ಶೋಷಣೆ ಇಲ್ಲದ ಹೊಸ ನಾಗರಿಕ ಸಮಾಜವಾಗಿ ಪರಿವರ್ತನೆಗೊಂಡಿತು. ಈ ಬೆಳವಣಿಗೆಯನ್ನು ಇಂಗ್ಲೆಂಡಿನ ಮಾರ್ಕ್ಸ್‌ವಾದಿ ಲೆನಿನ್‌ವಾದಿಗಳಲ್ಲೂ ಪ್ರಪಂಚದಲ್ಲಿಯೇ ಅತ್ಯಂತ ಗೌರವಾನ್ವಿತ ಇಬ್ಬರು ಲೇಖಕರಾದ ಸಿಡ್ನಿ ಮತ್ತು ಬೀಟ್ರೀಸ್ ವೆಬ್ ಅವರು ತಮ್ಮ 'ಸೋವಿಯೆತ್ ಕಮ್ಯುನಿಸಂ ಹೊಸ ನಾಗರಿಕತೆ' ಎಂಬ ಬೃಹತ್ ಗ್ರಂಥದಲ್ಲಿ ವಿವರಿಸಿದ್ದಾರೆ.

"ರಾಜ್ಯ ಮತ್ತು ಕ್ರಾಂತಿ" ಎಡ ಪಂಥೀಯ ಕಮ್ಯುನಿಸಂ ಬಾಲಿಷ ಅಂಗವಿಕಲತೆ

ರಾಜ್ಯ ವ್ಯವಸ್ಥೆಯ ಕುರಿತು ಮಾರ್ಕ್ಸ್ ಸಿದ್ಧಾಂತವನ್ನು, ಕ್ರಾಂತಿಯಲ್ಲಿ ಶ್ರಮಿಕ ವರ್ಗದ ಕರ್ತವ್ಯಗಳನ್ನು ಲೆನಿನ್ 1918ರಲ್ಲಿ ತನ್ನ 'ರಾಜ್ಯ ಮತ್ತು ಕ್ರಾಂತಿ' ಎಂಬ ಗ್ರಂಥದಲ್ಲಿ ವಿವರಿಸಿದ್ದಾರೆ. ಮಾರ್ಕ್ಸ್, ಎಂಗೆಲ್ಸ್, ಇದುವರೆಗಿನ ರಾಜ್ಯ ವ್ಯವಸ್ಥೆಗಳೆಲ್ಲವೂ ಬಹುಸಂಖ್ಯಾತ ಶ್ರಮಿಕ ವರ್ಗದ ಮೇಲಿನ ಅಲ್ಪಸಂಖ್ಯಾತ ಭೂಮಾಲಿಕ-ಬಂಡವಾಳಶಾಹಿ ಶೋಷಕ ವರ್ಗದ ಸರ್ವಾಧಿಕಾರವೇ ಆಗಿರುವುದೆಂದು ವಿಶ್ಲೇಷಿಸಿದರು. ಕ್ರಾಂತಿಯ ನಂತರ, ಬಂಡವಾಳಶಾಹಿ ಸಮಾಜದಿಂದ ಸಮಾಜವಾದಿ ಸಮಾಜ ಸ್ಥಾಪನೆಯ ಮಧ್ಯಂತರ ಪರ್ವ ಕಾಲದಲ್ಲಿ ರಾಜ್ಯ ವ್ಯವಸ್ಥೆಯು ಅದೇ ಅಲ್ಪಸಂಖ್ಯಾತ ಶೋಷಕ ವರ್ಗದ ಮೇಲಿನ ಬಹು ಸಂಖ್ಯಾತ ಶ್ರಮಿಕ ವರ್ಗದ ಸರ್ವಾಧಿಕಾರ ಸ್ಥಾಪಿಸುವ ಅನಿವಾರ್ಯತೆಯನ್ನು ಅವರು ಪ್ರತಿಪಾದಿಸಿದ್ದರು. ಲೆನಿನ್, ಈ ಸಿದ್ಧಾಂತದವನ್ನೇ ಮುಂದುವರೆಸಿ, ಅಕ್ಟೋಬರ್ ಕ್ರಾಂತಿಯ ನಂತರದ ವಾಸ್ತವಿಕ ಪರಿಸ್ಥಿತಿಯಲ್ಲಿ ಕಾರ್ಯರೂಪಕ್ಕೆ ತಂದರು. ಶ್ರಮಿಕ ವರ್ಗ ಕೇವಲ ವರ್ಗ ಹೋರಾಟ ನಡೆಸಿದರೆ ಸಾಲದು, ಅದರ ಪ್ರತಿಫಲವಾಗಿ ಕೈಗೂಡಿದ ಕ್ರಾಂತಿಯ ರಕ್ಷಣೆಗೆ ಮತ್ತು ಅಂತಿಮ ಗುರಿ ಸಾಧನೆಗೆ ಶ್ರಮಿಕ ವರ್ಗದ ಸರ್ವಾಧಿಕಾರ ಅಗತ್ಯವೆಂದು ಪ್ರತ್ಯಕ್ಷ ಅನುಭವಗಳಿಂದ ಸಾಬೀತು ಪಡಿಸಿದರು. "ಶ್ರಮಿಕ ವರ್ಗದ ಸರ್ವಾಧಿಕಾರ"ವನ್ನು ಬಂಡವಾಳಶಾಹಿಗಳು ಟೀಕಿಸಿದ್ದಾರೆ. ಅವಹೇಳನ ಮಾಡುತ್ತಿದ್ದಾರೆ. ಆದರೆ ನೂತನ ರಾಜ್ಯ ವ್ಯವಸ್ಥೆಯಲ್ಲಿ ಇದು ತನಕ ಶೋಷಕ ವರ್ಗದಿಂದ ವಂಚಿತರಾದ ಬಹುಸಂಖ್ಯಾತ ಶ್ರಮಿಕ ವರ್ಗಕ್ಕೆ ಪ್ರಜಾಪ್ರಭುತ್ವವನ್ನು ವಿಸ್ತರಿಸುವುದೇ ಆಗಿದೆ. ಎಂಬುದನ್ನು ಮರೆಮಾಚಲಾಗುತ್ತಿದೆ. ಸಮಾಜವಾದಿ ಕ್ರಾಂತಿಯ ಯಶಸ್ಸಿಗೂ, ಸಮಾಜವಾದಿ ಸಮಾಜದ ಸ್ಥಾಪನೆಗೂ ಕಾರ್ಮಿಕ-ರೈತರ ನಡುವಿನ ಅದಮ್ಯ ಸಖ್ಯತೆ ಹಾಗೂ ಐಕ್ಯತೆಯ ಅಗತ್ಯತೆಯನ್ನು ಈ ಗ್ರಂಥದಲ್ಲಿ ಒತ್ತಿ ಹೇಳಲಾಗಿದೆ.

ಸಮಾಜವಾದಿ ಕ್ರಾಂತಿಯ ಮೊದಲು ಬಲ ಪರಿಷ್ಕರಣವಾದಿಗಳು, ಮೆನ್‌ಶೆವಿಕರು ಹಳೆಯ ಬಂಡವಾಳಶಾಹಿ ಪ್ರಭುತ್ವದ ಸಂಸದೀಯ ವ್ಯವಸ್ಥೆಯಲ್ಲಿ ಭ್ರಮಾತ್ಮಕ ವಿಶ್ವಾಸವನ್ನಿಟ್ಟುಕೊಂಡು, ಕ್ರಾಂತಿಯ ಘಟ್ಟದ ಹೊಸ ಸಂಘಟನಾ ನಮೂನೆಗಳನ್ನು ಗುರುತಿಸಲು ವಿಫಲರಾದರು. ಕ್ರಾಂತಿಯ ನಂತರ ಎಡಪಂಥೀಯ ಕಮ್ಯುನಿಸ್ಟರು ಹಿಂದಿನ ಸಂಘಟನಾ ನಮೂನೆಗಳೆಲ್ಲವನ್ನೂ ಸಾರಾಸಗಟು ತಿರಸ್ಕರಿಸಿದರು. "ಶ್ರಮಿಕ ವರ್ಗದ ಸರ್ವಾಧಿಕಾರ"ವನ್ನು "ಸಮಸ್ತ ಜನತೆಯ ಸರ್ವಾಧಿಕಾರ" ಎಂದು ತಪ್ಪಾಗಿ ಅರ್ಥೈಸಿದರು. ಕ್ರಾಂತಿಯ ನಂತರ ಶ್ರಮಿಕ ವರ್ಗ ಒಂದೇ ಇರುವುದಲ್ಲ. ದೊಡ್ಡ ಬಂಡವಾಳಶಾಹಿಗಳನ್ನು ಭೂಮಾಲಕರನ್ನು ಅವರ ರಾಜಕೀಯ ಪಕ್ಷಗಳನ್ನು ಕ್ರಾಂತಿಯ ಕಾಲದಲ್ಲಿ ನಿರ್ನಾಮಗೊಳಿಸಿದ್ದರೂ ಮಿಲಿಯಗಟ್ಟಲೆ ಸಣ್ಣ ಪ್ರಮಾಣ ಉತ್ಪಾದಕ ವರ್ಗದ ಹಿತಾಸಕ್ತಿಗಳಿರುವುದನ್ನು, ಅವರ ಮೇಲೆ ದೀರ್ಘ ಕಾಲದ ಶ್ರಮಿಕ ವರ್ಗದ ಸರ್ವಾಧಿಕಾರ ಹಾಗೂ ಸಂಯಮದ ಹೊಂದಾಣಿಕೆಯ ಅನಿವಾರ್ಯತೆಯನ್ನು ಎಡಪಂಥೀಯ ಕಮ್ಯುನಿಸ್ಟರು ಮನಗಾಣುವುದಿಲ್ಲ. ಬದಲು, ಕಾರ್ಮಿಕ ಸಂಘಟನೆಗಳಲ್ಲಿ ಕಮ್ಯುನಿಸ್ಟರು ಕೆಲಸ ಮಾಡುವುದನ್ನು, ಕೊನೆಗೆ ಎಲ್ಲಾ ರಾಜಕೀಯ ಪಕ್ಷಗಳನ್ನು ಇವರು ತಿರಸ್ಕರಿಸುತ್ತಾರೆ. ಇವರ ವಾದವಿವಾದಗಳನ್ನು ಬಾಲಿಷ ಅಂಗವಿಕಲತೆ ಎಂದು ಲೆನಿನ್ ತಮ್ಮ ಈ ಕುರಿತಾದ ಗ್ರಂಥದಲ್ಲಿ ಕಟುವಾಗಿ ಟೀಕಿಸಿದ್ದಾರೆ. ಇವರ ವಾದದಿಂದ ಕಟ್ಟಕಡೆಗೆ ಕಾರ್ಮಿಕ ವರ್ಗ ತಾನು ಕಷ್ಟಪಟ್ಟು ಕಟ್ಟಿ ಬೆಳೆಸಿದ ಕಮ್ಯುನಿಸ್ಟ್ ಪಕ್ಷವನ್ನೇ ಕಳೆದುಕೊಳ್ಳುವ ಅಪಾಯದ ಕುರಿತು ಎಚ್ಚರಿಸಲಾಗಿದೆ. 1920ರಲ್ಲಿ ಈ ಗ್ರಂಥವನ್ನು ಮೂರನೇ ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯದ ಎರಡನೇ ಸಮ್ಮೇಳನಕ್ಕೆ ಸರಿಯಾಗಿ ಪ್ರಕಟಿಸಲಾಯಿತು. ಬಲಪರಿಷ್ಕರಣವಾದ ಮತ್ತುಎಡಪಂಥವಾದ ಕ್ರಾಂತಿಯನ್ನು ಹಿಂಜರಿಸುವ ಪುಟ್ಟ ಬಂಡವಾಳಶಾಹಿಗಳ ರಾಜಕೀಯ ಅಪಭ್ರಂಶದ ಒಂದೇ ನಾಣ್ಯದ ಎರಡು ಮುಖಗಳೆಂದು ಲೆನಿನ್ ಈ ಗ್ರಂಥದಲ್ಲಿ ಸ್ಪಷ್ಟಪಡಿಸಿದ್ದಾರೆ.

ಹೊಸ ಕಮ್ಯುನಿಸ್ಟ ಅಂತರ್ರಾಷ್ಟ್ರೀಯದ ಸ್ಥಾಪನೆ

ಒಂದನೇ ಜಾಗತಿಕ ಯುದ್ಧ ಕಾಲದಲ್ಲಿ ಐರೋಪ್ಯ ದೇಶಗಳ ಸೋಶಿಯಲ್ ಡೆಮಾಕ್ರಟಿಕ್ ಪಕ್ಷಗಳೆಲ್ಲವೂ ತಮ್ಮ ತಮ್ಮ ಬಂಡವಾಳಶಾಹಿಗಳೊಂದಿಗೆ ರಾಜಿ ಮಾಡಿಕೊಂಡು ತಮ್ಮ ಕ್ರಾಂತಿಕಾರಕತೆಯನ್ನು ಕಳೆದುಕೊಂಡು, ಎಂಗೆಲ್ಸ್ ಸ್ಥಾಪಿಸಿದ ಎರಡನೇ ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯವನ್ನು ಪೂರ್ಣ ನಿಷ್ಕ್ರಿಯಗೊಳಿಸಿದ್ದರು. ಅಕ್ಟೋಬರ್ ಕ್ರಾಂತಿಯ ನಂತರ, ಮಾರ್ಕ್ಸ್ ಎಂಗೆಲ್ಸ್ ಅವರ ಸಿದ್ಧಾಂತದ ಕ್ರಿಯಾಶೀಲತೆಯನ್ನು ಉಳಿಸಿ ಬೆಳೆಸಲು ಮೂರನೇ ಕಮ್ಯುನಿಸ್ಟ್ ಅಂತರ್ರಾಷ್ಟ್ರೀಯವನ್ನು ಲೆನಿನ್ ಹೊಸತಾಗಿ ಸ್ಥಾಪಿಸಿದರು. ಅದರ ಮೊದಲನೇ ಅಧಿವೇಶನ 1919ರಲ್ಲಿ ಮಾಸ್ಕೋದಲ್ಲಿ ನಡೆಯಿತು. ಈ ವೇದಿಕೆಯ ಮೂಲಕ ಅಭಿವೃದ್ಧಿ ಹೊಂದಿದ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಕಮ್ಯುನಿಸ್ಟ್ ಪಕ್ಷಗಳನ್ನು ಪುನರ್ ಸಂಘಟಿಸಿ,ಅವುಗಳು ಮುಂಬರುವ ಸವಾಲುಗಳನ್ನು ಎದುರಿಸುವಂತೆ ಲೆನಿನ್ ಅಣಿನೆರೆಸಿದರು. ಭಾರತವೂ ಸೇರಿದಂತೆ ನೂರಾರು ವಸಾಹತು ದೇಶಗಳಲ್ಲಿ ಸಾಮ್ರಾಜ್ಯಶಾಹಿಗಳನ್ನು ಹಿಮ್ಮೆಟ್ಟಿಸಲು, ಆ ದೇಶಗಳಲ್ಲಿ ಕಮ್ಯುನಿಸ್ಟ್ ಪಕ್ಷಗಳನ್ನು ಕಟ್ಟಿಬೆಳೆಸಲು,ಉದಯೋನ್ಮುಖ ರಾಷ್ಟ್ರೀಯ ಬಂಡವಾಳಶಾಹಿಗಳ ಜೊತೆಗೂಡಿ ಶ್ರಮಿಸಿ, ರಾಷ್ಟ್ರೀಯ ವಿಮೋಚನಾಹೋರಾಟಗಳನ್ನು ಯಶಸ್ವಿಗೊಳಿಸಲು, ಅಂತಿಮವಾಗಿ ಸಮಾಜವಾದಿ ಸಮಾಜ ಸ್ಥಾಪಿಸಲು ಲೆನಿನ್ ಉತ್ತಮ ಮಾರ್ಗದರ್ಶನ ನೀಡಿದರು. ಸೋವಿಯೆತ್ ಒಕ್ಕೂಟದ ಪ್ರಥಮ ಸಮಾಜವಾದಿ ಸಮಾಜವನ್ನು ಜಗತ್ತಿನ ಎಲ್ಲಾ ಶ್ರಮಿಕ ವರ್ಗ, ಪ್ರಜಾಪ್ರಭುತ್ವವಾದಿ ಹಾಗೂ ಪುರೋಗಾಮಿ ಶಕ್ತಿಗಳು ಬೆಂಬಲಿಸಿ ರಕ್ಷಿಸುವಂತೆ ಮಾಡಿದರು. ಶ್ರಮಿಕ ವರ್ಗದ ಅಂತರ್ರಾಷ್ಟ್ರೀಯತೆಯನ್ನು ಎತ್ತಿ ಹಿಡಿದರು.

ಅಕ್ಟೋಬರ್ ಕ್ರಾಂತಿಯಿಂದ ಲೆನಿನ್ ರ ಬೋಧನೆಗಳಿಂದ ಮತ್ತು ಸಾಧನೆಗಳಿಂದ ಭಾರತದಲ್ಲಿ ವಿವೇಕಾನಂದ, ಬಾಲ ಗಂಗಾಧರ ತಿಲಕ್, ಗಣೇಶ ಶಂಕರ ವಿದ್ಯಾರ್ಥಿ, ಭಗತ್ ಸಿಂಗ್, ಜವಾಹರ ಲಾಲ್ ನೆಹರು, ಸುಭಾಷ್ ಚಂದ್ರ ಬೋಸ್, ಮುಂತಾದ ರಾಷ್ಟ್ರೀಯ ನಾಯಕರು ಸ್ಫೂರ್ತಿ ಪಡೆದು ಸ್ವಾತಂತ್ರ್ಯ ಹೋರಾಟವನ್ನು ಹರಿತಗೊಳಿಸಿದರು. ಜೊತೆಗೆ, ಭಾರತದಲ್ಲಿ ಕಾರ್ಮಿಕರ-ರೈತರ ಸಂಘಟನೆಗಳು ಮತ್ತು ಅವರ ಕಮ್ಯುನಿಸ್ಟ್ ಪಕ್ಷವೂ ಬೆಳೆದು ಬಂದು, ಸ್ವಾತಂತ್ರ್ಯ ಹೋರಾಟದಲ್ಲಿ ತ್ಯಾಗ ಬಲಿದಾನಗಳಿಂದ ಗಣನೀಯ ಪಾತ್ರ ವಹಿಸುವಂತಾಯಿತು. ಈ ಶತಮಾನದ ಆರಂಭದ ದಶಕದಲ್ಲಿ ತಿಲಕರನ್ನು ಬ್ರಿಟಿಷರು ದಸ್ತಗಿರಿ ಮಾಡಿದುದರ ವಿರುದ್ಧ ಬೊಂಬಾಯಿ ಗಿರಣಿ ಕಾರ್ಮಿಕರು ನಡೆಸಿದ ಪ್ರಥಮ ರಾಜಕೀಯ ಮುಷ್ಕರಕ್ಕೆ ಲೆನಿನ್ ತಮ್ಮ ಅಪಾರ ಮೆಚ್ಚುಗೆ ವ್ಯಕ್ತಪಡಿಸಿದುದು ಅವಿಸ್ಮರಣೀಯವಾಗಿದೆ.

ಮಾರ್ಕ್ಸ್‌ವಾದ-ಲೆನಿನ್‌ವಾದ: ಸಮಾಜವಾದ ಕ್ರಾಂತಿಕಾರಕ ಪರಿವರ್ತನೆಯ ವಿಜ್ಞಾನ

ಮಾರ್ಕ್ಸ್‌ವಾದವನ್ನು ಲೆನಿನ್ ಸೈದ್ಧಾಂತಿಕವಾಗಿ ಮತ್ತು ಕಾರ್ಯಾಚರಣೆಯ ಮೂಲಕ ಶ್ರೀಮಂತಗೊಳಿಸಿ ಪೂರ್ಣಗೊಳಿಸಿದರು. ಆದುದರಿಂದಲೇ ಸಮಾಜದ ಕ್ರಾಂತಿಕಾರಕ ಪರಿವರ್ತನೆಯ ವಿಜ್ಞಾನವನ್ನು, ವೈಜ್ಞಾನಿಕ ಸಮಾಜವಾದವನ್ನು "ಮಾರ್ಕ್ಸ್‌ವಾದ-ಲೆನಿನ್‌ವಾದ" ಎಂದೇ ಗುರುತಿಸಲಾಗಿದೆ. ಲೆನಿನ್ ರ ನಂತರ ಸೋವಿಯೆತ್ ಒಕ್ಕೂಟದಲ್ಲಿ ಸಮಾಜವಾದದ ಅದ್ಭುತ ಬೆಳವಣಿಗೆ, ಎರಡನೇ ಜಾಗತಿಕ ಯುದ್ಧದಲ್ಲಿ ಫ್ಯಾಸಿಸಂನ ಮೇಲೆ ಸಾಧಿಸಿದ ವಿಜಯದ ಪೂರ್ವ ಯುರೋಪಿನ ದೇಶಗಳಲ್ಲಿ ಸಮಾಜವಾದದ ಸ್ಥಾಪನೆ, ಚೀನಾ, ಉತ್ತರ ಕೊರಿಯಾ, ವಿಯೆಟ್ನಾಂ, ಕ್ಯೂಬಾಮುಂತಾದ ದೇಶಗಳಲ್ಲಿ ಸಾಮ್ರಾಜ್ಯಶಾಹಿಗಳನ್ನು, ದೇಶೀಯ ಬಂಡವಾಳಶಾಹಿ-ಭೂಮಾಲಕರನ್ನು ಹಿಮ್ಮೆಟ್ಟಿಸಿ ಜನತಾ ಪ್ರಜಾಪ್ರಭುತ್ವ ಸ್ಥಾಪನೆ, ಭಾರತವೂ ಸೇರಿದಂತೆ ನೂರಾರು ವಸಾಹತುಗಳಲ್ಲಿ ರಾಷ್ಟ್ರೀಯ ವಿಮೋಚನಾ ಹೋರಾಟಗಳ ವಿಜಯ, ಸಾಮ್ರಾಜ್ಯಶಾಹಿಗಳ ಮುನ್ನುಗ್ಗುವಿಕೆ ತೀವ್ರ ತಡೆ, ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಪ್ರಜಾಪ್ರಭುತ್ವ ಹಕ್ಕುಗಳಿಗಾಗಿ ಕಾರ್ಮಿಕ ವರ್ಗ ನಡೆಸಿದ ನೂರಾರು ಹೋರಾಟಗಳ ವಿಜಯ, ಇತ್ಯಾದಿ ಆಯಾಯ ದೇಶಗಳ ಹಾಗೂ ಜಾಗತಿಕ ವಾಸ್ತವಿಕ ಪರಿಸ್ಥಿತಿಗಳ ಅಧ್ಯಯನ ನಡೆಸಿ, ಅವುಗಳಿಗೆ ಮಾರ್ಕ್ಸ್‌ವಾದ-ಲೆನಿನ್‌ವಾದವನ್ನು ಸೃಜನಾತ್ಮಕವಾಗಿ ಅನ್ವಯಿಸಿದುದರ ಪ್ರತಿಫಲವೇ ಆಗಿವೆ.

ಇತ್ತೀಚಿಗೆ ಸಮಾಜವಾದಕ್ಕೆ ಸೋವಿಯೆತ್ ಒಕ್ಕೂಟದಲ್ಲಿ ಹಾಗೂ ಪೂರ್ವ ಯುರೋಪ್ ನಲ್ಲಿ ಸಂಭವಿಸಿದ ತೀವ್ರ ಹಿನ್ನಡೆಗೆ ಮಾರ್ಕ್ಸ್‌ವಾದ-ಲೆನಿನ್‌ವಾದದ ಅನುಷ್ಠಾನದಲ್ಲಿನ ನ್ಯೂನತೆಗಳು, ಹೊಸ ಸವಾಲುಗಳನ್ನು ಎದುರಿಸಲು ಸಕಾಲಕ್ಕೆ ಸುಧಾರಣಾ ಕ್ರಮಗಳನ್ನು ಕೈಗೊಳ್ಳದಿರುವುದು ಕಾರಣಗಳಾಗಿವೆಯೇ ಹೊರತು ಆ ವಿಜ್ಞಾನದ ದೋಷವಲ್ಲ. ಮಾನವ ಸಮಾಜವಾದ ವಿಕಾಸದ ಇತಿಹಾಸದಲ್ಲಿ ಅರಾಜಕತೆಯ ವೈರುಧ್ಯತೆಯ, ಅಸಮಾನತೆಯ, ಶೋಷಣೆಯ, ಬಂಡವಾಳಶಾಹಿ-ಸಾಮ್ರಾಜ್ಯಶಾಹಿ ವ್ಯವಸ್ಥೆಯೇ ಅಂತಿಮವಾಗಲಾರದು. 70 ದಿನಗಳ ಪ್ಯಾರೀಸ್ ಕೋಮ್ಯೂನ, 70 ವರ್ಷಗಳ ಸೋವಿಯೆತ್ ಒಕ್ಕೂಟದ ಸಮಾಜವಾದ, ನಾಲ್ಕೈದು ದಶಕಗಳ ಪೂರ್ವ ಯುರೋಪಿನ ಸಮಾಜವಾದ ಮತ್ತು ಚೀನಾ, ಉತ್ತರ ಕೊರಿಯಾ, ವಿಯೆಟ್ನಾಂ, ಕ್ಯೂಬಾ ದೇಶಗಳಲ್ಲಿ ಮುಂದುವರೆಯುತ್ತಿರುವ ಸುಧಾರಿತ ಸಮಾಜವಾದ, ದಕ್ಷಿಣಾ ಆಫ್ರಿಕಾದಲ್ಲಿ ವರ್ಣ ನೀತಿಯ ವಿರುದ್ಧ ವಿಜಯ, ರಾಷ್ಟ್ರೀಯ ಹಾಗೂ ಅಂತರ್ರಾಷ್ಟ್ರೀಯ ಮಟ್ಟಗಳಲ್ಲಿ ನಡೆಯುತ್ತಿರುವ ನಿರಂತರ ಹೋರಾಟಗಳು, 109 ವರ್ಷಗಳ ಅಂತರ್ರಾಷ್ಟ್ರೀಯ ಮೇ ದಿನಾಚರಣೆ ಇತ್ಯಾದಿ ಬಂಡವಾಳಶಾಹಿ-ಸಾಮ್ರಾಜ್ಯಶಾಹಿ ವ್ಯವಸ್ಥೆಯನ್ನು ಕಿತ್ತೊಗೆದು ಸಮಾನತೆಯ, ಸಮೃದ್ಧಿಯ, ಸುಖ ಶಾಂತಿಯ ಸಮಾಜವಾದಿ ಸಮಾಜದ ಸ್ಥಾಪನೆಯ ಗುರಿಯತ್ತ ಮುನ್ನಡೆಯೇ ಆಗಿದೆ ಎಂದು ಭರವಸೆ ಪಡಬಹುದು.

ಮಾರ್ಕ್ಸ್, ಎಂಗೆಲ್ಸ್, ಲೆನಿನ್ ಅವರ ಬೋಧನೆಗಳನ್ನು ಕೇವಲ ಗಿಳಿಪಾಠ ಮಾಡುವುದಲ್ಲ. ಅವುಗಳು ಪ್ರಶ್ನಾತೀತ ಡಾಗ್ಮಗಳಲ್ಲ, ಹಠವಾದಗಳಲ್ಲ. ಅವುಗಳು ಸಮಾಜದ ಕ್ರಾಂತಿಕಾರಕ ಪರಿವರ್ತನೆಯ ವೈಜ್ಞಾನಿಕ ವಿಧಾನಗಳಾಗಿವೆ; ಉಜ್ವಲ ದಾರಿದೀಪಗಳಾಗಿವೆ. ಈ ದಿಸೆಯಲ್ಲಿ ಲೆನಿನ್‌ರ ಸರಳತೆ, ಕಷ್ಟ ಸಹಿಷ್ಣುತೆ, ಅಧ್ಯಯನ ಶೀಲತೆ, ಕಠಿಣ ಶಿಸ್ತು, ನಿರಂತರ ಪರಿಶ್ರಮ, ಪ್ರಖರ ವಿಶ್ಲೇಷಣೆ, ತಪ್ಪು ಒಪ್ಪಿಗೆ, ಸಕಾಲದಲ್ಲಿ ತಿದ್ದುಪಡಿ ಮಾಡಿಕೊಂಡು ಗುರಿ ಸಾಧನೆಯತ್ತ ಮುನ್ನಡೆ, ಶ್ರಮಿಕ ವರ್ಗದ ಮೇಲಿನ ಅಚಲ ವಿಶ್ವಾಸ ಮಾರ್ಕ್ಸ್ ವಾದದ ರಕ್ಷಣೆ, ಶೋಷಕರಿಗೆ ಸಿಂಹಪ್ರಾಯವಾಗಿರುವುದು. ಇತ್ಯಾದಿ ನಮಗೆ ಉತ್ತಮ ಮಾರ್ಗದರ್ಶನಗಳಾಗಲಿವೆ.

ಲೆನಿನ್‌ವಾದವು ವಿಮೋಚನಾ ಹೋರಾಟಗಳಿಗೆ ಪ್ರೇರಕ ಶಕ್ತಿ

-ಪಿ.ರಾಮಚಂದ್ರನ್

ಹುಬ್ಬಳ್ಳಿ: ಲೆನಿನ್ ವಿಚಾರಧಾರೆಯು ಜಗತ್ತಿನಾದ್ಯಂತ ಬಂಡವಾಳಶಾಹಿ ಸುಲಿಗೆಯ ವಿರುದ್ಧ ಸಾಮ್ರಾಜ್ಯಶಾಹಿ ಕ್ರೌರ್ಯದ ವಿರುದ್ಧ, ಎಲ್ಲಾ ವಿಧದ ಅನ್ಯಾಯ ಅಸಮಾನತೆಗಳ ವಿರುದ್ಧ, ಶೋಷಿತ ಜನತೆ ನಡೆಸುತ್ತಿರುವ ವಿಮೋಚನಾ ಹೋರಾಟಗಳಿಗೆ ಇಂದಿಗೂ ಪ್ರೇರಕ ಶಕ್ತಿಯಾಗಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಕಾಂ.ಪಿ.ರಾಮಚಂದ್ರನ್ ಹೇಳಿದರು.

ಅವರು 1917ರಲ್ಲಿ ರಷ್ಯಾದಲ್ಲಿ ನಡೆದ ಪ್ರಥಮ ಸಮಾಜವಾದಿ ಕ್ರಾಂತಿಯ ನೇತಾರ ಲೇನಿನ್‌ರ 125ನೇ ಜನ್ಮ ವಾರ್ಷಿಕೋತ್ಸವದ ಅಂಗವಾಗಿ ಇಲ್ಲಿ ಇತ್ತೀಚೆಗೆ ಏರ್ಪಡಿಸಲಾದ ಅಧ್ಯಯನ ಶಿಬಿರದಲ್ಲಿ ಮುಖ್ಯ ಉಪನ್ಯಾಸಕರಾಗಿ ಮಾತನಾಡುತ್ತಿದ್ದರು. ಬಂಡವಾಳಶಾಹಿವ್ಯವಸ್ಥೆಯು ಸಾಮ್ರಾಜ್ಯಶಾಹಿಯಾಗಿ ಬೆಳೆದುಬಂದ ಹೊಸ ಕಾಲಘಟ್ಟದಲ್ಲಿ ರಷ್ಯಾದ ಮತ್ತು ಜಾಗತಿಕ ವಾಸ್ತವಿಕ ಪರಿಸ್ಥಿತಿಗಳನ್ನು ಲೆನಿನ್ ಅಧ್ಯಯನ ಮಾಡಿ, ಮಾರ್ಕ್ಸ್‌ವಾದವನ್ನು ಸೃಜನಾತ್ಮಕವಾಗಿ ಅನ್ವಯಿಸಿ ಅದನ್ನು ಇನ್ನಷ್ಟೂ ಶ್ರೀಮಂತಗೊಳಿಸಿದರೆಂದು ಅವರು ನೆನಪಿಸಿಕೊಟ್ಟರು.

ಸಮಾಜವಾದದ ಹಿನ್ನಡೆಯ ನಂತರವೂ ಭಾರತದಲ್ಲಿ ಸಿಪಿಐ(ಎಂ) 1992ರಲ್ಲಿ ಮದ್ರಾಸಿನಲ್ಲಿ ನಡೆದ ತನ್ನ 14ನೇ ಸಮ್ಮೇಳನದಲ್ಲಿ ಮಾರ್ಕ್ಸ್‌ವಾದ-ಲೆನಿನ್‌ವಾದದಲ್ಲಿ ಅಚಲ ವಿಶ್ವಾಸವನ್ನು ವ್ಯಕ್ತಪಡಿಸಿರುವುದು, ನಂತರ 1993ರಲ್ಲಿ ಕಲ್ಕತ್ತದಲ್ಲಿ ಸಿಪಿಐ(ಎಂ)ನ ನೇತೃತ್ವದಲ್ಲಿ ನಡೆದ ಅಂತರ್ರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಮಾರ್ಕ್ಸ್‌ವಾದ-ಲೆನಿನ್‌ವಾದದ ಪ್ರಸ್ತುತತೆಯನ್ನು ಸಮರ್ಥಿಸಿರುವುದು, 1995ರಲ್ಲಿ ಚಂಡೀಗಢದಲ್ಲಿ ನಡೆದ ಸಿಪಿಐ(ಎಂ)ನ 15ನೇ ಸಮ್ಮೇಳನದಲ್ಲಿ 20 ದೇಶಗಳ ಕಮ್ಯುನಿಸ್ಟ್ ಪಕ್ಷಗಳು ಭಾಗವಹಿಸಿ ಸೌಹಾರ್ದತೆ ವ್ಯಕ್ತಪಡಿಸಿರುವುದು ಮತ್ತು ಭಾರತದ ರಾಜಕೀಯದಲ್ಲಿ ಸಿಪಿಐ(ಎಂ) ಎಡ, ಪ್ರಜಾಪ್ರಭುತ್ವವಾದಿ, ಜಾತ್ಯಾತೀತ ಶಕ್ತಿಗಳನ್ನು ಒಗ್ಗೂಡಿಸಿ ಕಾಂಗ್ರೆಸ್ ಸರಕಾರದ ಜನವಿರೋಧಿ ನೀತಿಗಳ ವಿರುದ್ಧ ನಿರ್ಣಾಯಕ ಹೋರಾಟ ನಡೆಸುತ್ತಿರುವುದು ಅಭಿಮಾನವೆನಿಸುವುದು ಎಂದರು. ಈ ಹಿನ್ನೆಲೆಯಲ್ಲಿ ಭಾರತದಲ್ಲಿ ಕಾರ್ಮಿಕರು ತಮ್ಮ ಹೋರಾಟಗಳನ್ನು ಕೇವಲ ಆರ್ಥಿಕ ಬೇಡಿಕೆಗಳಿಗೆ ಸೀಮಿತಗೊಳಿಸದೆ. ಸಾಮಾಜಿಕ ಪರಿವರ್ತನೆಗಾಗಿ ನಡೆಯುತ್ತಿರುವ ಕ್ರಾಂತಿಕಾರಕ ರಾಜಕೀಯ ಹೋರಾಟಗಳ ಮುಂಚೋಣಿಯಲ್ಲಿರಬೇಕೆಂದು ರಾಮಚಂದ್ರನ್ ಕರೆ ಕೊಟ್ಟರು.

ಅಧ್ಯಯನ ಶಿಬಿರದ ಅಧ್ಯಕ್ಷತೆ ವಹಿಸಿದ್ದ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿಯಾದ ಪಿ. ರಾಮಚಂದ್ರರಾವ್ ಮಾತನಾಡುತ್ತಾ ಎರಡನೇ ಜಾಗತಿಕ ಯುದ್ಧದಲ್ಲಿ ಹಿಟ್ಲರನ ಫ್ಯಾಸಿಸ್ಟ್ ಶಕ್ತಿಗಳ ವಿರುದ್ಧ ಸೋವಿಯತ್ ಒಕ್ಕೂಟ ಸಾಧಿಸಿದ ವಿಜಯ, ನಂತರಪೂರ್ವಯುರೋಪ್, ಚೀನಾ, ಉ.ಕೊರಿಯಾ, ವಿಯೆಟ್ನಾಂ, ಕ್ಯೂಬಾ ದೇಶಗಳಲ್ಲಿ ಜನತಾ ಪ್ರಜಾಪ್ರಭುತ್ವವಾದಿಕ್ರಾಂತಿಗಳ ಮೂಲಕ ಸಮಾಜವಾದಿ ಸಮಾಜ ಸ್ಥಾಪನೆ, ಭಾರತವೂ ಸೇರಿದಂತೆ ನೂರಾರು ವಸಾಹತು ದೇಶಗಳಲ್ಲಿ ಸಾಮ್ರಾಜ್ಯಶಾಹಿಗಳ ವಿರುದ್ಧ ಸ್ವಾತಂತ್ರ ಹೋರಾಟಗಳ ಯಶಸ್ಸು, ಇತ್ಯಾದಿ ಮಾರ್ಕ್ಸ್‌ವಾದ-ಲೆನಿನ್‌ವಾದದ ವಿಜಯಗಳೇ ಆಗಿವೆ ಎಂದರು. ಮಾರ್ಕ್ಸ್‌ವಾದ ಕೇವಲ ಗಿಳಿಪಾಠವಲ್ಲ, ಪುಸ್ತಕದ ಬದನೆಕಾಯಿಯಲ್ಲ, ಸಿದ್ಧಾಂತ ಮತ್ತು ಕಾರ್ಯಾಚರಣೆ ಎರಡನ್ನೂ ವಾಸ್ತವಿಕ ಪರಿಸ್ಥಿತಿಗಳಿಗನುಗುಣವಾಗಿ ಅನ್ವಯಿಸಿ ಕ್ರಾಂತಿಕಾರಕ, ಸಾಮಾಜಿಕ ಪರಿವರ್ತನೆ ಮಾಡಲು ಮಾರ್ಗದರ್ಶಿಯಾಗಿರುವ ವಿಜ್ಞಾನವಾಗಿದೆ ಎಂದರು.

ಪ್ರಾರಂಭದಲ್ಲಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿಯ ಸದಸ್ಯರು, ರಾಜ್ಯ ಸಿಐಟಿಯು ಪ್ರಧಾನ ಕಾರ್ಯದರ್ಶಿಗಳೂ ಆಗಿರುವ ವಿ.ಜೆ.ಕೆ. ನಾಯರ್ ಪ್ರಾಸ್ತಾವಿಕವಾಗಿ ಮಾತನಾಡುತ್ತಾ ಕಾರ್ಮಿಕರ ಆರ್ಥಿಕ ಹೋರಾಟ ಸಮಸ್ಯೆಗಳನ್ನು ಬಿಡಿಬಿಡಿಯಾಗಿ ತಾತ್ಕಾಲಿಕವಾಗಿ ಪರಿಹರಿಸುವಲ್ಲಿ ಸೀಮಿತವಾಗುವುದೆಂದರು. ಅವರ ಕ್ರಾಂತಿಕಾರಕ ರಾಜಕೀಯ ಹೋರಾಟ ಸಮಸ್ಯೆಗಳನ್ನು ಇಡಿಯಾಗಿ ಶಾಶ್ವತವಾಗಿ ಪರಿಹರಿಸುವಲ್ಲಿ ಸಮರ್ಥವಾಗುವುದೆಂದು ತಿಳಿಸಿದರು. ಸಿಪಿಐ(ಎಂ) ಧಾರವಾಡ ಜಿಲ್ಲಾ ಸಮಿತಿಯ ಕಾರ್ಯದರ್ಶಿಗಳಾದ ನಿತ್ಯಾನಂದಸ್ವಾಮಿ ಸ್ವಾಗತಿಸಿದರು. ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರುಗಳಾದ ಸಿ.ಆರ್.ಭಟ್, ಕಾರ್ಯಕ್ರಮ ನಿರ್ವಹಿಸಿದರು. ಎಂ.ಎಚ್‌ಮುಲ್ಲಾ ವಂದಿಸಿದರು. ಅಧ್ಯಯನ ಶಿಬಿರಕ್ಕೆ ಧಾರವಾಡ, ಬೆಳಗಾವಿ, ಉ.ಕನ್ನಡ ಜಿಲ್ಲೆಗಳಿಂದ ಅಧಿಕ ಸಂಖ್ಯೆಯಲ್ಲಿ ಆಸಕ್ತ ಜನರು ಭಾಗವಹಿಸಿದ್ದರು.

ರಾಜಕೀಯ ಪ್ರಚಾರ ಸಪ್ತಾಹ

ಟಿ.ದಾಸರಹಳ್ಳಿ: ಸಿಪಿಐ(ಎಂ)ನ 15ನೇ ಸಮ್ಮೇಳನದ ಕರೆಯಂತೆ ಪಕ್ಷದ ರಾಜಕೀಯ ಪ್ರಚಾರ ಹಾಗೂ ಕಾಂಗ್ರೆಸ್‌ನ ಹೊಸ ಆರ್ಥಿಕ ನೀತಿಯ ಫಲವಾಗಿ ಜನಸಾಮಾನ್ಯರು ಎದುರಿಸುತ್ತಿರುವ ಸಮಸ್ಯೆಗಳನ್ನು ವಿವರಿಸಲು ಹಾಗೂ ಪರ್ಯಾಯ ಎಡಪಕ್ಷಗಳ ಕಾರ್ಯಕ್ರಮಗಳನ್ನು ಜನಸಾಮಾನ್ಯರಿಗೆ ವಿವರಿಸುವಂತೆ ವಾರಾಚರಣೆ ಕಾರ್ಯಕ್ರಮದ ಅಂಗವಾಗಿ ಟಿ.ದಾಸರಹಳ್ಳಿ ಪ್ರದೇಶದಲ್ಲಿ ಜೂನ್ 24 ರಂದು ಬಹಿರಂಗ ಸಭೆ ಹಾಗೂ ಮೆರವಣಿಗೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಸಂಜೆ 6 ಗಂಟೆಗೆ ಜಾಲಹಳ್ಳಿ ವೃತ್ತದಿಂದ ಮೆರವಣಿಗೆ ಹೊರಟು ಪ್ರಶಾಂತ ನಗರದಲ್ಲಿ ಸಾರ್ವಜನಿಕ ಸಭೆಯಾಗಿ ಮಾರ್ಪಟ್ಟಿತು.

ಇದರ ಅಧ್ಯಕ್ಷತೆಯನ್ನು ಪೀಣ್ಯ ಪ್ರದೇಶದ ಸಂಚಾಲಕರಾದ ಕಾಂ. ಎಂ.ಎನ್. ನಂಜರಾಜು ವಹಿಸಿದ್ದರು. ಸಭೆಯ ಮುಖ್ಯ ಭಾಷಣಕಾರರಾಗಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಕಾಂ. ವಿಜೆಕೆ ನಾಯರ್ ಹಾಗೂ ಜಿಲ್ಲಾ ಸಮಿತಿ ಸದಸ್ಯರಾದ ಕಾಂ.ಕೆ.ಎಸ್. ಸುಬ್ರಹ್ಮಣ್ಯ ಹಾಗೂ ಕಾಂ. ಪ್ರಕಾಶ್ ಭಾಗವಹಿಸಿ ಮಾತನಾಡಿದರು. ಈ ಸಭೆಗೆ ಸ್ವಾಗತ ಕಾಂ.ಮೋನಪ್ಪನವರು ಮಾಡಿದ್ದರು ಹಾಗೂ ಕಾಂ. ನಾರಾಯಣಸ್ವಾಮಿಯವರ ವಂದನಾರ್ಪಣೆಯೊಂದಿಗೆ ಸಭೆ ಮುಕ್ತಾಯವಾಯಿತು.

ಬಸ್‌ಪಾಸ್: ವಿದ್ಯಾರ್ಥಿಗಳ ಹೋರಾಟಕ್ಕೆ ಜಯ

ವಿದ್ಯಾರ್ಥಿಗಳ ವ್ಯಾಪಕ ಪ್ರತಿಭಟನೆಯ ಹಿನ್ನೆಲೆಯಲ್ಲಿ ಹೊಸ ಬಸ್‌ಪಾಸ್ ಪದ್ಧತಿಯನ್ನು ರದ್ದು ಪಡಿಸಿ ಹಳೆ ವ್ಯವಸ್ಥೆಯನ್ನೇ ಮುಂದುವರೆಸಲು ಜುಲೈ 3ರಂದು ವಿದ್ಯಾರ್ಥಿ ಸಂಘಟನೆಗಳ ನಾಯಕರ ಮತ್ತು ಕೆ.ಎಸ್. ಆರ್.ಟಿ.ಸಿ. ಅಧಿಕಾರಿಗಳ ನಡುವೆ ನಡೆದ ಸುದೀರ್ಘ ಸಭೆಯಲ್ಲಿ ಒಪ್ಪಂದಕ್ಕೆ ಬರಲಾಯಿತು. ಇದು ವಿದ್ಯಾರ್ಥಿಗಳ ನ್ಯಾಯಯುತ ಹೋರಾಟಕ್ಕೆ ಸಿಕ್ಕ ಜಯ. ಹೋರಾಟದಲ್ಲಿ ಭಾಗವಹಿಸಿದ ಎಲ್ಲಾ ವಿದ್ಯಾರ್ಥಿಗಳಿಗೆ ಎಸ್.ಎಫ್.ಐ.ರಾಜ್ಯ ಸಮಿತಿ ಅಭಿನಂದಿಸುತ್ತದೆ. ಈ ಚರ್ಚೆಯಲ್ಲಿ ಎಸ್‌ಎಫ್ ಐನಿಂದ ರಾಜ್ಯ ಸಮಿತಿ ಅಧ್ಯಕ್ಷರಾದ ಶಾಂತರಾಮ ನಾಯಕ, ಕಾರ್ಯದರ್ಶಿ ಕೆ.ಪ್ರಕಾಶ್, ಉಪಾಧ್ಯಕ್ಷರಾದ ಮೀನಾಕ್ಷಿ ಸುಂದರಂ ಭಾಗವಹಿಸಿದ್ದರು.

ಪ್ರಾಥಮಿಕ ಶಾಲಾ ವಿದ್ಯಾರ್ಥಿಗಳಿಗೆ ಈ ಹಿಂದೆ ಇರುವಂತೆ ಉಚಿತ ಬಸ್‌ಪಾಸ್‌ನೀಡಲು ಹಾಗೂ ಪ್ರೌಢಶಾಲಾ ಮತ್ತು ಕಾಲೇಜು ವಿದ್ಯಾರ್ಥಿಗಳ ಪಾಸ್‌ಗಳಲ್ಲಿ 5ರೂ. ಏರಿಕೆ ಮಾಡಲು ಸರ್ವ ಸಮ್ಮತ ಒಪ್ಪಿಗೆಗೆ ಬರಲಾಯಿತು.

ಒಂದು ತಿಂಗಳ ಮತ್ತು 3 ತಿಂಗಳ ಪಾಸ್ ವಿತರಣೆಗೆ ಕೆ.ಎಸ್.ಆರ್.ಟಿ.ಸಿ. ಒಪ್ಪಿಗೆ ನೀಡಿತು.

ಅಕ್ರಮ ಭೂ ಸಾಗುವಳಿ ಕೇಸುಗಳನ್ನು ಕೈ ಬಿಡಲು ಆಗ್ರಹ

ಹುಬ್ಬಳ್ಳಿ: ಧಾರವಾಡ ಜಿಲ್ಲೆಯ ಹುಬ್ಬಳ್ಳಿ, ಕಲಘಟಗಿ, ಶಿಗ್ಗಾವ, ಸವಣೂರು, ಹಾವೇರಿ ಶಿರಹಟ್ಟಿ, ನವಲಗುಂದ ಬ್ಯಾಡಗಿ ಮತ್ತು ರಾಣಿ ಬೆನ್ನೂರ ತಾಲೂಕುಗಳಲ್ಲಿ ಸರ್ಕಾರಿಭೂಮಿಯನ್ನು ಅಕ್ರಮ ಸಾಗುವಳಿ ಮಾಡಿರುವ ಭೂಹೀನಕೂಲಿ ಕಾರರ ಮೇಲೆ ಹಾಕಲಾದ ಕೇಸುಗಳನ್ನುಹಿಂತೆಗೆದುಕೊಳ್ಳಬೇಕೆಂದು ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘವು ರಾಜ್ಯ ಜನತಾದಳಸರ್ಕಾರವನ್ನು ಆಗ್ರಹಿಸಿದೆ. ಜೂನ್26ರಂದು ತಡಸ (ರೇಣುಕಾ ಮಂದಿರದ ಹತ್ತಿರ) ಗ್ರಾಮದಲ್ಲಿ ಜರುಗಿದ ಕೃಷಿ ಕೂಲಿಕಾರರ ವಿಶೇಷ ಸಭೆಯಲ್ಲಿ ಸರ್ವಾನುಮತದಿಂದ ಈ ನಿರ್ಣಯ ಅಂಗೀಕರಿಸಲಾಯಿತು. ಹುಬ್ಬಳ್ಳಿ ತಾಲೂಕ ಅದರಗುಂಚಿ ಗ್ರಾಮದ ಉಸ್ಮಾನಸಾಬ ಮುಜಾಹಿದ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಸಿಪಿಐ(ಎಂ) ಪಕ್ಷದ ಜಿಲ್ಲಾ ಕಾರ್ಯದರ್ಶಿ ನಿತ್ಯಾನಂದಸ್ವಾಮಿ ಅವರು ಮಾತನಾಡುತ್ತಾ ರಾಜ್ಯದಲ್ಲಿ ಸ್ವಂತ ಭೂಮಿ ಇಲ್ಲದೇ ಬಡವರು ಸರ್ಕಾರಿ ಬಂಜರು ಭೂಮಿಯನ್ನು ಸಾಗುವಳಿ ಮಾಡಿರುವುದನ್ನು ಸಕ್ರಮಗೊಳಿಸಿ ಅವರಿಗೆ ಪಟ್ಟಾ ಕೊಡುವುದಾಗಿ ಮುಖ್ಯಮಂತ್ರಿ ದೇವೇಗೌಡರು ಕೊಟ್ಟ ಭರವಸೆಯನ್ನು ಈಡೇರಿಸಲು ತಕ್ಷಣ ಕ್ರಮ ಕೈಗೊಳ್ಳಬೇಕೆಂದು ಒತ್ತಾಯಿಸಿದರು.

ಹಾನಗಲ್ಲ ತಾಲೂಕಿನಲ್ಲಿ ಕೃಷಿ ಕೂಲಿಕಾರರ ಸಂಘದ ಅಧ್ಯಕ್ಷರಾದ ಫಕೀರಪ್ಪ ಹೊತನಹಳ್ಳಿ ಅವರು ಈ ಸಭೆಯಲ್ಲಿ ಮಾತನಾಡಿದರು.

ವಿಶ್ವನಾಥ ತುಪ್ಪದ, ಫಕೀರಪ್ಪ ಕುಂದೂರ, ಅಹಮದಸಾಬ ಮುಲ್ಲಾ, ಗದಿಗೆಯ್ಯ ಚಿಕ್ಕಮಠ ಮತ್ತು ಹಜರತಸಾಬ ಗೂಡುನವರ ಅವರು ಮಾತನಾಡಿದರು. ಸಭೆಯನ್ನು ಸಂಘಟಿಸಿದ ಸಿಪಿಐ(ಎಂ) ಪಕ್ಷದ ಎಂ.ಎಚ್. ಮುಲ್ಲಾ ಆರಂಭದಲ್ಲಿ ಸ್ವಾಗತಿಸಿ ಕೊನೆಯಲ್ಲಿ ವಂದಿಸಿದರು.

ನೀರಿನ ದರ ಏರಿಕೆ: ಧರಣಿ ಸತ್ಯಾಗ್ರಹ

ಹುಬ್ಬಳ್ಳಿ: ನೀರಿನ ದರ ಏರಿಸುವ ಸರ್ಕಾರದ ಆದೇಶಕ್ಕೆ ರಾಜ್ಯಾದ್ಯಂತ ವ್ಯಾಪಕ ಪ್ರತಿಭಟನೆ ವ್ಯಕ್ತವಾಗುತ್ತಿರುವಾಗ ಮುಖ್ಯಮಂತ್ರಿ ದೇವೇಗೌಡರು ತಮ್ಮ ಕ್ರಮವನ್ನು ಸಮರ್ಥಿಸುತ್ತಿರುವುದು ಖಂಡನೀಯವಾಗಿದೆ ಎಂದು ಸಿಪಿಐ(ಎಂ) ಧಾರವಾಡ ಜಿಲ್ಲಾ ಕಾರ್ಯದರ್ಶಿ ನಿತ್ಯಾನಂದ ಸ್ವಾಮಿ ಹೇಳಿದರು. ಅವರು ನೀರಿನ ದರ ಏರಿಕೆಯ ವಿರುದ್ಧ ಇಂದಿಲ್ಲಿ ಪಕ್ಷವು ಸಂಘಟಿಸಿದ್ದ ಸಾಮೂಹಿಕ ಧರಣಿ ಸತ್ಯಾಗ್ರಹವನ್ನು ಉದ್ಘಾಟಿಸಿ ಮಾತನಾಡುತ್ತಿದ್ದರು. ಒಂದು ನಗರದ ಪಟ್ಟಣದಲ್ಲಿ ಒದಗಿಸಲಾಗುವ ನೀರಿನ ದರವನ್ನು ಅಲ್ಲಿಯ ಚುನಾಯಿತ ನಗರಸಭೆ ಪುರಸಭೆ ನಿರ್ಧರಿಸಬೇಕು ಎಂದು ಹೇಳಿದ ಅವರು ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆಗಳು ನಡೆಯುವವರೆಗೂ ನೀರಿನ ದರಗಳನ್ನು ಹೆಚ್ಚಿಸಬಾರದೆಂದೂ, ಪ್ರಸಕ್ತ ದರಗಳನ್ನೇ ಮುಂದುವರೆಸಿಕೊಂಡು ಹೋಗಬೇಕೆಂದು ಅವರು ಸರ್ಕಾರವನ್ನು ಆಗ್ರಹಿಸಿದರು.

ಸಿ.ಪಿ.ಐ(ಎಂ) ಧಾರವಾಡ ಜಿಲ್ಲಾ ಸಮಿತಿಯ ಸದಸ್ಯರಾದ ಸಿ.ಆರ್. ಭಟ್, ಎಂ.ಎಚ್. ಮುಲ್ಲಾ ಮತ್ತು ಡಿ.ಜೆ.ಗೋಂದಕರ್ ಸತ್ಯಾಗ್ರಹದ ನೇತೃತ್ವ ವಹಿಸಿದ್ದರು.

ನೀರಿನ ದರ ಏರಿಸುವ ಸರ್ಕಾರದ ಆದೇಶವನ್ನು ತಕ್ಷಣ ಹಿಂತೆಗೆದುಕೊಳ್ಳಬೇಕೆಂದು ಮುಖ್ಯಮಂತ್ರಿಯನ್ನು ಒತ್ತಾಯಿಸುವ ಮನವಿಯೊಂದನ್ನು ತಹಶಿಲ್ದಾರರಿಗೆ ಸಲ್ಲಿಸಲಾಯಿತು.

ಎಸ್.ಎಫ್.ಐ. ಬೆಳ್ಳಿ ಹಬ್ಬ ಉದ್ಘಾಟನಾ ಸಮಾರಂಭ

ಕೋಲಾರ: ಕರ್ನಾಟಕದಲ್ಲಿ ಎಸ್.ಎಫ್.ಐ. ಸಂಘಟನೆ ಆರಂಭವಾದ ಕೋಲಾರ ಜಿಲ್ಲೆಯಲ್ಲಿಯೇ ಎಸ್.ಎಫ್.ಐ.ನ 25 ವರ್ಷಗಳ ಬೆಳ್ಳಿ ಹಬ್ಬದ ಉದ್ಘಾಟನಾ ಸಮಾರಂಭ ಸಹ ಯಶಸ್ವಿಯಾಗಿ ನಡೆಯಿತು. ಕೋಲಾರದ ಸರ್ಕಾರಿ ಬಾಲಕರ ಕಾಲೇಜಿನಲ್ಲಿ ಜೂನ್ 15ರಂದು ನಡೆದ ಕಾರ್ಯಕ್ರಮವನ್ನು ಖ್ಯಾತ ವಿಚಾರವಾದಿಗಳಾದ ಡಾ. ಜಿ.ರಾಮಕೃಷ್ಣ ಅವರು ಉದ್ಘಾಟಿಸಿದರು. ಬಾಗೇಪಲ್ಲಿ ಕ್ಷೇತ್ರದ ಶಾಸಕರಾದ ಕಾಂ.ಜಿ.ವಿ.ಶ್ರೀರಾಮರೆಡ್ಡಿ, ಮಾಜಿ ಶಾಸಕರಾದ ಕಾಂ.ಆರ್.ವೆಂಕಟರಾಮಯ್ಯ, ಎಸ್.ಎಫ್.ಐ.ನ ಅಖಿಲ ಭಾರತ ಅಧ್ಯಕ್ಷರಾದ ಕಾಂ. ವೈ. ವೆಂಕಟೇಶ್ವರ ರಾವ್, ಮಾಜಿ ಎಮ್.ಎಲ್.ಸಿ. ವೆಂಕಟಗಿರಿಯಪ್ಪ ಮುಂತಾದವರು ಪಾಲ್ಗೊಂಡಿದ್ದರು.

ಡಾ.ಜಿ.ರಾಮಕೃಷ್ಣ, ಕಾ. ವೈ.ವೆಂಕಟೇಶ್ವರರಾವ್ ಹಾಗೂ ಎಸ್‌ಎಫ್‌ಐನ ಸಂಸ್ಥಾಪನಾ ಸದಸ್ಯರಾದ ಶಾಸಕ ಕಾಂ.ಜಿ.ವಿ. ಶ್ರೀರಾಮ ರೆಡ್ಡಿಯವರು ಮಾತನಾಡಿದರು. ಶಿಕ್ಷಣ ನೀತಿಯನ್ನು ನಿರ್ಧರಿಸುವ ಅಂಶ ರಾಜಕೀಯ. ಎಸ್‌ಎಫ್‌ಐ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಿ ಅವರನ್ನು ಸಂಘಟಿಸಬೇಕೆಂದು ಹಾಗೂ ಸಾಮಾಜಿಕ ನೈತಿಕ ಅಧಃ ಪತನದ ವಿರುದ್ಧ ಹೋರಾಡಬೇಕೆಂದು ಕರೆ ನೀಡಿದರು. ಬೆಳ್ಳಿ ಹಬ್ಬದ ಆಚರಣೆಯ ಸಂದರ್ಭದಲ್ಲಿ ಅವರು ಶುಭಾಶಯ ಕೋರಿದರು.

ರಾಜ್ಯ ಸರಕಾರಿ ನೌಕರರ ಸಮಾಲೋಚನಾ ಸಭೆ

ಬೆಂಗಳೂರು: ಕರ್ನಾಟಕದಲ್ಲಿ ರಾಜ್ಯ ಸರಕಾರಿ ನೌಕರರ ಸಂಘಟನೆ ಕುರಿತಂತೆ ಸಮಾಲೋಚನಾ ಸಭೆಯು ಜೂನ್ 21ರಂದು ಬೆಂಗಳೂರಿನಲ್ಲಿ ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘದ ಅಧ್ಯಕ್ಷರಾದ ಕೆ. ಸಿಪ್ಪೇಗೌಡರ ಅಧ್ಯಕ್ಷತೆಯಲ್ಲಿ ಸಂಘದ ಸಭಾಂಗಣದಲ್ಲಿ ಜರುಗಿತು.

ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಒಕ್ಕೂಟ (AISGEF)ದ ಪ್ರಧಾನ ಕಾರ್ಯದರ್ಶಿ ಸುಕೋಮಲ್‌ಸೇನ್‌ರವರು ಮಾತನಾಡಿ, ಕರ್ನಾಟಕ ರಾಜ್ಯ ಸರಕಾರಿ ನೌಕರರ ಸಂಘಕ್ಕೆ ಒಂದು ಇತಿಹಾಸ ಇದೆ. ಹೋರಾಟದ ಪರಂಪರೆ ಇದೆ. ಹೊಸ ಆರ್ಥಿಕ ನೀತಿಯ ದುಷ್ಪರಿಣಾಮಗಳ ವಿರುದ್ಧ ಕರ್ನಾಟಕದ ಸರಕಾರಿ ನೌಕರರು, ಅಖಿಲ ಭಾರತ ರಾಜ್ಯ ಸರಕಾರಿ ನೌಕರರ ಒಕ್ಕೂಟದ ಜೊತೆಗೂಡಿ ಹೋರಾಟ ನಡೆಸಬೇಕೆಂದು ಕರೆ ನೀಡಿದರು.

ಒಕ್ಕೂಟದ ಕಾರ್ಯದರ್ಶಿ ಎಂ.ಆರ್. ಅಪ್ಪನ್ ರವರು ಮಾತನಾಡಿ, ಕೇಂದ್ರ ಸರಕಾರ ರಚಿಸಿರುವ "ಮಿತವ್ಯಯ ಸಮಿತಿ"ಯು ನೌಕರರ ಮತ್ತು ಕಾರ್ಮಿಕರ, ವೇತನ, ತುಟ್ಟಿ ಭತ್ಯೆ, ಬೋನಸ್ಸು ಇತ್ಯಾದಿಗಳನ್ನು ಸ್ಥಗಿತಗೊಳಿಸಲು ಶಿಫಾರಸ್ಸುಗಳನ್ನು ಮಾಡಿದ್ದರೂ ಸಹ ಕಾರ್ಮಿಕರ ಐಕ್ಯ ಹೋರಾಟದಿಂದಾಗಿ ಈ ಶಿಫಾರಸ್ಸುಗಳನ್ನು ಕಾರ್ಯಗತಗೊಳಿಸಲು ಸರಕಾರಕ್ಕೆ ಸಾಧ್ಯವಾಗಲಿಲ್ಲ ಎಂದರು.

ಸಿಐಟಿಯು ರಾಜ್ಯಾಧ್ಯಕ್ಷರಾದ ಎಸ್. ಸೂರ್ಯನಾರಾಯಣ ರಾವ್ ರವರು ದೇಶದ ಹಾಗೂ ವಿಶ್ವದ ಇಂದಿನ ಪರಿಸ್ಥಿತಿಗಳನ್ನು ವಿವರಿಸಿದರಲ್ಲದೆ, ರಾಜ್ಯ ಸರಕಾರಿ ನೌಕರರು ಸಹಾ ದುಡಿಯುವ ವರ್ಗದ ಭಾಗವಾಗಿದ್ದು ನೌಕರ-ಕಾರ್ಮಿಕ ವರ್ಗದ ಹಿತರಕ್ಷಣೆಗಾಗಿ ಕಾರ್ಮಿಕ ವರ್ಗದ ಚಳುವಳಿಯ ಮುಖ್ಯ ವಾಹಿನಿಯಲ್ಲಿ ಸೇರಿಕೊಳ್ಳಬೇಕೆಂದು ಮನವಿ ಮಾಡಿದರು.

ರಾಜ್ಯ ಸರಕಾರಿ ನೌಕರರ ಸಂಘದ ಮಾಜಿ ಅಧ್ಯಕ್ಷರಾದ ಶ್ರೀಪತಿಯವರು ಸಭೆಯಲ್ಲಿ ಹಾಜರಿದ್ದು ಮಾತನಾಡಿದರು.

ಅಖಿಲ ಭಾರತ ವಕೀಲರ ಸಂಘ (AILU)ದ ರಾಜ್ಯ ಘಟಕದ ಕಾರ್ಯದರ್ಶಿ ವಿ. ಗೋಪಾಲಗೌಡ, ಬ್ಯಾಂಕ್ ನೌಕರರ ಸಂಘಟನೆಯ ಬಾಲಕೃಷ್ಣ ಶೆಟ್ಟಿ, ವಿಮಾ ನೌಕರರ ಸಂಘಟನೆಯ ಸುರೇಂದ್ರರಾವ್ ಮತ್ತಿತರರು ಸಭೆಯಲ್ಲಿ ಭಾಗವಹಿಸಿದ್ದರು.

ಅಧ್ಯಕ್ಷರ ಭಾಷಣದ ನಂತರ ಸಂಘದ ಪ್ರಧಾನ ಕಾರ್ಯದರ್ಶಿ ಕೆ. ಜಯದೇವಪ್ಪನವರು ವಂದನೆ ಸಲ್ಲಿಸಿದರು.

ಕರ್ನಾಟಕ ಸುದ್ದಿ ಸಮಾಚಾರ

ಬಿಜೆಪಿಯ ಮತ್ತೊಂದು ಕೋಮುವಾದಿ ತಂತ್ರ

ಈದ್ಗಾ ವಿವಾದದ ಪರಿಹಾರದಿಂದ ಮುಖಭಂಗಗೊಂಡಿರುವ ಬಿಜೆಪಿ ಜನತಾದಳ ಸರ್ಕಾರದ ಮಂತ್ರಿಮಂಡಲದಿಂದ ರೋಷನ್‌ಬೇಗ್‌ರವರನ್ನು ಕೈ ಬಿಡಬೇಕೆಂದು ಇಬ್ರಾಹಿಂರವರು ಜನತಾದಳ ರಾಜ್ಯ ಘಟಕದ ಅಧ್ಯಕ್ಷ ಸ್ಥಾನದಿಂದ ಕೆಳಗಿಳಿಯಬೇಕೆಂದ ಬೊಬ್ಬೆ ಆರಂಭಿಸಿದ್ದಾರೆ. ಇಲ್ಲದಿದ್ದರೆ ರಾಜ್ಯಾದ್ಯಂತ ಚಳುವಳಿ ಆರಂಭಿಸುತ್ತೇವೆಂದು ಎಚ್ಚರಿಸಿದ್ದಾರೆ. ಇದು ಮುಂದೆ ಲೋಕಸಭಾ ಚುನಾವಣೆಗಳು ನಡೆಯುವುದರ ಮೇಲೆ ಕಣ್ಣಿಟ್ಟು ರಾಜ್ಯಾದ್ಯಂತ ಮುಸ್ಲಿಮ್ ವಿರೋಧಿ ಭಾವನೆಗಳನ್ನು ಬಡಿದೆಬ್ಬಿಸಲು ಬಿಜೆಪಿ ಹೂಡಿರುವ ತಂತ್ರವೆಂದು ಇಂತಹ ಕೋಮುವಾದಿ ಆಟಗಳಿಗೆ ಮಣಿಯಬಾರದೆಂದು ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಅಭಿಪ್ರಾಯಪಟ್ಟಿದೆ.

ಅದೇ ಸಮಯದಲ್ಲಿ ಸಮಾಜ ಘಾತಕ ಶಕ್ತಿಗಳ ವಿರುದ್ಧ ತೀವ್ರಕ್ರಮ ತೆಗೆದುಕೊಂಡು ಅವರನ್ನು ಅಡಗಿಸಲು ಎಲ್ಲಾ ಕ್ರಮ ತೆಗೆದುಕೊಳ್ಳಬೇಕೆಂದೂ ಅದಕ್ಕೆ ಕುಮ್ಮಕ್ಕು ಕೊಡುವವರು ಯಾವುದೇ ಪಕ್ಷದಲ್ಲಿದ್ದರೂ ಅದನ್ನು ಬಯಲಿಗೆಳೆಯಬೇಕೆಂದು ಒತ್ತಾಯಿಸುತ್ತಿದೆ. ಕೋಳಿ ಫಯಾಜ್‌ರೊಂದಿಗೆ ಯಾವುದೇ ರಾಜಕಾರಣಿಗಳ ಸಂಬಂಧವಿದ್ದರೆ ಆ ಬಗ್ಗೆ ತನಿಖೆ ನಡೆಸಿ ಸೂಕ್ತಕ್ರಮ ತೆಗೆದುಕೊಳ್ಳಬೇಕೆಂದು ಅಭಿಪ್ರಾಯಪಟ್ಟಿದೆ.

ಕ್ಯೂಬಾ ನಿಧಿ ಸಂಗ್ರಹ

ಕೋಲಾರ: ಸಾಮ್ರಾಜ್ಯಶಾಹಿ ಅಮೇರಿಕಾದ ದಬ್ಬಾಳಿಕೆಯ ವಿರುದ್ಧ ಸೆಟೆದು ನಿಂತು ಹೋರಾಡುತ್ತಿರುವ ಸಮಾಜವಾದಿ ಕ್ಯೂಬಾ ಜನತೆಯ ನೆರವಿಗೆ ಕೋಲಾರದ ಹೃದಯವಂತ ಜನರು ದೊಡ್ಡ ರೀತಿಯಲ್ಲಿ ಧನ ಸಹಾಯ ಮಾಡಿದರು.

ಎಸ್.ಎಫ್.ಐ. ರಾಜ್ಯ ಸಮಿತಿ ಜೂನ್ 13 ರಂದು ಸಂಘಟಿಸಿದ್ದ ಸೌಹಾರ್ದ ನಿಧಿ ಸಂಗ್ರಹ ಪಾದಯಾತ್ರೆಯನ್ನು 'ಹೊನ್ನುಡಿ'ಪತ್ರಿಕೆಯ ಸಂಪಾದಕರಾದ ಎಂ.ಜಿ.ಪ್ರಭಾಕರ ಉದ್ಘಾಟಿಸಿದರು. ಈ ಪಾದಯಾತ್ರೆಯಲ್ಲಿ ಬಾಗೇಪಲ್ಲಿಯ ಶಾಸಕರಾದ ಕಾಂ.ಜಿ.ವಿ.ಶ್ರೀರಾಮ ರೆಡ್ಡಿ, ಮಾಜಿ ಶಾಸಕರುಗಳಾದ ಪಿ.ವೆಂಕಟಗಿರಿಯಪ್ಪ ಆರ್. ವೆಂಕಟರಾಮಯ್ಯ ಎಸ್.ಎಫ್.ಐ. ಅಖಿಲ ಭಾರತ ಮುಖಂಡರಾದ ಜಿ.ಸಿ.ಬಯ್ಯಾರೆಡ್ಡಿ, ರಾಜ್ಯಾಧ್ಯಕ್ಷರಾದ ಶಾಂತರಾಮ ನಾಯಕ್, ಕಾರ್ಯದರ್ಶಿ ಕೆ. ಪ್ರಕಾಶ್ ಮೊದಲಾದವರು ಭಾಗವಹಿಸಿದ್ದರು.

ಏಜೆಂಸಿದಾರರಲ್ಲೊಂದು ಮನವಿ

ಹಣಕಾಸಿನ ತೀವ್ರ ತೊಂದರೆಯಿಂದಾಗಿ ಜುಲೈ 16, 1995ರ ಸಂಚಿಕೆಯನ್ನು ಹೊರತರಲಾಗಿಲ್ಲ. ಬಹಳಷ್ಟು ಏಜೆಂಸಿದಾರರು ಗಮನಾರ್ಹ ಪ್ರಮಾಣದಲ್ಲಿ ತಮ್ಮ ಬಿಲ್ ಗಳನ್ನು ಬಾಕಿಯಿಟ್ಟುಕೊಂಡಿರುವುದರಿಂದ ಹೀಗಾಗಿದೆ. ಆದ್ದರಿಂದ ಆದಷ್ಟು ತಮ್ಮ ಬಾಕಿಗಳನ್ನು ತೀರಿಸಲು ತುರ್ತು ಕ್ರಮ ಕೈಗೊಳ್ಳಬೇಕೆಂದು ಈ ಮೂಲಕ ದುಡಿಯುವ ಜನರ ಈ ಪತ್ರಿಕೆಯನ್ನು ನಿಯಮಿತವಾಗಿ ಉತ್ತಮ ರೀತಿಯಲ್ಲಿ ಪ್ರಕಟಿಸುವಲ್ಲಿ ಸಹಕರಿಸಬೇಕು ಎಂದು ಕೋರುತ್ತೇವೆ.

-ವ್ಯವಸ್ಥಾಪಕರು

ವಿಶೇಷ ಲೇಖನ

ತುರ್ತು ಪರಿಸ್ಥಿತಿ ಇದ್ದಕ್ಕಿದ್ದಂತೆ ನಡೆದ ಬೆಳವಣಿಗೆಯಲ್ಲ. 1967ರಲ್ಲಿ ಮೊದಲ ಬಾರಿಗೆ ಕಾಂಗ್ರೆಸ್‌ನ ಅಧಿಕಾರದ ಗುತ್ತೇದಾರಿಕೆ ರಾಜ್ಯಗಳಲ್ಲಿ ಒಡೆದಾಗಲಿಂದಲೇ ಹೇಗಾದರೂ ಅಧಿಕಾರದಲ್ಲುಳಿಯಲು ಕಸರತ್ತು ಆರಂಭಿಸಿತ್ತು. 1978-79ರಲ್ಲಿ ಬ್ಯಾಂಕ್ ರಾಷ್ಟ್ರೀಕರಣ, ರಾಜಧನ ರದ್ದತಿ ಮೇಲೆ ಒತ್ತು ನೀಡಲಾಯಿತು. 'ಗರೀಬಿ ಹಟಾವೋ' ಕೂಗು ಎತ್ತಲಾಯಿತು. ಅದರಿಂದ ಆಳುವ ಪಕ್ಷಕ್ಕೆ ಅನುಕೂಲಕರವಾದ ಸನ್ನಿವೇಶ ಏರ್ಪಟ್ಟಿತು. ಜತೆಗೆ ಆಗಿನ ಪೂರ್ವ ಪಾಕಿಸ್ತಾನದ ಜನತೆ ಪಾಕಿಸ್ತಾನದಿಂದ ಸ್ವಾತಂತ್ರ್ಯ ಪಡೆಯಲು ನಡೆಸಿದ ಹೋರಾಟದಲ್ಲಿ ಭಾರತದ ಪಾತ್ರ(ಭಾರತ-ಸೋವಿಯತ್ ಮೈತ್ರಿ ಒಪ್ಪಂದ ಇದರಲ್ಲಿ ದೊಡ್ಡ ಪಾತ್ರ ವಹಿಸಿತು) ಕೂಡಾ ಇದಕ್ಕೆ ಪೂರಕವಾಗಿ ಬಂತು.

ಆದರೆ 1971ರ ಚುನಾವಣಾ ವಿಜಯದ ನಂತರ ತಾನೇ ಬಡಿದೆಬ್ಬಿಸಿದ ಜನತೆಯ ಆಕಾಂಕ್ಷೆಗಳನ್ನು ಈಡೇರಿಸುವ ಸಮಸ್ಯೆಯನ್ನು ಕಾಂಗ್ರೆಸ್ ಪಕ್ಷ ಎದುರಿಸಬೇಕಾಯಿತು. ಪಶ್ಚಿಮ ಬಂಗಾಳದಲ್ಲಿ ಎಡಪಕ್ಷಗಳಿಂದ ಸವಾಲು ಬಂದಾಗ ಕಾಂಗ್ರೆಸ್ ಅದನ್ನು ಅರೆ-ಫ್ಯಾಸಿಸ್ಟ್ ದಬ್ಬಾಳಿಕೆ ನಡೆಸಿ ಎದುರಿಸಲು ಪ್ರಯತ್ನಿಸಿತು. ಇದರಲ್ಲಿ 1200 ಸಿಪಿಐ(ಎಂ) ಕಾರ್ಯಕರ್ತರು ಬಲಿಯಾದರೆ 20 ಸಾವಿರ ಕಾರ್ಯಕರ್ತರು ಮನೆ-ಮಠ ಬಿಟ್ಟು ಹೋಗಬೇಕಾಯಿತು. ಕೇರಳದಲ್ಲಿ ಎಡ ಐಕ್ಯತೆಯನ್ನು ಒಡೆಯಲು ಅದಕ್ಕೆ ಸಾಧ್ಯವಾಯಿತು.

ಪ್ರಜಾಪ್ರಭುತ್ವದ ದಮನದ ಹೊಸ ವಿಧಾನಗಳು

1974ರಲ್ಲಿ ಬಿಹಾರ ಜಯಪ್ರಕಾಶ್ ನಾರಾಯಣ್ ನೇತೃತ್ವದ ಆಂದೋಲನದ ಕೇಂದ್ರವಾಯಿತು. ಪ್ರಜಾಪ್ರಭುತ್ವ ಹಕ್ಕುಗಳ ಮೇಲಿನ ಆಕ್ರಮಣಗಳಿಗೆ ಪ್ರತಿಯಾಗಿ ಜನ ಈ ಆಂದೋಲನದ ಸುತ್ತ ಅಣಿನೆರೆಯಲಾರಂಭಿಸಿದರು. ದೇಶದ ವಿವಿಧ ಭಾಗಗಳನ್ನು ಈ ಆಂದೋಲನ ವ್ಯಾಪಿಸುತ್ತಿದ್ದಂತೆ ಅಲಹಾಬಾದ್ ಹೈಕೋರ್ಟ್ ಇಂದಿರಾಗಾಂಧಿಯವರ ಚುನಾವಣೆಯನ್ನು ರದ್ದುಗೊಳಿಸಳುವ ತೀರ್ಪು ನೀಡಿತು. ಬೆಂಕಿಗೆ ತುಪ್ಪ ಸುರಿಯಲಾಯಿತು. ಜೂನ್ 25, 1975ರಂದು ದಿಲ್ಲಿಯ ರಾಮ್‌ಲೀಲಾ ಮೈದಾನಿನಲ್ಲಿ ಸಾಮೂಹಿಕ ರ‍್ಯಾಲಿ ನಡೆದು ಜಯಪ್ರಕಾಶ್ ನಾರಾಯಣ ಮತ್ತಿತರ ಮುಖಂಡರು ಇಂದಿರಾಗಾಂಧಿಯ ರಾಜೀನಾಮೆಗೆ ಒತ್ತಾಯಿಸಿದರು.

ಈ ವೇಳೆಗೆ ಇಂದಿರಾಗಾಂಧಿಯ ಕಿರಿಯ ಮಗ ಸಂಜಯಗಾಂಧಿ ರಂಗಕ್ಕೆ ಬಂದರು. ಪ್ರಜಾಪ್ರಭುತ್ವ ವಿಧಿ-ವಿಧಾನಗಳ ಬಗ್ಗೆ ಕಿಂಚಿತ್ತೂ ಗೌರವವಿಲ್ಲದ, ಜನರನ್ನು ಆತ ತನ್ನ ಹಿಂದೆ ಸೇರಿಸಿಕೊಂಡಿದ್ದ. ಹೇಗಾದರೂ ಕಾಂಗ್ರೆಸ್ಸಿನ ಅಧಿಕಾರವನ್ನು ಶಾಶ್ವತಗೊಳಿಸುವುದಷ್ಟೇ ಅವರಿಗೆ ಬೇಕಾಗಿತ್ತು. ಆದ್ದರಿಂದ ಪ್ರಜಾಪ್ರಭುತ್ವವನ್ನು ದಮನ ಮಾಡುವ ಹೊಸ-ಹೊಸ ವಿಧಾನಗಳನ್ನು ಆತ ವಿಕಾಸಗೊಳಿಸಿದ.

ಅಲಹಾಬಾದ್ ಹೈಕೋರ್ಟ್ ತೀರ್ಪಿನ ನಂತರ ಜನಸಮೂಹ ಕಾಂಗ್ರೆಸ್ ಆಡಳಿತದ ವಿರುದ್ಧ ತಿರುಗಿಬಿದ್ದಾಗ ಕೇಂದ್ರ ಮಂತ್ರಿ ಮಂಡಳ ಅದನ್ನು ರಾಜಕೀಯವಾಗಿ ಎದುರಿಸುವ ಬದಲು ದೇಶದ ಮೇಲೆ ತುರ್ತು ಪರಿಸ್ಥಿತಿ ಹೇರಲು ಶಿಫಾರಸು ಮಾಡಿತು. ಮಧ್ಯ ರಾತ್ರಿಯಲ್ಲೇ ವಿವಿಧ ರಾಜಕೀಯ ಮುಖಂಡರುಗಳ ಮನೆಯ ಜಪ್ತಿ ನಡೆಯಿತು. ಅವರನ್ನು ಜೈಲಿಗಟ್ಟಲಾಯಿತು. ಸುದ್ದಿ ಮಾಧ್ಯಮಗಳೂ ಕಕ್ಕಾಬಿಕ್ಕಿಯಾದವು. ಮರುದಿನದ ಪತ್ರಿಕೆಗಳ ಸಂಪಾದಕೀಯದ ಜಾಗ ಖಾಲಿಯಾಗಿ ಬಂದಿತ್ತು, ಸಿಪಿಐ(ಎಂ) ಮುಖಂಡರೊಂದಿಗೆ ಮೊರಾರ್ಜಿ ದೇಸಾಯಿ, ಚರಣ್ ಸಿಂಗ್ ಜೆ.ಪಿ., ಅಡ್ವಾಣಿ, ವಾಜಪೇಯಿ ಮುಂತಾದ ಆಳುವ ವರ್ಗಗಳ ಪ್ರಮುಖ ಮುಖಂಡರನ್ನೂ ಸೆರೆಮನೆಗೆ ಅಟ್ಟಲಾಯಿತು.

ಅತ್ತ ಇಂದಿರಾಗಾಂಧಿಗೆ ಸಂಜಯಗಾಂಧಿಯಲ್ಲದೆ ಸಿದ್ಧಾರ್ಥ ಶಂಕರ್ ರಾಯ್, ವಿ.ಸಿ. ಶುಕ್ಲಾರಂತವರು ಸಹಾಯಕರಾಗಿ ಮೂಡಿ ಬಂದರು.

"ಆಂತರಿಕ ಗಲಭೆಗಳಿಂದ ದೇಶದ ಭದ್ರತೆಗೆ ಬೆದರಿಕೆ ಬಂದುದರಿಂದ" ಈ ತುರ್ತು ಪರಿಸ್ಥಿತಿ ನೋಟಿಫಿಕೇಶನ್ ಹೊರತರಬೇಕಾಯಿತು ಎಂದು ಹೇಳಲಾಯಿತು. ಜನ ಸಮೂಹದ ಒಳಿತಿಗಾಗಿ ತಾನು ಕೆಲವು ಕ್ರಮಗಳನ್ನು ಕೈಗೊಂಡಂದಿನಿಂದ ತನ್ನ ವಿರುದ್ಧ ಪಿತೂರಿ ನಡೆದಿದೆಂದು ಆಕೆ ಹೇಳಿಕೊಂಡರೂ ತುರ್ತು ಪರಿಸ್ಥಿತಿ ಹೇರಿದ ನಂತರ ಜನಸಾಮಾನ್ಯರ ಪರವಾಗಿ ಒಂದೇ ಒಂದು ಕ್ರಮವೂ ಬರಲಿಲ್ಲ. ಅವರಿಗೆ ಸಿಕ್ಕಿದ್ದು ಕೇವಲ ಬಲವಂತದ ಕುಟುಂಬ ಯೋಜನೆ ಶಸ್ತ್ರಚಿಕಿತ್ಸೆಗಳಷ್ಟೇ.

ತುರ್ತು ಪರಿಸ್ಥಿತಿ ಹೇರಿದ ಮೊದಲ ದಿನವೇ 800ಕ್ಕೂ ಹೆಚ್ಚು ಮುಖಂಡರನ್ನು ಬಂಧಿಸಲಾಯಿತು. ರಾಜಕೀಯ ಪಕ್ಷಗಳು ತಮ್ಮ ಸಾಮಾನ್ಯ ಚಟುಘಟಿಕೆಗಳನ್ನು ನಡೆಸುವಂತಿರಲ್ಲ, ಕಾರ್ಮಿಕ ಸಂಘಗಳ ಹಕ್ಕುಗಳೂ ಮೊಟಕು . ಪತ್ರಿಕೆಗಳ ಮೇಲೆ ಬ್ರಿಟಿಷರೂ ಹೇರದ ಸೆನ್ಸಾರ್ ಶಿಪ್‌ನಂತರ ಮೂಲಭೂತ ಹಕ್ಕುಗಳನ್ನು ಮಾತ್ರವಲ್ಲ, ಸಂಸತ್ತಿನ ಹಕ್ಕನ್ನೂ ಕೂಡಾ ಮೊಟಕುಮಾಡುವ ಸಂವಿಧಾನ ತಿದ್ದುಪಡಿ. ಸರ್ವಾಧಿಕಾರಶಾಹಿಯ ಹೇರಿಕೆ.

ತುರ್ತು ಪರಿಸ್ಥಿತಿಯನ್ನು ಬೆಂಬಲಿಸಿದವರು

ದುರದೃಷ್ಟಕರ ಸಂಗತಿಯೆಂದರೆ ಸಿಪಿಐ ತಕ್ಷಣ ತುರ್ತು ಪರಿಸ್ಥಿತಿಯನ್ನು ಬೆಂಬಲಿಸಿತು. ಸಾಮ್ರಾಜ್ಯಶಾಹಿಗೆ ಬಾಂಗ್ಲಾದೇಶದ ಸ್ವಾತಂತ್ರ್ಯ ಹೋರಾಟದ ಯಶಸ್ಸನ್ನು ಸಹಿಸಲಾಗಲಿಲ್ಲ, ಆದ್ದರಿಂದ ಈ ಹಿನ್ನೆಲೆಯಲ್ಲಿ ತುರ್ತು ಪರಿಸ್ಥಿತಿ ತರಬೇಕಾಯಿತು ಎಂದು ಸಮರ್ಥಿಸಿಕೊಳ್ಳಲು ಅದು ಪ್ರಯತ್ನಿಸಿತು. ಅವರ ಪ್ರಕಾರ ಇಂದಿರಾಗಾಂಧಿ ಫ್ಯಾಸಿಸ್ಟ್ ಅಪಾಯವನ್ನು ಎದುರಿಸಲು ಹಾಗೆ ಮಾಡಿದರು. ಜಯಪ್ರಕಾಶ್ ನಾರಾಯಣ್ ವಿರುದ್ಧ ಎಲ್ಲಾ ದೂಷಣೆಗಳನ್ನು ಬಳಸಲಾಯಿತು. ಪಾಟ್ನಾದಲ್ಲಿ ಒಂದು ಫ್ಯಾಸಿಸ್ಟ್-ವಿರೋಧಿ ಸಮ್ಮೇಳನವನ್ನು ಕರೆಯಲಾಯಿತು. ಆಗಸ್ಟ್ 1975ರಲ್ಲಿ ಬಾಂಗ್ಲಾದೇಶದ ಶೇಖ್ ಮುಜೀಬುರ್ ರಹಮಾನ್ ಕೊಲೆ, ಪಾಕಿಸ್ತಾನದಲ್ಲಿ ಭುಟ್ಟೋಗೆ ನೇಣು ಹಾಗೂ ಚಿಲಿಯಲ್ಲಿ ಅಲೆಂದೆ ಕೊಲೆಯ ಹಿನ್ನೆಲೆಯಲ್ಲಿ ಇಂದಿರಾಗಾಂಧಿಯವರ ಹತ್ಯೆಯ ಪ್ರಯತ್ನವೂ ನಡೆಯುತ್ತಿದೆಯೆಂದುಕೊಂಡು ಸಮಾಜವಾದಿ ದೇಶಗಳಿಂದ ಬಂದ ಹೆಚ್ಚಿನ ಪ್ರತಿನಿಧಿಗಳು ತುರ್ತು ಪರಿಸ್ಥಿತಿಯನ್ನು ಬೆಂಬಲಿಸಿದರು. ಸೋವಿಯತ್ ಒಕ್ಕೂಟದ ಬುದ್ಧಿಜೀವಿಗಳೂ, ಪ್ರಜಾಪ್ರಭುತ್ವ ಹಕ್ಕುಗಳ ದಮನವನ್ನು ಪ್ರಗತಿಪರ ಕ್ರಮಗಳನ್ನು ರಕ್ಷಿಸುವ ಕ್ರಮಗಳೆಂದು ಸಮರ್ಥಿಸಿದರು.

ಸೋವಿಯತ್ ಒಕ್ಕೂಟ ಮತ್ತು ಅವರನ್ನು ಹಿಂಬಾಲಿಸುತ್ತಿದ್ದ ಹಲವು ಕಮ್ಯುನಿಸ್ಟ್ ಪಕ್ಷಗಳಿಗೆ ನಿಜ ಸ್ಥಿತಿಯ, ಜನಗಳ ಭಾವನೆಯ ಅರಿವೇ ಇದ್ದಂತಿರಲ್ಲ. ತುರ್ತು ಪರಿಸ್ಥಿತಿ ತಂದದ್ದು ಜನಸಾಮಾನ್ಯರ ಕಷ್ಟ-ಕಾರ್ಪಣ್ಯಗಳನ್ನು ನೀಗಿಸಲಿಕ್ಕಾಗಿಯಲ್ಲ, ವಾಸ್ತವವಾಗಿ ಜನಸಾಮಾನ್ಯರ ಮೂಲಭೂತ ಹಕ್ಕುಗಳನ್ನೆಲ್ಲಾ ಮೊಟಕು ಮಾಡಲಾಯಿತು. ತುರ್ತು ಪರಿಸ್ಥಿತಿಯ ಬಗ್ಗೆ ಕೇಂದ್ರ ಗೃಹಮಂತ್ರಿ ಹೊರಡಿಸಿದ ಸರಕಾರದ ಶ್ವೇತಪತ್ರದಲ್ಲಿ ಜನಗಳ ಬಗ್ಗೆ ಏನೇನೂ ಪ್ರಸ್ತಾಪವಿರಲಿಲ್ಲ-72ಪುಟಗಳಲ್ಲಿ 142 ಬಾರಿ ಜಯಪ್ರಕಾಶ್ ನಾರಾಯಣ್ ಹೆಸರು ಇತ್ತಷ್ಟೇ.

ಈ ತುರ್ತು ಪರಿಸ್ಥಿತಿ ಬಹಳ ದಿನ ಉಳಿಯಲಿಕ್ಕಿಲ್ಲ ಎಂದು ಜನ ಭಾವಿಸಿದರು. ಆದರೆ ಅದು ಪೂರ್ಣ 18 ತಿಂಗಳು ಉಳಿಯಿತು.

ಅಷ್ಟರಲ್ಲೇ ಕಾಂಗ್ರೆಸ್ ಜನಗಳಿಂದ ಸಂಪೂರ್ಣವಾಗಿ ದೂರವಾಗಿತ್ತು, ಮುಖಂಡರಿಗೆ ಇದು, ಜನರ ಭಾವನೆಗಳನ್ನು ಅರಿಯಲು ಸಾಧ್ಯವಾಗಲಿಲ್ಲವೆಂದು. ಸರ್ವಾಧಿಕಾರಿ ಆಳರಸರ ವಿರುದ್ಧ ದನಿಯೆತ್ತಲು ಅ[illegible] ಯಾರೂ ಧೈರ್ಯ ಮಾಡದಿದ್ದರೂ ಜನ ಒಂದು ಅವಕಾಶಕ್ಕಾಗಿ ಕಾಯುತ್ತಿದ್ದರು.

ಆರಂಭದಲ್ಲಿ ನಾವೂ ಕೂಡ ತುರ್ತು ಪರಿಸ್ಥಿತಿಯ ಬಗ್ಗೆ ಸ್ಪಷ್ಟತೆ ಹೊಂದಿರಲಿಲ್ಲ. ಇನ್ನು ಪ್ರಜಾಪ್ರಭುತ್ವವಿರುವುದಿಲ್ಲ, ನಾವು ತಲೆಮರೆಸಿಕೊಂಡೇ ಕೆಲಸ ಮಾಡಬೇಕು ಎಂದು ಭಾವಿಸಿದ್ದೆವು. ಏಕೆಂದರೆ ನಮ್ಮ ಪ್ರತಿಕ್ರಿಯೆ ಪಶ್ಚಿಮಬಂಗಾಳದಲ್ಲಿನ ಅರೆ-ಫ್ಯಾಸಿಸ್ಟ್ ದಮನದ ಅನುಭವವನ್ನು ಅಧರಿಸಿತ್ತು. ಆದರೆ ಇದರ ಧಾಳಿ ಕೇವಲ ಎಡಪಂಥೀಯರ ಮೇಲೆ ನಡೆದಿರಲಿಲ್ಲ, ಅದೇ ಆಳುವ ವರ್ಗಗಳ ವಿರೋಧಿ ಪಕ್ಷಗಳ ಮೇಲೂ ನಡೆದಿತ್ತು. ಇಡೀ ದೇಶದಲ್ಲಿ ಎಡಶಕ್ತಿ ದುರ್ಬಲವಾಗಿದ್ದು ಇಂದಿರಾಗಾಂಧಿಗೆ ಒಂದು ಸವಾಲೇನೂ ಆಗಿರಲಿಲ್ಲ.

ಜೂನ್ 26, 1975ರಂದು ಹೇರಿದ ತುರ್ತುಪರಿಸ್ಥಿತಿ ಸ್ವತಂತ್ರ ಭಾರತದ ಒಂದು ಕರಾಳ ಅಧ್ಯಾಯ. ಈ ಅಧ್ಯಾಯದ ಮೇಲೊಂದು ಹಿನ್ನೋಟ ಬೀರುತ್ತಾ ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿಗಳು ಈಗ ಸಂಸದೀಯ ವ್ಯವಸ್ಥೆಯ ಮೇಲೆ ತುರ್ತು ಪರಿಸ್ಥಿತಿಯ ರೀತಿ ಧಾಳಿ ಸಾಧ್ಯವಾಗಲಿಕ್ಕಿಲ್ಲ, ಆದರೆ ಇನ್ನೂ ಸೂಕ್ಷ್ಮವಾದ ಪ್ರಯತ್ನಗಳು ನಡೆಯುತ್ತಿವೆ ಎನ್ನುತ್ತಾರೆ. ಆದರೆ ಇನ್ನೊಂದೆಡೆ ತಮ್ಮನ್ನು ಲೆಕ್ಕಕ್ಕೆ ತಗೊಳ್ಳದಿರಲು ಸಾಧ್ಯವಿಲ್ಲ ಎಂಬ ಅರಿವು ಕೂಡಾ ಜನಸಾಮಾನ್ಯರಲ್ಲಿ ಸಾಕಷ್ಟಿದೆ. ಆದ್ದರಿಂದ ಆಳುವ ವರ್ಗಗಳ ಹೊಸ ಸೂಕ್ಷ್ಮ ಪ್ರಯತ್ನಗಳನ್ನು ವಿಫಲಗೊಳಿಸಲು ಈ ಜನಸಾಮಾನ್ಯರಲ್ಲಿರುವ ಈ ಅರಿವನ್ನು ಬಳಸಬೇಕು ಎನ್ನುತ್ತಾರೆ.

ತುರ್ತು ಪರಿಸ್ಥಿತಿ: ಒಂದು ಸಿಂಹಾವಲೋಕನ



ತುರ್ತು ಪರಿಸ್ಥಿತಿ ಏಕೆ ಬಂತು?

ಒಬ್ಬ ಆರ್ಥಿಕ ತಜ್ಞರ ಅಭಿಪ್ರಾಯ

ಬಹಳ ಮಂದಿ ತುರ್ತು ಪರಿಸ್ಥಿತಿಯನ್ನು ಕೇವಲ ರಾಜಕೀಯ ಮಟ್ಟದಲ್ಲೇ ನೋಡುತ್ತಾರೆ. ಅಲಹಾಬಾದ್ ಹೈಕೋರ್ಟ್ ತಮ್ಮ ಚುನಾವಣೆಯ ಬಗ್ಗೆಪ್ರತಿಕೂಲ ತೀರ್ಪು ನೀಡಿದ್ದರಿಂದ ಹೇಗಾದರೂ ಅಧಿಕಾರದಲ್ಲುಳಿಯಲು ಇಂದಿರಾಗಾಂಧಿ ತುರ್ತು ಪರಿಸ್ಥಿತಿ ಹೇರಿದರು ಎಂದು. ಆದರೆ ನಿಜಸಂಗತಿ ಇನ್ನೂ ಆಳವಾಗಿದೆ. ತುರ್ತು ಪರಿಸ್ಥಿತಿ ಎಂಬುದು ದೇಶದ ವ್ಯವಸ್ಥೆಯಲ್ಲಿನ ಬಿಕ್ಕಟ್ಟಿಗೆ ಆಳುವ ವರ್ಗದ ಒಂದು ಪ್ರತಿಕ್ರಿಯೆ. ಆ ಬಿಕ್ಕಟ್ಟಿನ ಕಾರಣಗಳೇನೂ ಇನ್ನು ಮಾಯವಾಗಿಲ್ಲವಾದ್ದರಿಂದ ತುರ್ತು ಪರಿಸ್ಥಿತಿಯ ಕರಾಳದಿನಗಳು ಬರದಿರಬೇಕಾದರೆ ಆ ಕಾರಣಗಳತ್ತ ಗಮನ ಹರಿಸಬೇಕು ಎನ್ನುತ್ತಾರೆ ದೆಹಲಿಯ ಜವಾಹರಲಾಲ್ ನೆಹರೂ ವಿಶ್ವ ವಿದ್ಯಾಲಯದಲ್ಲಿ ಅರ್ಥಶಾಸ್ತ್ರದ ಪ್ರಾಧ್ಯಾಪಕರಾಗಿರುವ ಡಾ. ಪ್ರಭಾತ್ ಪಟ್ನಾಯಕ್.

ಒಂದು ವರ್ಗವಿಭಜಿತ ಹಾಗೂ ಉದಾರವಾದಿ ಬಂಡವಾಳಶಾಹಿ ಅಥವಾ ಮಿಶ್ರ ಆರ್ಥಿಕವಿರುವ ದೇಶದಲ್ಲಿ ಆಳುವ ಪ್ರಬಲ ವರ್ಗಗಳು ಇಡೀ ಸಮಾಜದ ಉತ್ಪಾದನೆಯ ಮೇಲೆ ತಮ್ಮ ಪಾಲನ್ನು ಹೆಚ್ಚಿಸಿಕೊಳ್ಳಲು ಸರಕಾರೀ ಯಂತ್ರವನ್ನು ಹಾಗೂ ಮಾರುಕಟ್ಟೆಯನ್ನು ಬಳಸಿಕೊಳ್ಳುತ್ತವೆ. ಅಂದರೆ ಸಮಾಜದ ಇತರ ವರ್ಗಗಳು, ಮುಖ್ಯವಾಗಿ ದುಡಿಯುವ ವರ್ಗಗಳ ಪಾಲನ್ನು ಕಮ್ಮಿ ಮಾಡಿಯೇ ಇದನ್ನು ಸಾಧ್ಯ. ಹಣದುಬ್ಬರ ಹೀಗೆ ದುಡಿಯುವ ಜನಗಳ ಪಾಲನ್ನು ಕಡಿಮೆ ಮಾಡುವ ಒಂದು ಸಾಧನ. ಆದರೆ ಇಂತಹ ಹಣದುಬ್ಬರ ದುಡಿಯುವ ಜನಗಳಲ್ಲಿ ಅಸಂತೃಪ್ತಿಯನ್ನೂ ಹೆಚ್ಚಿಸುತ್ತದೆ. ಇದರ ಪರಿಣಾಮವನ್ನು ಆಳುವ ಪಕ್ಷ ಚುನಾವಣೆಗಳಲ್ಲಿ ಕಾಣಬೇಕಾಗುತ್ತದೆ. ಅಂದರೆ ಆಳುವ ವರ್ಗಗಳು ಒಂದೆಡೆ ತಮ್ಮ ಪಾಲನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಿದ್ದರೆ ಇನ್ನೊಂದೆಡೆ ಪ್ರಜಾಪ್ರಭುತ್ವ ವ್ಯವಸ್ಥೆ ಅದಕ್ಕೆ ಅಡ್ಡಿಯನ್ನು ಉಂಟು ಮಾಡುತ್ತದೆ ಎಂದು ಡಾ. ಪ್ರಭಾತ್ ಪಟ್ನಾಯಕ್ ವಿವರಿಸುತ್ತಾರೆ.

> ಒಂದು ಪರ್ಯಾಯ ಅಭಿವೃದ್ಧಿ ದಾರಿಯನ್ನು, ಹೆಚ್ಚು ಸಮಾನತೆಯಿರುವ ಒಂದು ದಾರಿಯನ್ನು ಹಿಡಿಯುವವರೆಗೂ ಇದು ಬರುತ್ತಲೇ ಇರುತ್ತದೆ. ಆದ್ದರಿಂದ ಆಳುವ ವರ್ಗಗಳಿಗೆ ಸರ್ವಾಧಿಕಾರೀ ವಿಧಾನ ಬಳಸುವ ಚಪಲವೂ ಇದ್ದೇ ಇರುತ್ತದೆ ಎನ್ನುವ ಡಾ. ಪ್ರಭಾತ್ ಪಟ್ನಾಯಕ್ ಈಗ ಚುನಾವಣಾ ದೃಷ್ಟಿಯಿಂದಾಗಿ ನರಸಿಂಹರಾಯರ "ಸುಧಾರಣೆ"ಗಳಿಗೆ ಕಂಟಕ ಬಂದಿದೆ, ಆದ್ದರಿಂದ ಪ್ರಜಾಪ್ರಭುತ್ವವನ್ನು ಕೈಬಿಡಬಹುದು ಎಂಬ ತರ್ಕ ಮೂಡಿಬರುತ್ತಿದೆ, ಜಾಗರೂಕರಾಗಿರಿ ಎಂದು ಎಚ್ಚರಿಸಿದ್ದಾರೆ.

ಹಣದುಬ್ಬರ ಮತ್ತು ರಾಜಕೀಯ ಬದಲಾವಣೆ

ಭಾರತದಲ್ಲಿ [illegible] ಬ್ಬರ ಸಂಭವಿಸಿದಾಗ [illegible] ರಾಜಕೀಯ ಬದಲಾವಣೆ [illegible] ಎನ್ನುತ್ತಾರೆ ಅವರು. ಮೊ[illegible] ಣೆಯೆಂದರೆ 1960ರ ದಶಕದ ಮಧ್ಯಭಾಗದಲ್ಲಿ ಹಣದುಬ್ಬರ ವಿಪರೀತಗೊಂಡಾಗ ಕಾಂಗ್ರೆಸ್ ಪಕ್ಷ ಮೊತ್ತ ಮೊದಲ ಬಾರಿಗೆ ಹಲವು ರಾಜ್ಯಗಳಲ್ಲಿ ಅಧಿಕಾರ ಕಳಕೊಂಡಿತು. ಮೂರನೆಯ ಸಲ ಚರಣ್ ಸಿಂಗ್ ಹಣಕಾಸು ಮಂತ್ರಿಯಾಗಿದ್ದಾಗ [illegible]. ಇದ[illegible] ಇಂದಿರಾಗಾಂಧಿ ಮತ್ತೆ ಅಧಿಕಾರಕ್ಕೆ ಬರುವಂತಾಯಿತು.

ತುರ್ತು ಪರಿಸ್ಥಿತಿ ಬಂದದ್ದು ಎರಡನೇ ಬಾರಿ ಹೀಗಾದಾಗ ಎನ್ನುತ್ತಾರೆ ಈ ಆರ್ಥಿಕ ತಜ್ಞರು. ಈ ಸಮಯದಲ್ಲಿ ಹಣದುಬ್ಬರ, ಆರ್ಥಿಕ ಬಿಕ್ಕಟ್ಟು ಬಹಳ ತೀವ್ರವಾಗಿತ್ತು. ಮುಖ್ಯವಾಗಿ ತೈಲ ಬೆಲೆಯೇರಿಕೆಯಿಂದಾಗಿ ಈ ಹಣದುಬ್ಬರ ಕಾರ್ಮಿಕ ವರ್ಗವನ್ನು ಆಳುವ ಪಕ್ಷದಿಂದ ದೂರ ಮಾಡಿತು. ದೊಡ್ಡ ರೈಲ್ವೇ ಮುಷ್ಕರ ನಡೆಯಿತು. ಅದನ್ನು ನಿರ್ದಯವಾಗಿ ದಮನಮಾಡಲಾಯಿತು. ತುರ್ತು ಪರಿಸ್ಥಿತಿ ಬಂದಿರದಿದ್ದರೆ ಸರಕಾರವನ್ನು ಮತದಾರರು ಅಧಿಕಾರದಿಂದ ಖಂಡಿತವಾಗಿಯೂ ಇಳಿಸಿಬಿಡುವಂತಹ ಸ್ಥಿತಿಯಿತ್ತು.

ತುರ್ತು ಪರಿಸ್ಥಿತಿ ಹಣದುಬ್ಬರ ಹುಟ್ಟುಹಾಕಿದ ರಾಜಕೀಯ ಬದರಿಕೆಯಿಂದ ಆಳುವ ಪಕ್ಷವನ್ನು ಉಳಿಸಿದ್ದು ಒಂದು ಸಂಗತಿಯಾದರೆ, ಇನ್ನೊಂದು ಸಂಗತಿಯೆಂದರೆ ಆಳುವ ಪ್ರಬಲ ವರ್ಗಗಳು ಕಾರ್ಮಿಕರ ಆದಾಯವನ್ನು ಹಿಂಡಿ ಹಣದುಬ್ಬರವನ್ನು ತಮಗೆ ಪ್ರಯೋಜನವಾಗುವ ರೀತಿಯಲ್ಲಿ "ಪರಿಹರಿಸಿ" ಕೊಳ್ಳಲು ಕೂಡಾ ತುರ್ತು ಪರಿಸ್ಥಿತಿ ನೆರವಾಯಿತು ಎಂಬತ್ತ ಡಾ. ಪಟ್ನಾಯಕ್ ಗಮನ ಸೆಳೆಯುತ್ತಾರೆ.

ಕಾರ್ಮಿಕರ, ರೈತರ ಆದಾಯಕ್ಕೆ ಕತ್ತರಿಗಾಗಿ ತುರ್ತು ಪರಿಸ್ಥಿತಿ

ಸಾಮಾನ್ಯವಾಗಿ ಒಂದು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಹಣದುಬ್ಬರಕ್ಕೆ ಪರಿಹಾರವಾಗಿ ಕಾರ್ಮಿಕರ ಆದಾಯದ ಮೇಲೆ ಕಣ್ಣು ಬೀಳುತ್ತದೆ. ಆದರೆ ಹಾಗೆ ಕಾರ್ಮಿಕರ ಆದಾಯಕ್ಕೆ ಕೈ ಹಾಕಿದಾಗ ಇನ್ನೊಂದೆಡೆ ಆರ್ಥಿಕ ಚಟುವಟಿಕೆ ಇಳಿಮುಖವಾಗಿ ನಿರುದ್ಯೋಗ ಹೆಚ್ಚಿ ಅದು ಬಂಡವಾಳಶಾಹಿಗಳ ಲಾಭಕ್ಕೂ ಸಂಚಕಾರ ತರುತ್ತದೆ. 1975ರಲ್ಲಿ ಭಾರತದಲ್ಲಿ ಈ ರೀತಿ ತುರ್ತು ಪರಿಸ್ಥಿತಿಯ ಸರ್ವಾಧಿಕಾರಿ ಆಡಳಿತವನ್ನು ಬಳಸಿ ಕಾರ್ಮಿಕರ ಮೇಲೆ ವೇತನ ಸ್ತಂಭನವನ್ನು ಹೇರಲಾಯಿತು. 'ಹಣದುಬ್ಬರ ತಡೆ' ಕ್ರಮವಾಗಿ ಕಾರ್ಮಿಕರ ಹಕ್ಕುಗಳೂ ಸೇರಿದಂತೆ ಎಲ್ಲಾ ಪ್ರಜಾಪ್ರಭುತ್ವ ಹಕ್ಕುಗಳನ್ನು ಮೊಟಕು ಮಾಡಲಾಯಿತು. ಇನ್ನೊಂದೆಡೆ ಇದೇ 'ಹಣದುಬ್ಬರ-ತಡೆ' ಕ್ರಮವಾಗಿ ರೈತರ ಮೇಲೂ ಇಂತಹ ಕ್ರಮ ಹೇರಲಾಯಿತು -ಹಣದುಬ್ಬರ ತಡೆಯುವ ಹೆಸರಲ್ಲಿ ರೈತರ ಉತ್ಪನ್ನಗಳ ಕೊಳ್ಳುವ ಬೆಲೆಯನ್ನು ತಗ್ಗಿಸಿಡಲಾಯಿತು ಎನ್ನುತ್ತಾರೆ ಡಾ. ಪಟ್ನಾಯಕ್

ಮತ್ತೆ ಬಂದೀತು, ಎಚ್ಚರ!

1977ನಂತರ ಇಂತಹ ಪರಿಸ್ಥಿತಿ ಮತ್ತೆ ಉದ್ಭವವಾಗಲಿಲ್ಲವೇಕೆ? ಈ ಪ್ರಶ್ನೆಯನ್ನೆತ್ತಿಕೊಳ್ಳುತ್ತಾ ಪ್ರಭಾತ್ ಪಟ್ನಾಯಕ್ ಅವರು ಇದಕ್ಕೆ ಮೂರು ಅಂಶಗಳನ್ನು ಗಮನಿಸುತ್ತಾರೆ. ಮೊದಲನೆಯದಾಗಿ ಮೇಲೆ ಹೇಳಿದ ರೈತರ ಉತ್ಪನ್ನಗಳನ್ನು ಕೊಳ್ಳುವ ಬೆಲೆಯನ್ನು ತಗ್ಗಿಸಿಡುವ ವಿಧಾನ ತುರ್ತು ಪರಿಸ್ಥಿತಿಯ ನಂತರವೂ ದೇಶದ ಆರ್ಥಿಕತೆಯ ಭಾಗವಾಗಿಬಿಟ್ಟಿತು. ಎರಡನೆಯದಾಗಿ ಕೊಲ್ಲಿ ದೇಶಗಳಿಗೆ ಹೋಗುವವರ ಸಂಖ್ಯೆ ಒಮ್ಮೆಲೇ ಹೆಚ್ಚಾಗಿ ದೇಶಕ್ಕೆ ಅವರು ಕಳಿಸುವ ಹಣದಿಂದಾಗಿ ವಿದೇಶೀ ವಿನಿಮಯ ಹರಿದು ಬರಲಾರಂಭಿಸಿತು. ಬಾಂಬೆ ಹೈ ನಲ್ಲಿ ನೈಸರ್ಗಿಕ ಅನಿಲ ಉತ್ಪಾದನೆಯಿಂದಾಗಿ ತೈಲ ಆಮದಿನಲ್ಲಿ ಕಡಿತವಾಗಿಯೂ ವಿದೇಶಿ ವಿನಿಮಯ ಉಳಿಯಿತು. ಮೂರನೆಯದಾಗಿ 1980ರ ದಶಕದ ಮಧ್ಯಭಾಗದಲ್ಲಿ ಅಂತರ್ರಾಷ್ಟ್ರೀಯ ಮಾರುಕಟ್ಟೆಯಿಂದಾಗಿ ಪಡೆದ ಸಾಲ ವಾಸ್ತವವಾಗಿ ಈ ಬಿಕ್ಕಟ್ಟಿನ ರೂಪವನ್ನು ಬದಲಿಸಿತಷ್ಟೆ, ಅದನ್ನು ಪರಿಹರಿಸಲಿಲ್ಲ ಎನ್ನುತ್ತಾರೆ ಡಾ.ಪಟ್ನಾಯಕ್.

ಅಂದರೆ ಈ ಬಿಕ್ಕಟ್ಟು ಇನ್ನೂ ಇದೆ. ಒಂದು ಪರ್ಯಾಯ ಅಭಿವೃದ್ಧಿ ದಾರಿಯನ್ನು, ಹೆಚ್ಚು ಸಮಾನತೆಯಿರುವ ಒಂದು ದಾರಿಯನ್ನು ಹಿಡಿಯುವವರೆಗೂ ಇದು ಬರುತ್ತಲೇ ಇರುತ್ತದೆ. ಆದ್ದರಿಂದ ಆಳುವ ವರ್ಗಗಳಿಗೆ ಸರ್ವಾಧಿಕಾರೀ ವಿಧಾನ ಬಳಸುವ ಚಪಲವೂ ಇದ್ದೇ ಇರುತ್ತದೆ ಎನ್ನುವ ಡಾ. ಪ್ರಭಾತ್ ಪಟ್ನಾಯಕ್ ಈಗ ಚುನಾವಣಾ ದೃಷ್ಟಿಯಿಂದಾಗಿ ನರಸಿಂಹರಾಯರ "ಸುಧಾರಣೆ"ಗಳಿಗೆ ಕಂಟಕ ಬಂದಿದೆ, ಆದ್ದರಿಂದ ಪ್ರಜಾಪ್ರಭುತ್ವವನ್ನು ಕೈಬಿಡಬಹುದು ಎಂಬ ತರ್ಕ ಮೂಡಿಬರುತ್ತಿದೆ, ಜಾಗರೂಕರಾಗಿರಿ ಎಂದು ಎಚ್ಚರಿಸಿದ್ದಾರೆ.

ಹೊಸ ಪಕ್ಷದ ಉದಯ

ಕಾಂಗ್ರೆಸ್ ಪಕ್ಷ ಅಧಿಕಾರದ ಮೇಲಿನ ತನ್ನ ...ಸ್ತೇದಾರಿಕೆ ಕಳಕೊಂಡ ಹಾಗೂ ಆಳುವ ವರ್ಗಗ...ಳ ಒಡಕು ಬಂದ ಹಿನ್ನೆಲೆಯಲ್ಲಿ ತುರ್ತು ಪರಿಸ್ಥಿತಿ ...ದಿತ್ತು. ಆದ್ದರಿಂದ ತುರ್ತು ಪರಿಸ್ಥಿತಿಗೆ ಬಲಪಂ...ಯ ಶಕ್ತಿಗಳೂ ವಿರುದ್ಧವಾಗಿದ್ದವು. ಅವು ನಮ್ಮ ...ಮಾಜದ ಪ್ರಜಾಪ್ರಭುತ್ವ ಸಂರಚನೆಯ ಪ್ರಶ್ನೆಯನ್ನು ...ತ್ತಿದ್ದರು.

ಸಂಸತ್ತಿಗೆ ಚುನಾವಣೆ ಘೋಷಿಸಿದಾಗ ಇಂದಿರಾ ...ಂಧಿ ತನ್ನನ್ನು ಯಾವ ಪ್ರತಿಪಕ್ಷವೂ ಎದುರಿಸಲಾ...ರ ಎಂದು ಭಾವಿಸಿದ್ದರು. ನಾಮಪತ್ರ ಸಲ್ಲಿಸಲು ...ಕ್ಕಿನ ಸಮಯವನ್ನು ನೀಡದೆ ಸಮಾನ ವಿಚಾರ ...ರುವ ವ್ಯಕ್ತಿಗಳು, ಪಕ್ಷಗಳು ಸೇರಿ ಒಂದು ಪಕ್ಷ ...ಚಿಸಿಕೊಳ್ಳಲೂ ಸಮಯವಿಲ್ಲದಂತೆ ಮಾಡಿದರು. ...ದರೂ ಕೆಲವೇ ದಿನಗಳಲ್ಲಿ ಜನತಾ ಪಾರ್ಟಿ ಅಸ್ತಿತ್ವಕ್ಕೆ ...ತು. ಇದರಲ್ಲಿ ಜನಸಂಘದಂಥಹ ಕೋಮುವಾದಿ ...ಗಳೂ ಇದ್ದವು. ತುರ್ತುಪರಿಸ್ಥಿತಿ ಹಾಗೂ ಸರ್ವಾ...ಧಿಕಾರಿ ಆಡಳಿತವನ್ನು ಕೊನೆಗಾಣಿಸಲು, ಸಂವಿಧಾನದ ...ಜಾಪ್ರಭುತ್ವ ರಚನೆಯನ್ನು ಹಾಳುಗೆಡಹುವ ತುರ್ತು ...ಸ್ಥಿತಿಯ ಚೌಕಟ್ಟನ್ನು ಮುರಿಯಲು ನಮ್ಮ ಪಕ್ಷ ...ತಾಪಕ್ಷಕ್ಕೆ ಬೆಂಬಲ ನೀಡಿತು:

ಚುನಾವಣೆಗಳು ನಡೆದಾಗ ದೀರ್ಘ ಕಾಲ ...-ಫ್ಯಾಸಿಸ್ಟ್ ದಮನವನ್ನು ಎದುರಿಸಿದ್ದ ನಮ್ಮ ಪಕ್ಷ ...ಮ ಬಂಗಾಳ, ತ್ರಿಪುರಾ, ಕೇರಳಗಳ ವಿಧಾನಸಭೆ...ಲ್ಲಿ ಹೆಚ್ಚಿನ ಬೆಂಬಲ ದೊರೆತಿದ್ದು ಆಕಸ್ಮಿಕವೇನಲ್ಲ. ...ತ್ತರ ಭಾರತದಲ್ಲಿ ಕಾಂಗ್ರೆಸ್ ಕೊಚ್ಚಿಹೋಯಿತು. ...ಮೃತಸರದಿಂದ ಒಂದು ಸೀಟು ಮಾತ್ರ ಅದಕ್ಕೆ ...ರೆಯಿತು. ಸ್ವತಃ ಇಂದಿರಾಗಾಂಧಿ ರಾಯಬರೇಲಿಯಲ್ಲಿ ...ಣ್ಣು ಮುಕ್ಕಿದರು.

ಕಳೆದ 18 ವರ್ಷಗಳಲ್ಲಿ

ಜನತಾ ಪಕ್ಷ ಸರಕಾರಕ್ಕೆ ಪ್ರಜಾಪ್ರಭುತ್ವ ಹಕ್ಕುಗಳ ...ರು ಸ್ಥಾಪನೆಗಾಗಿಯಷ್ಟೇ ನಾವು ಬೆಂಬಲ ನೀಡಿ...ವು. ಏಕೆಂದರೆ ವರ್ಗ ದೃಷ್ಟಿಯಿಂದ ಜನತಾಪಕ್ಷ ...ಮತ್ತು ಕಾಂಗ್ರೆಸ್ ಪಕ್ಷದಲ್ಲಿ ಭಿನ್ನತೆಯೇನೂ ಇರಲಿಲ್ಲ. ...ದ್ದರಿಂದ ಮೊರಾರ್ಜಿ ದೇಸಾಯಿ ಸರಕಾರ ಬಲಪಂ...ಥದತ್ತ ಸಾಗಲಾರಂಭಿಸಿದಾಗ ನಾವು ಆ ಸರಕಾರವನ್ನು ...ಉರುಳಿಸಲು ಕೂಡಾ ಹಿಂಜರಿಯಲಿಲ್ಲ. ಈ ಪ್ರಕ್ರಿಯೆ...ಯಲ್ಲಿ ಎಡಪಕ್ಷಗಳು ಬಲಗೊಂಡವು. ಅಷ್ಟೇ ಅಲ್ಲ, ...ದೇಶದ ಪ್ರಜಾಪ್ರಭುತ್ವ ಶಕ್ತಿಗಳು ಇನ್ನಷ್ಟು ಬಲ ...ಪಡೆದವು. ಪ್ರಜಾಪ್ರಭುತ್ವ ಹಕ್ಕುಗಳ ರಕ್ಷಣೆ ನಡೆಸಬೇ...ಕೆಂಬ ಜನರ ಅರಿವನ್ನು, ಕಾರ್ಮಿಕ ವರ್ಗದ, ರೈತರ ...ಇತರ ಹಕ್ಕುಗಳ ರಕ್ಷಣೆ ಅಗತ್ಯವೆಂಬ ಅರಿವನ್ನು ...ಸರಿಯಾದ ದಾರಿಯಲ್ಲಿ ಕೊಂಡೊಯ್ಯಲು ನಮಗೆ ...ಸಾಧ್ಯವಾಯಿತು. ಈಗ ಹಿಂದಿರುಗಿ ನೋಡಿದಾಗ ...ಕಳೆದ 18 ವರ್ಷಗಳಲ್ಲಿ ಆಳುವ ಪಕ್ಷ ಮತ್ತೆ ಇಂತಹ ...ವಿಧಾನಗಳನ್ನು ಅನುಸರಿಸದಂತೆ ತಡೆಯಲು ನಮಗೆ ...ಸಾಧ್ಯವಾಗಿದೆ ಎಂಬ ತೀರ್ಮಾನಕ್ಕೆ ನಾವು ಬರಲು ...ಸಾಧ್ಯ.

ಸೂಕ್ಷ್ಮ ಪ್ರಯತ್ನಗಳು ಮುಂದುವರೆದಿವೆ

ಈಗಲೂ ದೇಶ ರಾಜಕೀಯ ಅಸ್ಥಿರತೆಯ ...ಒಂದು ಅವಧಿಯ ಮೂಲಕ ಹಾದುಹೋಗುತ್ತಿದೆ. ...ಒಂದೆಡೆ ಕಾಂಗ್ರೆಸ್ ನ ಆರ್ಥಿಕ ನೀತಿಗಳಿಂದಾಗಿ, ...ಮತ್ತೊಂದೆಡೆ ಬಿಜೆಪಿಯಂತಹ ಕೋಮುವಾದಿ ...ಪಕ್ಷಗಳಿಂದಾಗಿ ಎರಡು ರೀತಿಯ ಅಪಾಯಗಳನ್ನು ...ದೇಶ ಎದುರಿಸುತ್ತಿದೆ. ಇಂತಹ ಸಂಧರ್ಭದಲ್ಲಿ ತಮ್ಮ ...ಆಳ್ವಿಕೆಯನ್ನು ಶಾಶ್ವತಗೊಳಿಸಲು ಆಳುವ ವರ್ಗಗಳು ...ಹೊಸ ಹೊಸ ಕಸರತ್ತು ನಡೆಸಿವೆ. ಸಂವಿಧಾನವನ್ನೇ ...ಬದಲಿಸುವ, ಸಂಸದೀಯ ವ್ಯವಸ್ಥೆಯ ಬದಲು ...ಅಧ್ಯಕ್ಷೀಯ ಮಾದರಿ ತರಬೇಕೆಂಬ ಸೂಚನೆಗಳು ...ಇಂತಹ ಕಸರತ್ತುಗಳ ಭಾಗ. ಇದಕ್ಕೆ ಬಿಜೆಪಿಯೂ ...ಗುಂಗುಡುತ್ತಿರುವುದು ಆಕಸ್ಮಿಕವೇನಲ್ಲ. ಈ ಅಪಾ...ಯವನ್ನು ಅರಿತು ಅದರ ವಿರುದ್ಧ ಹೋರಾಡಬೇಕಾ...ಗಿದೆ. ಸಂಸದೀಯ ವ್ಯವಸ್ಥೆ ನಮ್ಮ ದೇಶದ ಐಕ್ಯತೆ...ಯನ್ನು ಉಳಿಸಲು ಅತ್ಯಗತ್ಯ ಎಂದು ಆರಂಭದಿಂ...ದಲೇ ಸಿದ್ಧವಾಗಿದೆ. ಆದ್ದರಿಂದ ಈ ಸಂಸದೀಯ ...ವ್ಯವಸ್ಥೆಯನ್ನು ರಕ್ಷಿಸಿಕೊಳ್ಳುವುದು ಜನರ ಹಿತದೃಷ್ಟಿ...ಯಿಂದ ಅಗತ್ಯ ಎಂಬ ಅರಿವು ಮೂಡಿಸಬೇಕಾಗಿದೆ.

...ತಮ್ಮನ್ನು ಲೆಕ್ಕಕ್ಕೆ ತಗೊಳ್ಳದಿರಲು ಸಾಧ್ಯವಿಲ್ಲ ...ಎಂಬ ಅರಿವು ಜನಸಾಮಾನ್ಯರಲ್ಲಿ ಸಾಕಷ್ಟು ಇದೆ ...ಎಂಬುದನ್ನು ಕೂಡಾ ನಾವು ಗಮನಿಸಬೇಕು. ...ಇವರಲ್ಲಿ ತುಂಬಿದ ದುಗುಡ ಹಿಂದಿರುಗಿ ಹೊಡೆ...ಯಲು ಅವಕಾಶ ದೊರೆತಾಗಲೆಲ್ಲಾ ಹೊರಚಿಮ್ಮಿದೆ. ...ನಮ್ಮ ಸಂವಿಧಾನದ ಮೂಲಭೂತ ಸ್ವರೂಪವನ್ನೇ ...ಬದಲಿಸುವ ಹೊಸ ಕಸರತ್ತುಗಳನ್ನು ವಿಫಲಗೊ...ಳಿಸಲು ಬಳಸಬೇಕಾಗಿದೆ. ಬಹುಶಃ ಜನಗಳ ಮೇಲೆ ...ಮತ್ತೆ ಈಗ ತುರ್ತು ಪರಿಸ್ಥಿತಿಯ ಸ್ವರೂಪವನ್ನೇ ...ಹೇರಲಿಕ್ಕಿಲ್ಲ. ಆದರೆ ಇನ್ನೂ ಸೂಕ್ಷ್ಮವಾದ ವಿಧಾ...ನಗಳ ಮೂಲಕ ಜನರನ್ನು ತಪ್ಪು ದಾರಿಗೆಳೆಯಲು ಆ ...ಮೂಲಕ ಅಧಿಕಾರದಲ್ಲಿರುವ ಪಕ್ಷದ ವರ್ಗ ಆಳ್ವಿಕೆ...ಯನ್ನು ಉಳಿಸಿಕೊಳ್ಳಲು ಪ್ರಯತ್ನ ನಡೆದಿದೆ.

ದೇಶ ಬಿಟ್ಟು ತೊಲಗಿದ ದೆವ್ವಗಳು ಈಗ ವಾಪಸ್ಸು

ಮೂರು ದಶಕಗಳ ಹಿಂದೆ ತೈಲ ಉದ್ಯಮವನ್ನು ರಾಷ್ಟ್ರೀಕರಣ ಮಾಡಿದಾಗ ದೇಶ ಬಿಟ್ಟು ತೊಲಗಿದ ದೈತ್ಯ ತೈಲ ಕಂಪನಿಗಳು ಈಗ ಭಾರತದೊಳಕ್ಕೆ ವಾಪಸ್ಸು ಬರುವ ಹುನ್ನಾರ ನಡೆಸಿವೆ. ಕೆಲವೇ ದಿನಗಳಲ್ಲಿ ದೇಶದೊಳಗೇ ಬಂದಿಳಿಯುತ್ತವೆ. ಕಾರಣ ? ಉದಾರೀಕರಣ ರಾತ್ರಿ ಕಂಡ ಬಾವಿಗೆ ಹಗಲು ಬೀಳುವ (ಅಲ್ಲ, ದೇಶವನ್ನು ದೂಡುವ) ಉದಾರೀಕರಣದ ನರಸಿಂಹರಾಯರ ಸರ್ಕಾರದ ಕೊಡುಗೆ ಇದು (ಅವರನ್ನು ಆರಿಸಿದ ಈ ದೇಶದ ಜನತೆಗಲ್ಲ ಬದಲಿಗೆ ಬಹುರಾಷ್ಟ್ರೀಯ ಕಂಪೆನಿಗಳಿಗೆ)

ತೈಲ ಉದ್ಯಮದ ಎಲ್ಲಾ ವಲಯಗಳಿಗೆ ಬರತೊಡಗಿರುವ ಈ ಕಂಪನಿಗಳು ತೈಲ ಶುದ್ಧಿಕರಣ ಘಟಕಗಳನ್ನು ಪ್ರಾರಂಭಿಸಿವೆ. ಸದ್ಯಕ್ಕೆ ಭಾರತದಲ್ಲಿ ಸರ್ಕಾರಿ ಸ್ವಾಮ್ಯದ ಪ್ರಾಧಿಕಾರಗಳಾದ 'ಇಂಡಿಯನ್ ಆಯಿಲ್' ಭಾರತ್ ಪೆಟ್ರೋಲಿಯಂ ಮತ್ತು ತೈಲ ಶೋಧನೆಯಲ್ಲಿ ತೊಡಗಿರುವ ತೈಲ ಮತ್ತು ನೈಸರ್ಗಿಕ ಅನಿಲ ಪ್ರಾಧಿಕಾರ ಇವು ತೈಲ ಶೋಧನೆ ಶುದ್ಧೀಕರಣ ಮತ್ತು ಮಾರಾಟದಲ್ಲಿ ತೊಡಗಿರುವ ಸಂಸ್ಥೆಗಳು

ಸರ್ಕಾರ ಈಗ ದೇಶದ ಈ ಉದ್ಯಮದಲ್ಲೇ ಸ್ಪರ್ಧಾತ್ಮಕತೆ ತರುವ ಉದ್ದೇಶದಿಂದ ಈ ಸರ್ಕಾರಿ ಸ್ವಾಮ್ಯದ ಕಂಪನಿಗಳಲ್ಲಿನ ತನ್ನ ಪಾಲಿನ ಕೆಲವು ಭಾಗವನ್ನು ಮಾರುತ್ತಿದೆ. ಜೊತೆಗೇ ವಿದೇಶೀ ಬಹುರಾಷ್ಟ್ರೀಯ ಕಂಪನಿಗಳನ್ನು ದೇಶದೊಳಕ್ಕೆ ಹೆದ್ದಾರಿ ತೆರೆದು ಬಿಡುತ್ತಿದೆ.

ಸರ್ಕಾರ ತನ್ನ ಈ ಕ್ರಮಗಳನ್ನು ಸಮರ್ಥಿಸಿಕೊಳ್ಳಲು ಅಂಕೆ-ಸಂಖ್ಯೆಗಳನ್ನು ನೀಡುತ್ತಿದೆ. ಅದರ ಪ್ರಕಾರ ದೇಶದ್ಲ ತೈಲ ಶುದ್ಧೀಕರಣದಲ್ಲಿ ಸಾಮರ್ಥ್ಯದ ಅಭಾವ ಇದೆ. ಇದು ಸುಮಾರು 55 ದಶಲಕ್ಷ ಟನ್ನುಗಳಷ್ಟು ಈ ಅಭಾವ ಹೋಗಲಾಡಿಸಲು ಶುದ್ಧೀಕರಣ ಸಾಮರ್ಥ್ಯ ಹೆಚ್ಚಿಸಬೇಕು. ನಮ್ಮಲ್ಲಿ ಹಣವಿಲ್ಲ. ಆಧುನಿಕ ತಂತ್ರಜ್ಞಾನವಿಲ್ಲ. ಆದ್ದರಿಂದ ವಿದೇಶಿಯರಿಗೆ ರತ್ನ ಗಂಬಳಿ ಸ್ವಾಗತ

ತೈಲ ಶೋಧನೆಯ ಗುತ್ತಿಗೆಯನ್ನು ಈಗ ವರ್ಷದಾದ್ಯಂತ ನೀಡಲಾಗುತ್ತಿದೆ. ಹಲವು ವಿದೇಶೀ ಕಂಪನಿಗಳು ಆಗಲೇ ತೈಲ ಶೋಧನೆಯಲ್ಲಿ ತೊಡಗಿದರೂ ಇನ್ನೂ ಯಶಸ್ವಿಯಾಗಿಲ್ಲ.

ಆದರೆ ಒಂದು ಮಾತು ಸ್ಪಷ್ಟ. ತನ್ನ ಸ್ವಾಮ್ಯದಲ್ಲೇ ಇರುವ ತೈಲ ಕಂಪನಿಗಳನ್ನು ಸರ್ಕಾರ ಸರಿಯಾದ ರೀತಿಯಲ್ಲಿ ನಿರ್ವಹಿಸಿಲ್ಲ ಮತ್ತು ಅವುಗಳ ಸಾಮರ್ಥ್ಯದ ಪೂರ್ಣ ಬಳಕೆಯ ಪ್ರಯತ್ನವನ್ನೂ ಮಾಡಿಲ್ಲ ಆದರೂ ಉದಾರೀಕರಣವನ್ನು ಸಮರ್ಥಿಸಿಕೊಳ್ಳಲು ಈ ಎಲ್ಲ ಸುಳ್ಳುಗಳ ಸರಮಾಲೆ.

ವಿಶ್ವಬ್ಯಾಂಕಿನೆದುರು ಭಾರತದ ಭಿಕ್ಷಾಪಾತ್ರೆ

ಭಾರತ ಮತ್ತೆ ವಿಶ್ವ ಬ್ಯಾಂಕಿನೆದುರು ತನ್ನ ಭಿಕ್ಷಾಪಾತ್ರೆಯನ್ನು ಹಿಡಿದಿದೆ. ದೇಶದ ಅಂತರ್‌ರಚನಾ ಸೌಕರ್ಯಗಳನ್ನು (ಅಂದರೆ ವಿದ್ಯುತ್, ರಸ್ತೆ, ರೈಲು, ಸಂಪರ್ಕ ಇತ್ಯಾದಿ) ಹೆಚ್ಚಿಸಲು ವಿಶ್ವಬ್ಯಾಂಕ್ ತನ್ನ ನೆರವಿನ ಪ್ರಮಾಣವನ್ನು ಹೆಚ್ಚಿಸಬೇಕೆಂಬುದೇ ಅದರ ಅಹವಾಲು. ವಿಶ್ವ ಬ್ಯಾಂಕಿನ ಎರಡು ಅಂಗ ಸಂಸ್ಥೆಗಳಾದ ಅಂತರ್‌ರಾಷ್ಟ್ರೀಯ ಅಭಿವೃದ್ಧಿ ಸಂಸ್ಥೆ (ಐಡಿಎ)ಯಿಂದ 1.7 ಶತಕೋಟಿ ಡಾಲರುಗಳು ಮತ್ತು ಪುನರ್ನಿರ್ಮಾಣ ಮತ್ತು ಅಭಿವೃದ್ಧಿಗಾಗಿನ ಅಂತರ್‌ರಾಷ್ಟ್ರೀಯ ಬ್ಯಾಂಕ್ (ಐಬಿಆರ್ ಡಿ)ನಿಂದ 1.1. ಶತಕೋಟಿ ಡಾಲರುಗಳನ್ನು ಭಾರತ ಕೇಳಿದೆ.

ಕಳೆದ ವರ್ಷ ಭಾರತ 2.4 ಶತ ಕೋಟಿ ಡಾಲರುಗಳ ನೆರವನ್ನು ಕೇಳಿತು. ಅದಕ್ಕೆ ಪ್ರತಿಯಾಗಿ 2.25 ಶತಕೋಟಿ ಡಾಲರುಗಳ ಸಾಲ ಅದಕ್ಕೆ ಧೊರಕಿತು.

ಇದು ರಿಯಾಯಿತಿ ದರದಲ್ಲಿ ಕೇಳಿರುವ ಸಾಲ ಇದಲ್ಲದೆ ಭಾರತ 4.0 ಶತಕೋಟಿ ಡಾಲರುಗಳ ನೆರವನ್ನೂ ಕೇಳಿದೆ. ಭಾರತದ ಈ ಕೋರಿಕೆಗೆ ಪ್ರತಿಯಾಗಿ ವಿಶ್ವ ಬ್ಯಾಂಕ್ ಒಟ್ಟು 6.8 ಶತಕೋಟಿ ಡಾಲರುಗಳ ನೆರವನ್ನು ಘೋಷಿಸಿದೆ. ಇದರಲ್ಲಿ 2.8 ಶತಕೋಟಿ ಡಾಲರುಗಳು ರಿಯಾಯಿತಿ ದರದಲ್ಲಿ ದೊರೆಯಲಿವೆ.

ವಿಶ್ವ ಬ್ಯಾಂಕ್‌ನ ಪದಾಧಿಕಾರಿಗಳು ಭಾರತದ ಸಾಧನೆಯನ್ನು ಹೊಗಳುತ್ತಿದ್ದಾರೆ. ಇಷ್ಟು 'ದೊಡ್ಡ ಮೊತ್ತದ ಸಾಲ ಘೋಷಣೆ' ಮತ್ತು ಈ ಹೊಗಳುವಿಕೆಯನ್ನು ಗಮನಿಸಿದರೆ ವಿಶ್ವಬ್ಯಾಂಕ್ ಇನ್ನೂ ಹೆಚ್ಚೆಚ್ಚು ಷರತ್ತುಗಳನ್ನು ಭಾರತದ ಮೇಲೆ ಹೇರುತ್ತದೆಂಬುದರಲ್ಲಿ ಸಂಶಯವಿಲ್ಲ. ಈ ಷರತ್ತುಗಳು ದೇಶದ ಅಪಾರ ಜನಸಮೂಹದ ಆಸಕ್ತಿಗಳಿಗೆ ವಿರುದ್ಧವಾಗಿರುತ್ತವೆ ಎಂಬುದರಲ್ಲಿ ಸಂಶಯವಿಲ್ಲ. ಇದೇ ವಿಶ್ವ ಬ್ಯಾಂಕ್ ಐ.ಎಂ.ಎಫ್. ತಂತ್ರಗಾರಿಕೆ.

ಇಸ್ಕೋ ಸತ್ತರೆ ಅಂತ್ಯಕ್ರಿಯೆ ಮಾಡೋಣ


ಇದು ಕೇಂದ್ರ ಉಕ್ಕು ಕಾಸು ಮಂತ್ರಾಲಯದ ಮಾತು. ಇಸ್ಕೊ (ಭಾರತೀಯ ಕಬ್ಬಿಣ ಮತ್ತು ಉಕ್ಕು ಕಂಪನಿ IISCO) ಒಂದು ಸರ್ಕಾರಿ ವಲಯದ ಉದ್ದಿಮೆ ಇದು ಪ. ಬಂಗಾಳದಲ್ಲಿದೆ. ಈ ಉದ್ದಿಮೆ ಈಗ ರೋಗಗ್ರಸ್ತವಾಗಿದೆ. ಈ ರೋಗದಿಂದ ಹೊರಬಂದು ಅದು ಲಾಭ ಗಳಿಸುವಂತಾಗಲು 1100 ಕೋಟಿ ರೂಪಾಯಿಗಳ ಸರ್ಕಾರಿ ನೆರವು ಬೇಕಾಗಿದೆ ಈ ನೆರವನ್ನು ಸರ್ಕಾರ ಈಗ ನಿರಾಕರಿಸಿದೆ.

ಬೇಕಾದರೆ ಇಸ್ಕೋ ಹೊರಗಿನಿಂದ ಹಣ ಸಹಾಯ (ವಾಣಿಜ್ಯ ವಲಯದಿಂದ) ಪಡೆಯಲಿ ಎಂಬುದು ಅದರ ನಿಲುವು. ಈ ವಿಷಯದಲ್ಲಿ ಹಲವು ದಿನಗಳಿಂದ ಇಲ್ಲಿ ಚಳುವಳಿ ನಡೆದಿದೆ. ಎಲ್ಲ ಕಾರ್ಮಿಕ ಸಂಘಟನೆಗಳು ಒಗ್ಗಟ್ಟಾಗಿ ಹೋರಾಟ ನಡೆಸಿವೆ. ಕೇಂದ್ರ ಸರ್ಕಾರ ಖಾಸಗಿಯವರಿಗೆ ಮೂರು ಕಾಸಿಗೆ ಈ ಬೃಹತ್ ಉದ್ದಿಮೆಯನ್ನು ಮಾರುವ ಪ್ರಯತ್ನ ಮಾಡಿತು. ಆದರೆ ಕಾರ್ಮಿಕರ ಎಚ್ಚರ ಮತ್ತು ಪ್ರತಿಭಟನೆಯಿಂದಾಗಿ ಅದು ಸಾಧ್ಯವಾಗಲಿಲ್ಲ. ಆದ್ದರಿಂದ ಅದು ಈ ಪ್ರಕರಣವನ್ನು ಬಿಐಎಫ್ ಆರ್‌ಗೆ ಒಪ್ಪಿಸಿತು.

ಈಗ ಸಹಸ್ರಗಟ್ಟಲೆ ಕಾರ್ಮಿಕರು ಅತಂತ್ರರಾಗಿ ಹೋಗಿದ್ದಾರೆ. ಆದರೆ ಅವರು ಉಗ್ರ ಹೋರಾಟಕ್ಕೂ ಸಿದ್ಧರಾಗಿದ್ದಾರೆ. ಸಿಐಟಿಯು ವಿನ ನೇತೃತ್ವದಲ್ಲಿ ದೇಶದಾದ್ಯಂತ ಉಕ್ಕು ಉದ್ದಿಮೆಯ ಒಂದು ದಿನದ ಬಂದ್ ಮಾಡುವ ನಿರ್ಧಾರವನ್ನು ಅವರು ಮಾಡಿದ್ದಾರೆ.

ರಾಜ್ಯದಲ್ಲಿ ಬರಗಾಲದ ನೆರಳು

ಕೇಂದ್ರ ಸರ್ಕಾರ ಈಗ ಎಂತಹ ತಂತ್ರಗಾರಿಕೆ ಬಳಸುತ್ತದೆಂದರೆ ಹವಾಮಾನ ಇಲಾಖೆ ಸರಿಯಾದ ರೀತಿಯಲ್ಲಿ ಹವಾಮಾನ ಅಥವಾ ಮಳೆಯ ಮುನ್ಸೂಚನೆಯನ್ನು ನೀಡುವಂತಿಲ್ಲ. ಸರ್ಕಾರದ ಪರಿಸ್ಥಿತಿಯೂ ಹಾಗಿದೆ. ಮಳೆ ಅಭಾವ ಸ್ಥಿತಿ ಉಂಟಾಗಬಹುದೆಂಬ ಮುನ್ಸೂಚನೆ ನೀಡಿದರೂ ಬಂಡವಾಳಿಗರು ಆಹಾರಧಾನ್ಯ ಮತ್ತಿತರೆ ಅವಶ್ಯ ಸಾಮಗ್ರಿಗಳನ್ನು ಅಕ್ರಮದಾಸ್ತಾನು ಮಾಡಿ ಮಾರುಕಟ್ಟೆಯಲ್ಲಿ ಅಭಾವ ಸೃಷ್ಟಿಸಿ ಬೆಲೆ ಏರಿಸಿ ಅಪಾರ



[illegible] ಆದ್ದರಿಂದ ಸರ್ಕಾರ ಈ ಇಲಾಖೆ ಉತ್ತಮ ಮಳೆಯ ಮುನ್ಸೂಚನೆಯನ್ನೇ ನೀಡುತ್ತದೆ. (ಪ್ರತಿವರ್ಷವೂ)

ಈ ವರ್ಷವೂ ಉತ್ತಮ ಮಳೆಯ ಮುನ್ಸೂಚನೆಯನ್ನೇ ಈ ಹವಾಮಾನ ಇಲಾಖೆ ನೀಡಿರುವುದು. ಆದರೆ ಕರ್ನಾಟಕದ 13 ಜಿಲ್ಲೆಗಳಲ್ಲಿ ಮಳೆ ನಿರೀಕ್ಷಿತ ಪ್ರಮಾಣದಲ್ಲಿ ಆಗಿಲ್ಲ. ಬರಗಾಲದ ಕರಿನೆರಳು ತಲೆಯ ಮೇಲೆ ಕಾಣಿಸಿಕೊಳ್ಳುತ್ತಿದೆ. ಕಳೆದ ಆರೇಳು ವರ್ಷಗಳ ಕಾಲ ದೇಶದಲ್ಲಿ ಅತ್ಯುತ್ತಮ ಮಳೆಯಾಗುತ್ತ ಬಂದಿದ್ದು ಬೆಳೆಗಳೂ ಚೆನ್ನಾಗಿ ಬಂದಿವೆ.

ಆದರೆ ಉದಾರೀಕರಣದ ಪ್ರಾರಂಭವಾದಂದಿನಿಂದ ಬೆಲೆಗಳು ಗಗನಕ್ಕೇ ಹಾರತೊಡಗಿವೆ. ಒಳ್ಳೆಯ ಮಳೆ ಬೆಳೆ ಆದಾಗಲೂ ಬೆಲೆ ಏರಿದರೆ ಮಳೆ ಬೆಳೆ ಚೆನ್ನಾಗಿ ಆಗದೇ ಇರುವಾಗ ಏನಾಗಬಹುದು?

ರಾಜ್ಯದಲ್ಲಿ ಅಭಾವ ಸ್ಥಿತಿಯನ್ನು ಎದುರಿಸುತ್ತಿರುವ ಸಿದ್ಧತೆಗಳನ್ನು ಸರ್ಕಾರ ಈಗ ಮಾಡತೊಡಗಿದೆ. ಆದರೆ ಉದಾರೀಕರಣದಡಿ ಇಂತಹ ಸ್ಥಿತಿಗಳನ್ನು ಎದುರಿಸುವುದು ಬಹು ಕಷ್ಟದ ಕೆಲಸ ಎಂಬುದನ್ನು ದೇವಗೌಡರ ಸರ್ಕಾರ ಮಣಗಾಣಲಿದೆ. ರಾಜ್ಯದ ಬಡಜನತೆ ಈ ಸ್ಥಿತಿಯ ನೋವನ್ನು ಅನುಭವಿಸಬೇಕಾಗಿರಬಹುದು. ಆದರೂ ಕೇಂದ್ರದಲ್ಲಿ ನರಸಿಂಹರಾಯರ ಸರ್ಕಾರ ಮತ್ತು ರಾಜ್ಯದಲ್ಲಿ ದೇವೇಗೌಡರ ಸರ್ಕಾರ (ಸ್ವಲ್ಪ ಮಟ್ಟಿಗಾದರೂ) ಉದಾರೀಕರಣದ ಗುಣಗಾನ ಮಾಡುತ್ತವೆ. ಎಂತಹ ವಿಪರ್ಯಾಸ!

ಮುಂಗಾರು ಮಂಗಾಟವಾಡಿದರೆ

ದಿನದಿಂದ ದಿನಕ್ಕೆ ಸಮಸ್ಯೆ ಉಲ್ಬಣಗೊಳ್ಳುತ್ತಿರುವಂತೆ ಕಾಣುತ್ತಿದೆ. ಮುಂಗಾರು ದುರ್ಬಲವಾಗಿ ಮಳೆ ಸರಿಯಾಗಿ ಆಗುತ್ತಿಲ್ಲ. ಪರಿಸ್ಥಿತಿಯ ಪರಿಣಾಮಗಳು ಆಗಲೇ ಕಾಣತೊಡಗಿವೆ. ಬೇಸಿಗೆಯ ಬೇಗೆಯಲ್ಲಿ ಗಗನಕ್ಕೇ ಏರಿದ ತರಕಾರಿ ಬೆಲೆಗಳು ಮಳೆ ಚೆನ್ನಾಗಿ ಆಗಿದ್ದರೆ ಕೆಳಗಿಳಿಯಬೇಕಾಗಿತ್ತು. ಆದರೆ ಮಳೆಯಾಗಿಲ್ಲ, ಬೆಲೆಗಳೂ ಇಳಿದಿಲ್ಲ. ಈಗ ಅಡಿಗೆ ಎಣ್ಣೆಯ ಬೆಲೆಗಳು ಯದ್ವಾ ತದ್ವಾ ಏರತೊಡಗಿವೆ. ಮುಂಗಾರು ವಿಳಂಬವಾದುದಕ್ಕೆ ಎಣ್ಣೆ ಕಾಳುಗಳ ಉತ್ಪಾದನೆ ನಿರೀಕ್ಷಿತ ಪ್ರಮಾಣದಲ್ಲಿ ಆಗಲಿಕ್ಕಿಲ್ಲವೆಂಬ ಮುನ್ಸೂಚನೆ ಬಂದಿದ್ದೇ ತಡ ಬೆಲೆಗಳು ಗಗನಕ್ಕೆ ಏರತೊಡಗಿವೆ.

ಉದಾರೀಕರಣದ ಈ ದಿನಗಳಲ್ಲಿ ಬಂಡವಾಳಿಗರು ಇಂತಹ ಸನ್ನಿವೇಶಗಳ ಲಾಭ ಪಡೆದು ಜನರ ಬದುಕಿನೊಂದಿಗೆ ಜೂಜಾಡಿ ಲಾಭದ ಮೂಟೆಗಳನ್ನೇ ಗಳಿಸುವ ಪಿಪಾಸೇ ಒಳಗಾಗುತ್ತಾರೆ ಯಾವುದೇ ವಸ್ತುವಿನ ಉತ್ಪಾದನೆ ಕಡಿಮೆಯಾಗುವ ಲಕ್ಷಣಗಳು ಕಂಡು ಬರುತ್ತಿದ್ದಂತೆ ಅಕ್ರಮ ದಾಸ್ತಾನುಗಳನ್ನು ಮಾಡಿ ಬೆಲೆ ಏರಿಸುತ್ತಾರೆ. ಮಾರುಕಟ್ಟೆಯಲ್ಲಿ ಆ ವಸ್ತುವಿನ ಅಭಾವ ಕಂಡು ಬಂದರೆ ಆ ಮೇಲೆ ಈ ವ್ಯಾಪಾರಸ್ಥರು ಹೇಳಿದ್ದೇ ದರ. ಬೇಕಾದರೆ ಸಾಧ್ಯವಾದರೆ ಕೊಳ್ಳಿ ಇಲ್ಲವಾದರೆ ಸಾಯಿರಿ ಇದು ಅವರ ಧೋರಣೆ.

ಉದಾರೀಕರಣ ಬಂದಾಗಿನಿಂದ ಲಾಭ ಬಾಚಿಕೊಳ್ಳಲು ಇನ್ನೊಂದು ದಾರಿಯೂ ತೆರೆದಿದೆ. ಅದು ಆಮದು ರಫ್ತಿನದು. ಅಭಾವ ಉಂಟಾದರೆ ಆ ವಸ್ತುವನ್ನು ಅಂತರ್‌ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕೊಂಡು ದೇಶದೊಳಗೆ ಮಾರುವುದು ಇಲ್ಲಿ ವ್ಯಾಪಾರಿಗಳ ಮತ್ತು ಆಳುವ ವರ್ಗದ ರಾಜಕಾರಣಿಗಳ ಶಾಮೀಲು. ಈಗ ಇವರ ತತ್ವ ಇದು ದೇಶದೊಳಗೆ ವಸ್ತುಗಳ ಬೆಲೆ ಏರಿಸಿ ಆ ವಸ್ತುಗಳನ್ನು ಕಡಿಮೆ ದರದಲ್ಲಿ ಬೇರೆ ದೇಶಗಳಿಂದ ಕೊಂಡು ಇಲ್ಲಿ ಮಾರುವುದು. ದೇಶದ ಜನ ಕೊಳ್ಳಲಾರದೇ ಸತ್ತರೆ ಅವರಿಗೇನು.

ಇಂತಹ ಪರಿಸ್ಥಿತಿಯ ಹಿನ್ನಲೆಯಲ್ಲೇ ಭಾರತೀಯ ಆರ್ಥಿಕದ ಅಧ್ಯಯನ ಮಾಡುವ ಕೇಂದ್ರ ಇನ್ನೊಂದು ಮುನ್ಸೂಚನೆ ನೀಡಿದೆ. 1995-96ರಲ್ಲಿ ಕೃಷಿ ಉತ್ಪಾದನೆಯ ಬೆಳವಣಿಗೆ ಕಳೆದ ವರ್ಷದ ಶೇ. 3.9 ರಿಂದ ಶೇ. 2ಕ್ಕೆ ಇಳಿಯಬಹುದೆಂಬುದೇ ಆ ಮುನ್ಸೂಚನೆ ಇಂತಹ ಮುನ್ಸೂಚನೆಯನ್ನು ಮಳೆಯೂ ನೀಡಿದೆ. ಹಾಗಾದರೆ ಮುಂಬರುವ ದಿನಗಳು ಹೇಗಿರಬಹುದು?

ಭಾರತಕ್ಕೆ ಕೆಳಗಿನ ಸ್ಥಾನ

ಬಹುರಾಷ್ಟ್ರೀಯ ಕಂಪನಿಗಳ ಬಂಡವಾಳದಿಂದಲೇ ನಾವು ಉದ್ಧಾರವಾಗುವುದು ಎಂಬ ಭಾವನೆಯನ್ನು ನಮ್ಮ ಉದಾರೀಕರಣವಾದಿಗಳೆಲ್ಲ ನೀಡುತ್ತಿದ್ದಾರೆ. ಆದರೆ ಈ ಬಹುರಾಷ್ಟ್ರೀಯ ಕಂಪನಿಗಳಿಗೆ ಭಾರತದ ಬಗ್ಗೆ ಎಂತಹ ಕಾಳಜಿ? ಏಶಿಯಾ ಖಂಡದ 13 ದೇಶಗಳಲ್ಲಿ ಹಣ ಹೂಡಬೇಕೆಂದಿರುವ 50 ಬಹುರಾಷ್ಟ್ರೀಯ ಕಂಪನಿಗಳು ಭಾರತಕ್ಕೆ ನಾಲ್ಕನೇ ಸ್ಥಾನ ನೀಡಿವೆಯಂತೆ.

ದೇಶದ ಕಾನೂನುಗಳನ್ನೇ ತಿದ್ದಿ ಬಹುರಾಷ್ಟ್ರೀಯ ಕಂಪನಿಗಳಿಗೆ ಅಪಾರ ಲಾಭ ಮಾಡುವ ಅವಕಾಶಗಳನ್ನು ನೀಡಿ ದೇಶದ ಜನತೆಯ ಹಿತವನ್ನೇ ಕಡೆಗಣಿಸಿದ್ದರೂ ಈ ಕಂಪನಿಗಳು ಭಾರತಕ್ಕೆ ಕೆಳಗಿನ ಸ್ಥಾನ ನೀಡಿವೆ.

ಇವುಗಳ ಹಿಂದೆ ಎನ್ರೋನ್ ಒಪ್ಪಂದದ ಉದಾಹರಣೆ ಇದೆ. ಎನ್ರೋನ್ ಒಪ್ಪಂದದ ಬಗ್ಗೆ ಎದ್ದಿರುವ ಪುಕಾರುಗಳೇ ಈ ಕಂಪನಿಗಳು ಭಾರತಕ್ಕೆ ಕೆಳಗಿನ ಸ್ಥಾನ ನೀಡಲು ಕಾರಣ. ಈ ಕಂಪನಿಗಳ ರಾಜಕೀಯದ ರೀತಿ ಇದು. ಸದಾ ಬೆದರಿಕೆ ಹಾಕುವುದು, ಮುಸುಕಿನಲ್ಲೇ ಗುದ್ದು ಹಾಕುವುದು.

ಸಿ-ಡಾಟ್ ಬಹುರಾಷ್ಟ್ರೀಯ ಕಂಪನಿಯ ಉರುಳು?

ಸೆಂಟರ್ ಫಾರ್ ಡೆವಲಪ್ ಮೆಂಟ್ ಆಫ್ ಟೆಲಿಮ್ಯಾಟಿಕ್ಸ್ ಅಂದರೆ ಸಿ-ಡಾಟ್ ಭಾರತದಲ್ಲಿನ ದೂರಸಂಪರ್ಕ ಅಭಿವೃದ್ಧಿಯಲ್ಲಿ ಬಹುಮುಖ ಸಂಸ್ಥೆ. ಭಾರತದ ಸ್ವಾವಲಂಬನೆಯ ಕನಸೂ ಈ ಸಿ-ಡಾಟ್ ರೂಪದಲ್ಲಿದೆ ಎಂದು ಹೇಳಬಹುದು.

ಈಗ ಎರಿಕ್ ಸನ್ ಎಂಬ ಬಹುರಾಷ್ಟ್ರೀಯ ಕಂಪನಿಯ ಕರಿನೆರಳು ಸಿ-ಡಾಟ್‌ನ ಮೇಲೆ ಬೀಳುವಂತಿದೆ. ಎರಿಕ್ ಸನ್ ಅಭಿವೃದ್ಧಿಪಡಿಸಿದ 3000 ಲೈನುಗಳ ಸ್ವಿಚ್‌ಗೆ ಅನುಮೋದನೆ ದೊರೆತಿದೆ. ಅಂದರೆ ಸಿ-ಡಾಟ್ ಅಭಿವೃದ್ಧಿ ಪಡಿಸಿದ ಸ್ವಿಚ್‌ಗೆ ಬಂತು ಗ್ರಹಚಾರ ಎಂದೇ ತಿಳಿಯಬೇಕು.

ಸಿ-ಡಾಟ್‌ನ ಹಿಂದಿನ ಕಾರ್ಯನಿರ್ವಾಹಕ ನಿರ್ದೇಶಕ ಜಿ.ಬಿ. ಮೆಮಾಮ್ನಿಯವರ ಪ್ರಕಾರ "ಈ ತಂತ್ರಜ್ಞಾನವನ್ನು ನಮ್ಮ ದೇಶದೊಳಗೆ ಮನ್ನಣೆ ನೀಡಿ ನಮ್ಮ ತಂತ್ರಜ್ಞಾನವನ್ನು ನಿರ್ಲಕ್ಷಿಸಿದರೆ ಅದು ನಮ್ಮ ತಂತ್ರಜ್ಞಾನವನ್ನು ಬೇರು ಸಹಿತ ಕಿತ್ತೆಸೆಯುತ್ತದೆ. ಸುಮಾರು 700 ಕೋಟಿ ರೂಪಾಯಿಗಳ ಬಂಡವಾಳ ಹೂಡಿಕೆ ಖಾಸಗಿ ಸಾರ್ವಜನಿಕ ಮತ್ತು ಜಂಟಿ ವಲಯಗಳಿಂದ ಆಗಿರುವ ಈ ಕ್ಷೇತ್ರಕ್ಕೆ ಬಹುರಾಷ್ಟ್ರೀಯ ಕಂಪನಿಯನ್ನು ಬಿಟ್ಟರೆ ಮುಂದಿನ ಪೀಳಿಗೆ ನಮ್ಮನ್ನು ಖಂಡಿತ ಕ್ಷಮಿಸಲಾರದು" ನೇರವಾಗೇ ಈ ಉದ್ದಿಮೆ 20000 ಜನಗಳಿಗೆ ಉದ್ಯೋಗ ನೀಡುತ್ತದೆ. ಈ ಉದ್ಯೋಗಿಗಳಿಗೂ ಬೆದರಿಕೆ ಬಹುರಾಷ್ಟ್ರೀಯ ಕಂಪನಿಗಳಿಂದ ಬರುತ್ತದೆ.

ಬೆಲೆ ಏರಿಸುವ ಸ್ಪರ್ಧೆ

ಉದಾರೀಕರಣದ ಉದ್ದಿಮೆಗಳ ನಡುವೆ ಆರೋಗ್ಯಕರ ಸ್ಪರ್ಧೆ ಉಂಟು ಮಾಡುತ್ತದೆ ಎಂಬುದು ಉದಾರೀಕರಣವಾದಿಗಳ ಒಂದು ವಾದ. ಇಂತಹ ಸ್ಪರ್ಧೆಯಿಂದ ಉತ್ಪನ್ನ ಸೇವೆಯ ಗುಣಮಟ್ಟ ಏರುತ್ತದೆ. ಜೊತೆಗೇ ಬೆಲೆಗಳು ಇಳಿಯುತ್ತದೆ ಎಂಬುದು ಅವರ ಅಂಬೋಣ.

ಉದಾರೀಕರಣದಿಂದಾದ ಅಂತರ್‌ರಾಷ್ಟ್ರೀಯ ಗುಣಮಟ್ಟದ ತಂತ್ರಜ್ಞಾನ ಭಾರತದೊಳಕ್ಕೆ ಹರಿದು ಬರುತ್ತದೆ ಎಂಬುದೂ ಒಂದು ವಾದ. ಕೋಕಾ ಕೋಲಾ ಮತ್ತು ಪೆಪ್ಸಿ ಕೋಲಾಗಳೂ ಈ ವಾದದಿಂದಾಗೇ ಬಂದವು. ತಂಪು ಪಾನಿಯ ತಯಾರಿಸುವಲ್ಲಿ ಉತ್ತಮ ತಂತ್ರಜ್ಞಾನ ನಮ್ಮಲ್ಲಿಯೇ ಇದೆ. ಆದರೂ ಅವರು ಬಂದರು.

ಈಗ ಎರಡೂ ಕಂಪನಿಗಳು ತಮ್ಮ ಪಾನೀಯಗಳ ಬೆಲೆ ಏರಿಸಿವೆ. ಒಂದು ಕಂಪನಿ ಬೆಲೆ ಏರಿಸಿತೆಂದು ಇನ್ನೊಂದು ಕಂಪನಿ ಏರಿಸಿದೆ. ಇದು ಬಹಳ ಆರೋಗ್ಯಕರ ಸ್ಪರ್ಧೆ ಅಲ್ಲವೆ?

ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳ ಸಾಧನೆ

ಉದಾರೀಕರಣದ ಹಿನ್ನೆಲೆಯಲ್ಲೂ 27 ಸಾರ್ವಜನಿಕ ಕ್ಷೇತ್ರದ ಬ್ಯಾಂಕುಗಳು ಉತ್ತಮ ಸಾಧನೆ ಮಾಡಿವೆ. ಈ ಬ್ಯಾಂಕುಗಳು ಕಳೆದ ವರ್ಷ 730 ಕೋಟಿ ರೂಪಾಯಿಗಳ ಲಾಭ ತೋರಿಸಿದ್ದವು. ಈ ವರ್ಷಕ್ಕೆ ಇದು 1599 ಕೋಟಿ ರೂಪಾಯಿಗಳಿಗೆ ಏರಿದೆ.

ಉದಾರೀಕರಣದ ಹಿನ್ನಲೆಯಲ್ಲಿ ಸರ್ಕಾರ ತಂದ ಹೊಸ ಆಸ್ತಿ ವರ್ಗೀಕರಣ ನೀತಿಯಿಂದ ಬಹುತೇಕ ಬ್ಯಾಂಕುಗಳು ಹಾನಿ ಮಾಡುತ್ತವೆ ಎಂದು ನಿರೀಕ್ಷಿಸಲಾಗಿತ್ತು. ಆದರೆ ನಿರೀಕ್ಷೆಗೂ ಮೀರಿ ಅವು ಲಾಭ ತೋರಿಸಿವೆ.

ಬ್ಯಾಂಕುಗಳ ವ್ಯವಸ್ಥಾಪಕರ ಪ್ರತಿನಿಧಿ ಪ್ರಕಾರ ಬ್ಯಾಂಕುಗಳು ಉದಾರೀಕರಣ ಸುಧಾರಣೆಗಳಿಗೆ ಪೂರ್ಣವಾಗಿ ಹೊಂದಿಕೊಂಡಿವೆ. ಆದ್ದರಿಂದಲೇ ಅವು ಈಗ ಲಾಭ ತೋರಿಸಿವೆ ಎಂಬುದು ಅವರ ವಾದ.

ಆದರೆ ಉದಾರೀಕರಣದ ನಂತರ ಆದ್ಯತಾ ವಲಯಕ್ಕೆ ನೀಡಿರುವ ಸಾಲದ ಪ್ರಮಾಣ ನಿಗದಿ ಪಡಿಸಿದಕ್ಕಿಂತ ಕಡಿಮೆ ಇದೆ. ಆಗಲೇ ಖಾಸಗೀ ಬ್ಯಾಂಕುಗಳು ಪ್ರಾರಂಭವಾಗಿ ದೊಡ್ಡ ದೊಡ್ಡ ವ್ಯವಹಾರಗಳನ್ನೆಲ್ಲ ಸಾರ್ವಜನಿಕ ವಲಯದ ಬ್ಯಾಂಕುಗಳಿಂದ ಕಸಿದುಕೊಂಡಿದೆ.

ಉದಾರೀಕರಣದ ಕ್ರಮಗಳಿಂದಾಗಿ ನಿಧಾನವಾಗಿಯಾದರೂ ಸಾರ್ವಜನಿಕ ವಲಯದ ಬ್ಯಾಂಕುಗಳ ವ್ಯವಹಾರದಲ್ಲಿನ ಲಾಭದಾಯಕತೆ ಕಡಿಮೆಯಾಗಲಿದೆ. ಖಾಸಗೀಯವರದ್ದೇ ಮೇಲುಗೈ ಆಗುತ್ತದೆ. ಬಹುಶಃ ಸರ್ಕಾರಿ ವಕ್ತಾರರಿಗೆ ಸದ್ಯಕ್ಕಂತೂ ಇದು ಕಾಣುತ್ತಿಲ್ಲ. ಜಾಣ ಕುರುಡುತನವೇ ಏನು?



ಬಾಡಿಗೆ ಸೂರಿಗೂ ಬಿಜೆಪಿ ಸರಕಾರದ ಅಡ್ಡಗಾಲು

ಬಡ ಹಾಗೂ ಮಧ್ಯಮ ವರ್ಗದ ಜನರು ದೆಹಲಿಯಲ್ಲಿ ಬಾಡಿಗೆ ಮನೆಗಳಲ್ಲಿ ಬದುಕಬಾರದೇ? ಈ ಪ್ರಶ್ನೆಗೆ 1995ರ ದೆಹಲಿ ಬಾಡಿಗೆ ಮಸೂದೆ ಕೊಡುವ ಉತ್ತರ ಬದುಕಬಾರದು. ಅದು ನೇರವಾಗಿಯೇನೂ ಹೀಗೆ ಹೇಳಿಲ್ಲ. ಆದರೆ ಮಸೂದೆಯ ಬಹಳಷ್ಟು ಕಲಮುಗಳನ್ನು ಗಮನಿಸಿದಾಗ ಅದರ ಉದ್ದೇಶ ಏನೆಂಬುದು ಸ್ಪಷ್ಟವಾಗುತ್ತದೆ.

ರಾಷ್ಟ್ರ ರಾಜಧಾನಿ ಪ್ರದೇಶವಾದ ದೆಹಲಿಯ ಬಿಜೆಪಿ ಸರಕಾರ ರಾಜ್ಯದ ಬಾಡಿಗೆದಾರರ ಮೇಲೆ ಭಾರೀ ಹೊರೆಯನ್ನು ಹೇರಲು ಮುಂದಾಗಿದೆ. ಸ್ವಂತ ಮನೆಯಿಲ್ಲದೆ ಬೇರೆಯವರ ಸೂರಿನ ಅಡಿ ವಾಸಿಸುವವರ ಜೀವನವನ್ನು ಅಸ್ತವ್ಯಸ್ತಗೊಳಿಸಲು ಸಂಚು ಹೂಡಿದೆ.

ತಾನು ಬಡವರ ಪಕ್ಷಪಾತಿ ಎಂದು ಬಿಜೆಪಿ ಹೇಳಿಕೊಳ್ಳುವುದು ಕೇವಲ ಮೊಸಳೆ ಕಣ್ಣೀರು ಎಂಬುದಕ್ಕೆ ಈ ತಿದ್ದುಪಡಿ ವಿಧೇಯಕ ಸಾಕ್ಷಿಯಾಗಿದೆ. ಈ ಮಸೂದೆ ಬಾಡಿಗೆದಾರರ ಹಿತಗಳನ್ನು ಪೂರ್ಣವಾಗಿ ನಿರ್ಲಕ್ಷಿಸಿ ಶ್ರೀಮಂತ ಮನೆಮಾಲೀಕರ ಹಿತವನ್ನು ಕಾಯಲು ಎಲ್ಲಾ ರೀತಿಯ ಕ್ರಮಗಳನ್ನು ಕೈಗೊಂಡಿದೆ.

ಪ್ರಾಸ್ತವಿತ ಮಸೂದೆ ಜಾರಿಗೆ ಬಂದಿದ್ದೇ ಆದಲ್ಲಿ 3500 ರೂಪಾಯಿಗಿಂತ ಕಡಿಮೆ ಬಾಡಿಗೆಗೆ ಮನೆ ಸಿಗುವುದು ಇನ್ನು ಮುಂದೆ ಕಷ್ಟವಾಗುತ್ತದೆ. ಈಗಿನ ಬಾಡಿಗೆದಾರರಲ್ಲಿ ಬಹುಸಂಖ್ಯಾತ ಜನರು ಈ ಶ್ರೇಣಿಯೊಳಗಿನ ಬಾಡಿಗೆ ತೆರುವವರಾಗಿದ್ದಾರೆ.

ರಿಪೇರಿ, ಪುನರ್ ನಿರ್ಮಾಣ ಮೊದಲಾದ 18 ಅಂಶಗಳ ಆಧಾರದಲ್ಲಿ ಬಾಡಿಗೆದಾರರನ್ನು ಮನೆಯಿಂದ ಹೊರಗೆ ಹಾಕುವ ಅಧಿಕಾರವನ್ನು ಮನೆ ಮಾಲಿಕರಿಗೆ ನೀಡುವ ಅತ್ಯಂತ ಕರಾಳ ನಿಯಮ ಈ ವಿಧೇಯಕದಲ್ಲಿದೆ. ಒಂದು ಸಲ ಖಾಲಿ ಮಾಡಿ(ಸಿ)ದ ಮೇಲೆ ಮತ್ತೆ ಬಾಡಿಗೆಗೆ ಬರುವುದು ಹೊಸ ಷರತ್ತುಗಳಿಗೆ ಒಪ್ಪಬೇಕಾಗುತ್ತದೆ. ಹೊಸ ಷರತ್ತಿನ ಪ್ರಕಾರ ಜಮೀನಿನ ಪ್ರಸಕ್ತ ಮಾರುಕಟ್ಟೆ ಬೆಲೆ ಹಾಗೂ ಪುನರ್ ನಿರ್ಮಾಣದ ಶೇಕಡ ಹತ್ತನ್ನು ವಾರ್ಷಿಕ ಬಾಡಿಗೆಯಾಗಿ ತೆರಬೇಕು. ಇದರಿಂದ ಬಾಡಿಗೆ ಪ್ರಮಾಣ ಹಲವಾರು ಪಟ್ಟು ಏರುವುದರಲ್ಲಿ ಸಂಶಯವಿಲ್ಲ, ಇದರ ಬದಲು, ಮೂಲ ಕಟ್ಟಡವನ್ನು ಕಟ್ಟುವಾಗ ಜಮೀನಿಗೆ ಇದ್ದ ಬೆಲೆಯನ್ನು ಪರಿಗಣಿಸುವುದು ಒಳ್ಳೆಯದು ಎಂದು ಸಿಪಿಐ(ಎಂ) ದೆಹಲಿ ರಾಜ್ಯ ಸಮಿತಿ ಸಲಹೆ ಮಾಡಿದೆ.

ದೊಡ್ಡ ದೊಡ್ಡ ಬಿಲ್ಡರ್‌ಗಳು, ಗುತ್ತೇದಾರಿ ಕಂಪನಿಗಳು ಮತ್ತು ಬಹುರಾಷ್ಟ್ರೀಯ ಕಂಪನಿಗಳು ಬೇಗನೇ ಭಾರೀ ಲಾಭವನ್ನು ದೋಚಲು ಅನುಕೂಲ ಮಾಡಿಕೊಡುವುದು ಬಾಡಿಗೆ ಕಾನೂನಿನ ತಿದ್ದುಪಡಿಯ ಉದ್ದೇಶವಾಗಿದೆ ಎನ್ನುವುದನ್ನು ಯಾರಾದರೂ ಅರ್ಥ ಮಾಡಿಕೊಳ್ಳಬಹುದು.

ಒಟ್ಟಿನಲ್ಲಿ, ದೆಹಲಿಯಲ್ಲಿ ನ್ಯಾಯಸಮ್ಮತ ಬೆಲೆಗೆ ಬಾಡಿಗೆ ಮನೆ ಪಡೆಯುವುದು ಇನ್ನು ಮುಂದೆ ಕನಸಾಗಬಹುದು. ಸ್ವಂತ ಮನೆ ಬಿಡಿ, ಬಾಡಿಗೆ ಮನೆಯೆಂಬುದೇ ಗಗನ ಕುಸುಮವಾಗಬಹುದು.

ಬಿಜೆಪಿ ಸರಕಾರದ ಈ ಶ್ರೀಮಂತ ಪರ ಧೋರಣೆಯನ್ನು ಕಟುವಾಗಿ ಟೀಕಿಸಿರುವ ಸಿಪಿಐ(ಎಂ) ರಾಜ್ಯ ಸಮಿತಿ ಬಡವರಿಗೆ ಹಾಗೂ ಮಧ್ಯಮವರ್ಗದವರಿಗೆ ಅನಾನುಕೂಲವಾದ ನಿಯಮಗಳನ್ನು ರದ್ದು ಪಡಿಸುವಂತೆ ಮುಖ್ಯಮಂತ್ರಿ ಮದನ್‌ಲಾಲ್ ಖುರಾನಾರನ್ನು ಒತ್ತಾಯಪಡಿಸಿದೆ.

ದೆಹಲಿಯಲ್ಲಿ ವಾಸಿಸುವ ತಮ್ಮ ಹಕ್ಕಿಗೆ ಒದಗಿರುವ ಗಂಭೀರ ಅಪಾಯವನ್ನು ಅರಿತು ಒಗ್ಗಟ್ಟಿನಿಂದ ಹೋರಾಟ ನಡೆಸಲು ಮುಂದಾಗುವಂತೆ ಕಡಿಮೆ ಹಾಗೂ ಮಧ್ಯಮ ಆದಾಯ ಗುಂಪಿನ ಬಾಡಿಗೆದಾರರು, ಅಂಗಡಿ ಮಾಲಿಕರು, ವರ್ತಕರು ಮತ್ತು ಜನತೆಗೆ ಸಿಪಿಐ(ಎಂ) ದೆಹಲಿ ರಾಜ್ಯ ಸಮಿತಿ ಕರೆ ನೀಡಿದೆ. ಮಸೂದೆಯ ಕರಾಳ ಅಂಶಗಳನ್ನು ಕೈ ಬಿಡುವಂತೆ ಸರಕಾರದ ಮೇಲೆ ಒತ್ತಡ ಹೇರಲು ಸಂಘಟಿತ ಸಂಘರ್ಷಕ್ಕೆ ಸಿದ್ಧರಾಗಲು ಕರೆ ಕೊಟ್ಟಿದೆ.

ದೌರ್ಜನ್ಯಕ್ಕೆ ಜಗ್ಗದೆ ಧೀರ ಮುಷ್ಕರ

ಅನೇಕ ಕಡೆ ಲಾಠಿ ಪ್ರಹಾರ ನಡೆಸಲಾಯಿತು. ನೂರಾರು ಜನರನ್ನು ಬಂಧಿಸಲಾಯಿತು. ಹೋರಾಟಗಳನ್ನು ಬಗ್ಗು ಬಡಿಯಲು ಆಳುವ ವರ್ಗಗಳು ಅನುಸರಿಸುವ ಸಾಮಾನ್ಯ ತಂತ್ರಗಳು ಇವು. ಆದರೆ ಶೋಷಿತರ ಆಕ್ರೋಶದ ಮುಂದೆ ಇದ್ಯಾವುದೂ ನಿಲ್ಲುವುದಿಲ್ಲ.

ಜೂನ್ 24ರಂದು ಹಾಗೇ ಆಯಿತು

ದೆಹಲಿ, ಗಾಜಿಯಾ ಬಾದ್ ಮತ್ತು ಫರೀದಾ ಬಾದ್ ನ ಹಲವಾರು ಪ್ರದೇಶಗಳಲ್ಲಿ ಇಂಥ ಸನ್ನಿವೇಶಗಳು ಕಂಡು ಬರುತ್ತಿದ್ದವು.ತಮ್ಮ ಹೊಟ್ಟೆ ಬಟ್ಟೆ ಹಾಗೂ ಭವಿಷ್ಯದ ಪ್ರಶ್ನೆಯನ್ನು ಮುಂದಿಟ್ಟುಕೊಂಡು ಈ ಪ್ರದೇಶಗಳ ಕಾರ್ಮಿಕರು ಸಂಘರ್ಷಕ್ಕೆ ಇಳಿದಿದ್ದರು.

ಸಿ.ಐ.ಟಿ.ಯು. ಕರೆ ಮೇರೆಗೆ ಆ ದಿನ ನಡೆದ ಮುಷ್ಕರದಲ್ಲಿ ಮೇಲೆ ಹೇಳಿದ ಮೂರು ಭಾಗಗಳ ಬಹುಸಂಖ್ಯಾತ ಕಾರ್ಮಿಕರು ಪಾಲ್ಗೊಂಡಿದ್ದರು.

ಅವರು ಮಾತ್ರವಲ್ಲ, ಇಂದಿರಾಗಾಂಧಿ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಎರಡನೇ ಟರ್ಮಿನಲ್‌ನ ನೌಕರರ ವಿಭಾಗದ ಲೋಡರ್‌ಗಳು, ದೆಹಲಿಯಲ್ಲಿ ಅನೇಕ ರೆಸ್ಟೋರೆಂಟ್ ಮತ್ತು ಹೋಟೆಲುಗಳು ಹಾಗೂ ಕ್ವಾಲಿಟಿ ಗುಂಪಿನ ಎಲ್ಲಾ ಐಸ್‌ಕ್ರೀಮ್ ಫ್ಯಾಕ್ಟರಿಗಳ ಕಾರ್ಮಿಕರು ಮುಷ್ಕರದಲ್ಲಿ ಭಾಗವಹಿಸಿದ್ದರು.

ಈ ಎಲ್ಲಾ ದುಡಿಮೆಗಾರರು ಧೀರ ಸಮರ ನಡೆಸುವರೆಂದು ಐಕ್ಯರಂಗ ಈಗಾಗಲೇ ವರದಿ ಮಾಡಿತ್ತು.

ಕಾರ್ಮಿಕ ಕಾನೂನುಗಳನ್ನು ಜಾರಿಗೊಳಿಸಬೇಕು, ಕನಿಷ್ಠ ಕೂಲಿಯನ್ನು 2500ರೂ.ಗೆ ಏರಿಸಬೇಕು, ಕಾರ್ಮಿಕರು ವಾಸಿಸುವ ಪ್ರದೇಶಗಳಲ್ಲಿ ನಾಗರಿಕ ಸೌಲಭ್ಯಗಳನ್ನು ಕಲ್ಪಿಸಬೇಕು ಎಂಬುದು ಮುಷ್ಕರಕಾರರು ಮುಂದೊಡ್ಡಿದ್ದ ಪ್ರಮುಖ ಬೇಡಿಕೆಗಳಾಗಿದ್ದವು.

ತುಟ್ಟಿಭತ್ಯೆ ಕಸಿದ ಬಿಜೆಪಿ ಸರಕಾರ

ದೆಹಲಿಯ ಬಿಜೆಪಿ ಸರಕಾರ ಕಾರ್ಮಿಕರ ತುಟ್ಟಿಭತ್ಯೆಯನ್ನು ಕಡಿತಗೊಳಿಸಿದೆ. ಅದನ್ನು ಮತ್ತೆ ಕೊಡಬೇಕೆಂಬುದೂ ಬೇಡಿಕೆಯಾಗಿತ್ತು.

ಮೂರು ಲಕ್ಷ ಕಾರ್ಮಿಕರು ಹಾಗೂ ಅವರನ್ನೇ ಆಧರಿಸುವ ಸುಮಾರು 10ಲಕ್ಷ ಜನರನ್ನು ಬೀದಿಪಾಲು ಮಾಡಬೇಡಿ ಎಂದೂ ಈ ಮುಷ್ಕರ ಆಡಳಿತ ವರ್ಗಕ್ಕೆ ಮನವಿ ಮಾಡಿತು. ದೆಹಲಿಯ ಸುಮಾರು 9000 ಕಾರ್ಖಾನೆಗಳನ್ನು ಮುಚ್ಚುವ ಪ್ರಸ್ತಾಪವೊಂದು ಇದೆ. ಹಾಗೇ ಮಾಡಿದ್ದೇ ಆದಲ್ಲಿ ಲಕ್ಷಾಂತರ ಜನರು ನಿರುದ್ಯೋಗಿಗಳಾಗಿ ಅವರ ಕುಟುಂಬಗಳ ಬಾಳು ಹಾಳಾಗುತ್ತದೆ. ಬಡವರ ಹೊಟ್ಟೆ ಮೇಲೆ ಹೊಡೆಯಬೇಡಿ ಎಂದು ಈ ಸಂದರ್ಭದಲ್ಲಿ ಒತ್ತಾಯಿಸಲಾಯಿತು.

ಪಶ್ಚಿಮ ದೆಹಲಿಯ ರಾಮರೋಡ, ಫರೀದಾಬಾದ್‌ನ ಡಿ.ಎಚ್.ಎಫ್. ಕೈಗಾರಿಕ ಪ್ರದೇಶ ಮತ್ತು ಗಾಜಿಯಾಬಾದ್ ನ ದಾದ್ರಿ ಸರ್ಜಾಪುರ ಪ್ರದೇಶಗಳಲ್ಲಿ ಲಾಠಿ ಪ್ರಹಾರ ನಡೆಸಿದ ಹಾಗೂ ಬಂಧಿಸಿದ ಪ್ರಕರಣಗಳು ವರದಿಯಾಗಿವೆ. ಬಂಧಿತರ ಸಂಖ್ಯೆ ಸುಮಾರು 350 ಅನೇಕ ಕಾರ್ಮಿಕರು ಗಾಯಗೊಂಡಿದ್ದಾರೆ. ದಬ್ಬಾಳಿಕೆ ನಡೆದರೂ ಜಗ್ಗದ ದುಡಿಮೆಗಾರರು ಅನೇಕ ಕಡೆಗಳಲ್ಲಿ ಸಾವಿರ ಸಾವಿರ ಸಂಖ್ಯೆಯಲ್ಲಿ ಸೇರಿ ಮೆರವಣಿಗೆಗಳನ್ನು ನಡೆಸಿದರು.

ಮುಷ್ಕರದ ಕರೆಗೆ ಅಭೂತಪೂರ್ವಕವಾಗಿ ಸ್ಪಂದಿಸಿದ ದುಡಿಮೆಗಾರರನ್ನು ಸಿಐಟಿಯು ದೆಹಲಿ ರಾಜ್ಯ ಸಮಿತಿ ಅಭಿನಂದಿಸಿದೆ. ಮುಂದಿನ ದಿನಗಳಲ್ಲಿ ಇನ್ನಷ್ಟು ತೀಕ್ಷ್ಣ ಹೋರಾಟಗಳಿಗೆ ಸಿದ್ಧರಾಗುವಂತೆ ಕರೆ ನೀಡಿದೆ.

ಕೊಲೆಗಾರ ಯುವ ಕಾಂಗ್ರೆ ನಾಯಕನ ಬಂಧನ

ದೆಹಲಿ ಪ್ರದೇಶ ಯುವಕಾಂಗ್ರೆಸ್(ಐ) ಸಮಿತಿಯ ಮಾಜಿ ಅಧ್ಯಕ್ಷ ಸುಶೀಲ್ ಶರ್ಮಾ ತನ್ನ ಹೆಂಡತಿಯನ್ನೇ ಕೊಂದು ಹಾಕಿದ ಆರೋಪಕ್ಕೆ ಒಳಗಾಗಿ ಬಂಧಿತನಾಗಿದ್ದಾನೆ. ಜುಲೈ 2-3ರ ಮಧ್ಯರಾತ್ರಿ ದೆಹಲಿಯ ಒಂದು ಹೋಟೆಲಿನಲ್ಲಿ ಪತ್ನಿ ನೈನಾ ಸಾಹ್ನಿಯನ್ನು ಕೊಚ್ಚಿ ಕೊಲೆ ಮಾಡಿದ್ದಲ್ಲದೆ ಶವವನ್ನು ಒಲೆಗೆ ಎಸೆದು ಸುಟ್ಟು ಸಾಕ್ಷ್ಯವನ್ನು ಮುಚ್ಚಿ ಹಾಕಲು ಶರ್ಮಾ ಯತ್ನಿಸಿದ್ದ.

ಕೊಲೆ ನಡೆದ ಬೆನ್ನಲ್ಲೇ ನಾಪತ್ತೆಯಾಗಿದ್ದ ಶರ್ಮಾ ಜುಲೈ 10ರಂದು ಬೆಂಗಳೂರು ಸಮೀಪ ಸಿನಿಮೀಯ ರೀತಿಯಲ್ಲಿ ಬಂಧಿತನಾದ. ಇದೊಂದು ಸಾಮಾನ್ಯ ಕೊಲೆ ಪ್ರಕರಣ ಆಗಿರದೆ ಒಂದು ರೀತಿಯಲ್ಲಿ ಯುವ ಕಾಂಗ್ರೆಸ್(ಐ)ನ ಗೂಂಡಾ ಸಂಸ್ಕೃತಿಯ ನಗ್ನ ಸ್ವರೂಪವನ್ನು ಎತ್ತಿ ತೋರಿಸುವ ಘಟನೆಯಾಗಿ ಇಡೀ ದೇಶದ ಗಮನ ಸೆಳೆದಿದೆ.

ಸುಶೀಲ್ ಶರ್ಮಾ ಕ್ರಿಮಿನಲ್ ಹಿನ್ನಲೆಯುಳ್ಳ ವ್ಯಕ್ತಿ ಎಂಬುದು ಈ ಕೊಲೆ ಪ್ರಕರಣ ಬೆಳಕಿಗೆ ಬಂದ ನಂತರ ಬಹಿರಂಗಕ್ಕೆ ಬಂದಿದೆ. ಈ ಶರ್ಮಾ ಮಾತ್ರವಲ್ಲ, ದೆಹಲಿ ಯುವ ಕಾಂಗ್ರೆಸ್‌ನ ಅನೇಕ 'ಮುಖಂಡರು' ಕೂಡಾ ಕ್ರಿಮಿನಲ್‌ಗಳು ಎಂಬುದನ್ನು ಸಾರಿ ಹೇಳುವ ವಿವರಗಳನ್ನು ಪತ್ರಿಕೆಗಳು ಪ್ರಕಟಿಸಿವೆ.

ನೈನಾ ಸಾಹ್ನಿಯ ಕೊಲೆ ಪ್ರಕರಣವನ್ನು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನೆ (ಎಐಡಿಡಬ್ಲ್ಯುಎ) ಕಟುವಾಗಿ ಖಂಡಿಸಿದೆ.

ಯುವ ಕಾಂಗ್ರೆ ನಿಷೇಧಿಸಿ

ಮಹಿಳೆಯೊಬ್ಬರ ಕೊಲೆ ಪ್ರಕರಣದಲ್ಲಿ ಯುವ ಕಾಂಗ್ರೆ ಮುಖಂಡ ಭಾಗಿಯಾಗಿರುವುದರಿಂದ ಯುವ ಕಾಂಗ್ರೆಯನ್ನು ನಿಷೇಧಿಸಿ ಅದರ ಕಛೇರಿಗೆ ಬೀಗ ಹಾಕುವಂತೆ ಭಾರತ ಪ್ರಜಾಸತ್ತಾತ್ಮಕ ಯುವಜನ ಸಂಘಟನೆ (ಡಿ.ವೈ.ಎಫ್.ಐ.) ಪ್ರಧಾನ ಕಾರ್ಯದರ್ಶಿ ಮಹಮದ್ ಸಲೀಂ ಕಾಂಗ್ರೆಸ್(ಐ) ಪಕ್ಷವನ್ನು ಒತ್ತಾಯಿಸಿದ್ದಾರೆ.

ಯುವ ಕಾಂಗ್ರೆನಲ್ಲಿ ಕ್ರಿಮಿನಲ್ ಪ್ರವೃತ್ತಿ ಜಾಸ್ತಿಯಾಗಿದೆ ಎಂದು ಸಲೀಂ ಹೇಳಿದ್ದಾರೆ.

ಮೌನವಾಗಿದ್ದ ಎಂ.ಪಿ.ಗಳು

ಸಂಸತ್ ಸದಸ್ಯರೂ ಆಗಿರುವ ಮಹಮದ್ ಸಲೀಂ ಪ್ರವಾಸೋದ್ಯಮ ಮತ್ತು ನಾಗರಿಕ ವಿಮಾನ ಖಾತೆಯ ಸಂಸದೀಯ ಸಮಿತಿಯ ಸದಸ್ಯರಾಗಿದ್ದಾರೆ. ಜುಲೈ 7 ರಂದು ಸಮಿತಿಯ ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ಕಾಂಗ್ರೆಸ್(ಐ) ಸದಸ್ಯರು ನೈನಾ ಸಾಹ್ನಿಯ ದಹನ ಪ್ರಕರಣದ ಬಗ್ಗೆ ಮೌನವಾಗಿದ್ದರು ಎಂದು ಸಲೀಂ ತಿಳಿಸಿದ್ದಾರೆ.

ಅವ್ಯವಹಾರ: ಸೈಕಿಯಾ ವಿರುದ್ಧ ಕ್ರಮಕ್ಕೆ ಅನುಮತಿ ಕೋರಿಕೆ

ಅಸ್ಸಾಂ ಮುಖ್ಯಮಂತ್ರಿ ಹಿತೇಶ್ವರ ಸೈಕಿಯಾ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲು ಅನುಮತಿ ನೀಡುವಂತೆ ಜನತಾದಳ ಅಸ್ಸಾಂ ಘಟಕದ ಅಧ್ಯಕ್ಷ ಡಿ.ಸಿ. ಬುರುವಾ ಆ ರಾಜ್ಯದ ರಾಜ್ಯಪಾಲರನ್ನು ವಿನಂತಿಸಿದ್ದಾರೆ.

ರಾಜ್ಯದ ವ್ಯವಹಾರವೊಂದರಲ್ಲಿ ಕೋಟ್ಯಂತರ ರೂಪಾಯಿ ಮೊತ್ತದ ಅವ್ಯವಹಾರ ನಡೆದಿದೆ. ಅದರಲ್ಲಿ ಮುಖ್ಯಮಂತ್ರಿಯವರ ಪಾತ್ರವಿದೆ ಎಂದು ಬರುವಾ ಹೇಳಿದ್ದಾರೆ. ಹೀಗಾಗಿ ಅವರ ವಿರುದ್ಧ ನ್ಯಾಯಾಲಯಕ್ಕೆ ಹೋಗಲು ಅನುಮತಿ ಬೇಕೆಂದು ಕೋರಿದ್ದಾರೆ.

ಸರಕಾರ ರಾಜ್ಯದ ಖಜಾನೆಯನ್ನು ಲೂಟಿ ಮಾಡಿದೆ. ಹಾಗೂ ಜನರನ್ನು ವಂಚಿಸಿದೆ. ಆದ್ದರಿಂದ ಇದು ಗಂಭೀರ ವಿಷಯವಾಗಿದೆ. ಎಂದವರು ಹೇಳಿದ್ದಾರೆ.

ಬಾಡಿಗೆ ಮಸೂದೆ ವಿರೋಧಿಸಿ ದೆಹಲಿ ವರ್ತಕರ ಬಂದ್

ದೆಹಲಿಯ ಬಾಡಿಗೆ ನಿಯಂತ್ರಣ ಮಸೂದೆಯನ್ನು ವಿರೋಧಿಸಿ ಜುಲೈ ಎಂಟರಂದು ರಾಜಧಾನಿಯ ಅನೇಕ ಮಾರುಕಟ್ಟೆಗಳ ವಾಣಿಜ್ಯ ಚಟುವಟಿಕೆಗಳು ಸ್ಥಗಿತಗೊಂಡವು. ದೆಹಲಿ ವ್ಯಾಪಾರ ಮಹಾ ಸಂಘ (ಡಿ.ವಿ.ಎಂ.) ಬಂದ್‌ಗೆ ಕರೆಕೊಟ್ಟಿತು.

ಸಿಐಟಿಯು ಅಭಿನಂದನೆ

ಹಲವಾರು ದಿನಗಳಿಂದ ತಮ್ಮ ಕೆಲಸವನ್ನು ಖಾಯಂಗೊಳಿಸಬೇಕೆಂದು ಹೋರಾಟ ನಡೆಸುತ್ತಿದ್ದ ಗುಲ್ಬರ್ಗ ಮಹಾನಗರ ಪಾಲಿಕೆಯ ಕಾರ್ಮಿಕರನ್ನು (ಎಂ.ಆರ್.ಇ.) ಖಾಯಂಗೊಳಿಸಲು ಸರ್ಕಾರ ತೀರ್ಮಾನಿಸಿರುವುದಕ್ಕೆ ಸಿಐಟಿಯು ಅಭಿನಂದಿಸಿವೆ.

ಮಂತ್ರಿಗಳಾದ ವೈಜನಾಥ್ ಪಾಟೀಲ್ ಅವರು ಪೌರಕಾರ್ಮಿಕರ ಮುಖಂಡರಾದ ಮಾರುತಿ ಮಾನ್ಪಡೆ, ಎನ್.ಕೆ. ಉಪಾಧ್ಯಾಯ, ಅಶೋಕ್ ದರ್ಗೆ ಮತ್ತು ಸಂಘದ ಪದಾಧಿಕಾರಿಗಳೊಂದಿಗೆ ಮಾತುಕತೆ ನಡೆಸಿ ಹೋರಾಟ ನಿರತ 250 ಕಾರ್ಮಿಕರ ಬೇಡಿಕೆಗಳನ್ನು ಈಡೇರಿಸಿ ಹಾಗೂ ಅವರನ್ನು ಖಾಯಂಗೊಳಿಸಿ ಆಜ್ಞೆ ಹೊರಡಿಸಿದ್ದಾರೆ.

ಇದಕ್ಕೂ ಮುಂಚೆ ಬಹಳ ದಿನಗಳಿಂದ ನೆನೆಗುದಿಗೆ ಬಿದ್ದಿದ್ದ ತಮ್ಮ ಸಮಸ್ಯೆಯನ್ನು ಪರಿಹರಿಸಬೇಕೆಂದು 250 ಪೌರ ಕಾರ್ಮಿಕರು, ಮಹಿಳೆ-ಮಕ್ಕಳೊಂದಿಗೆ ವಿಧಾನಸೌಧ ಚಲೋ ನಡೆಸಿ ಕಬ್ಬನ್ ಪಾರ್ಕಿನಲ್ಲಿ ಧರಣಿ ನಡೆಸಿದ್ದರು. ಇವರನ್ನು ಉದ್ದೇಶಿಸಿ ಜನವಾದಿ ಮಹಿಳಾ ಸಂಘಟನೆಯ ರಾಜ್ಯಾಧ್ಯಕ್ಷರಾದ ಕೆ. ನೀಲಾ ಮಾತನಾಡಿ ಬೆಂಬಲ ವ್ಯಕ್ತಪಡಿಸಿದ್ದರು.

ಕಾರ್ಮಿಕರ ಬೇಡಿಕೆ ದಿನಾಚರಣೆ

ಹುಬ್ಬಳ್ಳಿ: ಸಿಐಟಿಯು ಜನರಲ್ ಕೌನ್ಸಿಲ್ ಕರೆಯ ಮೇರೆಗೆ 5.7.1995ರಂದು ಹುಬ್ಬಳ್ಳಿಯಲ್ಲಿ ಸಿಐಟಿಯು ನೇತೃತ್ವದ ಕಾರ್ಮಿಕ ಸಂಘಗಳು ಕಾರ್ಮಿಕರ ಅಖಿಲ ಭಾರತ ಬೇಡಿಕೆ ದಿನಾಚರಣೆಯನ್ನು ಆಚರಿಸಿದರು. ಕಾರ್ಯಕ್ರಮದ ಅಂಗವಾಗಿ ಕಾರ್ಮಿಕರು ಮೆರವಣಿಗೆಯಲ್ಲಿ ತೆರಳಿ ತಹಶಿಲ್ದಾರರ ಮೂಲಕ ಸರ್ಕಾರಕ್ಕೆ ಬೇಡಿಕೆಗಳ ಪಟ್ಟಿಯನ್ನು ಸಲ್ಲಿಸಿದರು.

ಸಿಐಟಿಯು ರಾಜ್ಯ ಕಾರ್ಯದರ್ಶಿಗಳಲ್ಲಿ ಒಬ್ಬರಾದ ಕಾಮ್ರೇಡ್ ನಿತ್ಯಾನಂದ ಸ್ವಾಮಿ, ಕಾರ್ಮಿಕ ಮುಖಂಡರಾದ ಡಿ.ಜೆ. ಗೋಂದಕರ್, ಎಂ.ಎಚ್. ಮುಲ್ಲಾ, ಸಿ.ಆರ್. ಭಟ್, ಮೊದಲಾದವರು ಮೆರವಣಿಗೆಯ ನೇತೃತ್ವ ವಹಿಸಿದ್ದರು.

ಶುಭಹಾರೈಕೆ

ಎಸ್.ಎಫ್.ಐ. ರಾಜ್ಯ ಸಹ ಕಾರ್ಯದರ್ಶಿ ಈ. ಬಸವರಾಜು ಅವರ ಸಹೋದರ ಅಶೋಕ್ ರವರ ವಿವಾಹ ಸರೋಜ ಅವರೊಂದಿಗೆ 19.6.1995ರಂದು ಜರುಗಿತು. ವಧೂವರರಿಗೆ ಐಕ್ಯರಂಗದ ಶುಭಾಶಯ ಕೋರಿದೆ.

ಹಮಾಲಿ ಕಾರ್ಮಿಕರ ಸಮಾವೇಶ

ಗೌರಿಬಿದನೂರು: ಜುಲೈ 1ರಂದು ಹಮಾಲಿ ಕಾರ್ಮಿಕರ ಸಂಘ ಗೌರಿಬಿದನೂರಿನಲ್ಲಿ ಪ್ರಥಮ ಸಮಾವೇಶವನ್ನು ಸಂಘಟಿಸಿ ಹಮಾಲಿಗಳ ಕುಂದುಕೊರತೆಗಳ ಬಗ್ಗೆ ಪರಿಶೀಲಿಸಿ ಸಂಘ ರಚಿಸಲು ತೀರ್ಮಾನಿಸಿತು. ಈ ಸಮಾವೇಶದ ಅಧ್ಯಕ್ಷತೆಯನ್ನು ವಹಿಸಿದ್ದ ಕಾಂ.ವಿ.ಶ್ರೀನಿವಾಸ ಕರ್ಣ ಮಾತನಾಡುತ್ತಾ ಶೋಷಣೆಯಿಂದ ವಿಮೋಚನೆ ಹೊಂದಲು ಹಮಾಲಿಗಳು ಸಂಘಟನಾ ಹೋರಾಟ ಮಾಡಬೇಕೆಂದರು.ಈ ಸಮಾವೇಶವನ್ನು 300ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಿದ್ದರು. ಕೊನೆಯಲ್ಲಿ ಸಂಘಕ್ಕೆ ಪದಾಧಿಕಾರಿಗಳನ್ನು ಆಯ್ಕೆ ಮಾಡ ಲಾಯಿತು. ಅಧ್ಯಕ್ಷರಾಗಿ ವಿ. ಶ್ರೀನಿವಾಸಕರ್ಣ ಅವಿರೋಧವಾಗಿ ಆಯ್ಕೆಯಾಗಿ ಉಪಾಧ್ಯಕ್ಷರಾಗಿ ಗೌಸ್, ಪ್ರಧಾನ ಕಾರ್ಯದರ್ಶಿಯಾಗಿ ಅಮಾನುಲ್ಲ, ಸಹ ಕಾರ್ಯದರ್ಶಿಯಾಗಿ ಪಾಸಿಜಾನ್, ಬಾಲಪ್ಪ ಖಜಾಂಚಿಯಾಗಿ ಕೃಷ್ಣಪ್ಪ ಆಯ್ಕೆಯಾದರು.

ಗ್ರಾಮ ಪಂಚಾಯತ್ ನೌಕರರ ನೂತನ ಘಟಕ

ಉತ್ತರ ಕನ್ನಡ ಜಿಲ್ಲೆ ಭಟ್ಕಳ ತಾಲೂಕಿನ ಒಟ್ಟು 16 ಗ್ರಾಮ ಪಂಚಾಯತುಗಳಿದ್ದು ಅದರ ನೌಕರರು ತಮ್ಮ ಸಮಸ್ಯೆಗಳಾಧಾರದಲ್ಲಿ ಸಂಘಟಿತರಾಗಲು ಜೂನ್ 18ರಂದು ಶಿರಾಲಿ ಗ್ರಾಮಪಂಚಾಯತ್ ಸಭಾಭವನದಲ್ಲಿ ಮಾರುತಿ ದೇವಾಡಿಗ ಅಧ್ಯಕ್ಷತೆಯಲ್ಲಿ ಸಭೆ ಸೇರಿತ್ತು.

ಈ ಸಭೆಯಲ್ಲಿ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘದ ಸಹ ಕಾರ್ಯದರ್ಶಿಯಾದ ಕಾಂ. ಲಕ್ಕಣ್ಣ ಉಪಸ್ಥಿತರಿದ್ದು ಸಂಘಟನಾ ಮುಖಂಡತ್ವ, ನೌಕರರ ಸಂಘದ ಹೋರಾಟ, ಬೇಡಿಕೆ ಕುರಿತು ಮಾತನಾಡಿದರು.

ಸಭೆಯಲ್ಲಿ ಸಿಐಟಿಯು ಮುಖಂಡರಾದ ಟಿ.ಎಸ್.ನಾಯ್ಕ್, ಶಿರಾಲಿ ಗ್ರಾಮ ಪಂಚಾಯತ್ ಸದಸ್ಯರಾದ ಸುಭಾಷ್ ಕೊಪ್ಪಿಕರ ಹಾಜರಿದ್ದರು. ಈ ಸಂಘಟನೆಯನ್ನು ಜಿಲ್ಲಾ ಮಟ್ಟದಲ್ಲಿ ಕಟ್ಟುವ ಮಹತ್ವವಾದ ನಿರ್ಣಯ ಕೈಗೊಳ್ಳಲಾಯಿತು. ಸಭೆಯಲ್ಲಿ ಭಟ್ಕಳ ತಾಲೂಕು ಘಟಕವನ್ನು ರಚಿಸಲಾಯಿತು.

ಮಾರುತಿ ದೇವಾಡಿಗ- ಅಧ್ಯಕ್ಷರು, ನಾಗಪ್ಪ ನಾಯ್ಕ-ಉಪಾಧ್ಯಕ್ಷರು, ಮಾರುತಿನಾಯ್ಕ-ಕಾರ್ಯದರ್ಶಿ, ಕರಿಯಪ್ಪ ನಾಯ್ಕ-ಸಹ ಕಾರ್ಯದರ್ಶಿ, ಶ್ರೀಧರನಾಯ್ಕ-ಖಜಾಂಚಿಯಾಗಿ ಆಯ್ಕೆಯಾದರು. ಪ್ರಾರಂಭದಲ್ಲಿ ಸುಭಾಷ ಕೊಪ್ಪಿಕರ ಸ್ವಾಗತಿಸಿ, ಕೊನೆಯಲ್ಲಿ ಮಾರುತಿನಾಯ್ಕ ವಂದಿಸಿದರು.

ಹೊನ್ನಾವರ: ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘದ ಹೊನ್ನಾವರ ಘಟಕದ ಪುನಶ್ಚೇತನ ಸಭೆಯು ಕಾಂ. ಸುಭಾಷ್ ಕೊಪ್ಪಿಕರ ಅಧ್ಯಕ್ಷತೆಯಲ್ಲಿ ಹೊನ್ನಾವರ ನ್ಯೂ ಇಂಗ್ಲೀಷ್ ಶಾಲೆಯ ಸಭಾ ಭವನದಲ್ಲಿ ನಡೆಯಿತು.

ನೂತನ ಪದಾಧಿಕಾರಿಗಳಾಗಿ ಹಳದಿಪುರ ಗ್ರಾಮ ಪಂಚಾಯತ್ ನಾಗೇಶ್ ನಾಯ್ಕ ಅಧ್ಯಕ್ಷರಾಗಿ ಮತ್ತು ಮಾವಿನಕುರ್ವ ಗ್ರಾಮ ಪಂಚಾಯತ್ ಎಂ.ವಿ. ಗೌಡ ಕಾರ್ಯದರ್ಶಿಯಾಗಿ ಸರ್ವಾನುಮತದಿಂದ ಆಯ್ಕೆಯಾದರು.

ಕಾಲೇಜನ್ನು ಪುನರಾರಂಭಿಸಲು ಸಿಐಟಿಯು ಒತ್ತಾಯ

ಮಂಗಳೂರು: ಮಂಗಳೂರಿನ ಸರಕಾರಿ ಕಾಲೇಜಿನ ಆಡಳಿತವನ್ನು ಕಳೆದ ವರ್ಷದಿಂದ ವಿಶ್ವ ವಿದ್ಯಾನಿಲಯವು ವಹಿಸಿಕೊಂಡ ನಂತರ, ಆ ಕಾಲೇಜಿನ ಅಂಗವಾಗಿದ್ದ ಜ್ಯೂನಿಯರ್ ಕಾಲೇಜ್ ವಿಭಾಗವನ್ನು ಮುಚ್ಚಿರುವುದರಿಂದ ಕಾರ್ಮಿಕ, ರೈತ ಮತ್ತು ಇತರ ಬಡಕುಟುಂಬಗಳ ವಿದ್ಯಾರ್ಥಿಗಳು ತೀವ್ರ ಸಂಕಷ್ಟಕ್ಕೆ ಒಳಗಾಗಿದ್ದಾರೆ.

ಆದುದರಿಂದ ಸರಕಾರವು ಕೂಡಲೇ ಮಂಗಳೂರಿನ ವಿ.ವಿ. ಕಾಲೇಜಿನ ಆವರಣದಲ್ಲಿ ಅಥವಾ ಸಮೀಪ ಯಾವುದೇ ಸರಕಾರಿ ಕಟ್ಟಡದಲ್ಲಿ ಪದವಿ ಪೂರ್ವ ಕಾಲೇಜನ್ನು ಪುನರಾರಂಭಿಸಬೇಕೆಂದು ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಬಿ. ಮಾಧವರವರು ಒತ್ತಾಯಿಸಿದ್ದಾರೆ.

ಈ ನಿಟ್ಟಿನಲ್ಲಿ "ಮಂಗಳೂರು ಸರಕಾರಿ ಜೂನಿಯರ್ ಕಾಲೇಜ್ ಉಳಿಸಿ ಹೋರಾಟ ಸಮಿತಿ"ಯವರು ನಡೆಸಲಿರುವ ಹೋರಾಟಗಳಲ್ಲಿ ಜಿಲ್ಲೆಯ ಎಲ್ಲಾ ವಿಭಾಗಗಳ ಕಾರ್ಮಿಕರೂ ನೌಕರರೂ ಸಕ್ರಿಯವಾಗಿ ಭಾಗವಹಿಸಬೇಕೆಂದು ಅವರು ಕರೆ ನೀಡಿದ್ದಾರೆ.

ಪಾಕಿಸ್ತಾನ ಸರ್ಕಾರ ಮತ್ತು ಎಂ.ಕ್ಯು.ಎಂ.: ಮುಂದೇನು?

ಕರಾಚಿಯಲ್ಲಿ ಭುಗಿಲೆದ್ದ ಹಿಂಸಾಚಾರದ ಹಲವು ದಿನಗಳ ನಂತರ ಎಂ.ಕ್ಯು.ಎಂ. (ಮೊಹಜಿರ್ ಕೌಮಿ ಮೂವ್ ಮೆಂಟ್) ಹಾಗೂ ಪಾಕಿಸ್ತಾನದ ಸರ್ಕಾರ ಮಾತುಕತೆಗಳ ಮೂಲಕ ಸಮಸ್ಯೆ ಬಗೆಹರಿಸುವ ಪ್ರಯತ್ನ ಮಾಡುತ್ತಿದೆ ಎಂದು ತಿಳಿದು ಬಂದಿದೆ. ಲಂಡನ್ ನಲ್ಲಿ ವಾಸಿಸುತ್ತಿರುವ ಎಂ.ಕ್ಯು.ಎಂ. ನಾಯಕ ಅಲ್ತಾಫ್ ಹುಸೇನ್ ಮಾತುಕತೆಗೆ ಒಪ್ಪಿಗೆ ಕೊಟ್ಟಿದ್ದಾರೆ ಎನ್ನಲಾಗಿದೆ. ಇದಕ್ಕಿಂತ ಮೊದಲು ಬೆನಜಿರ್ ಸರ್ಕಾರ ದಮನ ಮೂಲಕ ಎಂ.ಕ್ಯು.ಎಂ.ನ ಚಳುವಳಿಯನ್ನು ಹತ್ತಿಕ್ಕುವ ಪ್ರಯತ್ನ ಪೂರ್ಣವಾಗಿ ವಿಫಲವಾಗಿದೆ.

ಒಂದು ಹಂತದಲ್ಲಿ ಮೊಹಜೀರೇತರರನ್ನು ಕರಾಚಿ ಬಿಟ್ಟು ಹೋಗುವಂತೆ ಸರ್ಕಾರ ಕೇಳಿಕೊಂಡು ಮೊಹಜೀರ್ ಪ್ರತಿರೋಧವನ್ನು ಸೈನಿಕ ಕಾರ್ಯಾಚರಣೆಯಿಂದ ನಿಗ್ರಹಿಸಲು ಪ್ರಯತ್ನಿಸಿತು. ಸಿಂಧ್‌ನ ಪೋಲೀಸ್ ಬದಲು ಗಡಿಭದ್ರತಾ ಪಡೆಗಳನ್ನು ಕರೆಸಲಾಯಿತು. ಪಾಕಿಸ್ತಾನದ ಪ್ರಮುಖ ಬಂದರು ನಗರ ಹಾಗೂ ಕಮರ್ಶಿಯಲ್ ಕೇಂದ್ರವಾದ ಕರಾಚಿಯಲ್ಲಿ ಹೆಚ್ಚಿನ ಆರ್ಥಿಕ ಚಟುವಟಿಕೆ ನಿಂತೆ ಹೋಗಿದೆ. ಈಗಿನ ಸುತ್ತಿನ ಹಿಂಸಾಚಾರ ಆರಂಭವಾದದ್ದು ಎಂ.ಕ್ಯು.ಎಂ. ನ ಕಾರ್ಯಕರ್ತನೊಬ್ಬನ ತಂಗಿಯ ಮೇಲೆ ಆಳುವ ಪಕ್ಷ ಪಿಪಿಪಿ (ಪಾಕಿಸ್ತಾನ ಪೀಪಲ್ಸ್ ಪಾರ್ಟಿ)ದ ಕಾರ್ಯಕರ್ತರು ಎನ್ನಲಾದ ಗುಂಪೊಂದು ಅತ್ಯಾಚಾರ ನಡೆಸಿದಾಗ. ಇದಕ್ಕೆ ಪ್ರತಿಭಟನೆಯಾಗಿ ಎಂ.ಕ್ಯು.ಎಂ. ಹರತಾಳ ಆಚರಿಸಿತು. ಆಗಾಖಾನ್ ಆಸ್ಪತ್ರೆಯ ಮೆಡಿಕಲ್ ಸರ್ಟಿಫಿಕೇಟ್ ಇದ್ದರೂ, ಈ ಅತ್ಯಾಚಾರ ಬಗ್ಗೆ ತನಿಖೆ ನಡೆಸಬೇಕು ಎನ್ನುವ ಒತ್ತಾಯಕ್ಕೆ ಸರ್ಕಾರ ನಿರಾಕರಿಸಿದ್ದು ಮೋಹಜಿರ್‌ರ ಕೋಪ ಭುಗಿಲೇಳುವಂತೆ ಮಾಡಿದೆ. ಕರಾಚಿಯ ಈಗಿನ ಸುತ್ತಿನ ಹಿಂಸಾಚಾರದಲ್ಲಿ ಪೋಲೀಸರು ಹಾಗೂ ಭದ್ರತಾ ಪಡೆಗಳ ಹಲವರು ಸತ್ತಿದ್ದಾರೆ. ಕಳೆದ ವಾರದಿಂದ ಪ್ರತಿದಿನ 20 ರಿಂದ 30 ಜನ ಹಿಂಸಾಚಾರದಲ್ಲಿ ಸತ್ತಿದ್ದಾರೆ. ಜೂನ್ ಒಂದರಲ್ಲೇ 300ಕ್ಕೂ ಹೆಚ್ಚು ಜನ ಸತ್ತಿದ್ದಾರೆ. ಈ ವರ್ಷ 950ಕ್ಕಿಂತಲೂ ಹೆಚ್ಚು ಜನ ಸತ್ತಿದ್ದಾರೆ. ಅವರಲ್ಲಿ ಸುಮಾರು 200 ಭದ್ರತಾ ಪಡೆಗಳಿಗೆ ಸೇರಿದವರು.

ಬೆನಜೀರ್ ಸರ್ಕಾರ ಎಂ.ಕ್ಯು.ಎಂ.ನ್ನು ಒಂದು ರಾಜಕೀಯ ಶಕ್ತಿ ಎಂದು ಮಾನ್ಯ ಮಾಡಿ ಅದರ ಜತೆ ಮಾತುಕತೆಗಳನ್ನು ನಡೆಸಲು ನಿರಾಕರಿಸಿದ್ದು, ಹಾಗೂ ಎಂ.ಕ್ಯು.ಎಂ.ಗೆ ಸವಾಲು ಹಾಕುವ ಮೂಲಕ ಇತ್ತೀಚಿನ ಹಿಂಸಾಚಾರಕ್ಕೆ ನೇರ ಕಾರಣರಾಗಿದ್ದಾರೆ. ಎಂ.ಕ್ಯು.ಎಂ.ನ ಮೇಲೆ ರಾಜಕೀಯ ಸೇಡು ತೀರಿಸಲು, ಲಂಡನ್ ನಲ್ಲಿರುವ ನಾಯಕರ ಮೇಲೆ ಅಂತರಾಷ್ಟ್ರೀಯ ಪೋಲಿಸ್ ಇಂಟರ್ ಪೋಲ್‌ಗೆ ದೂರು ನೀಡಿ ಅವರನ್ನು ಬಂಧಿಸಲು ಸರ್ಕಾರ ಕೇಳಿದೆ. ಅಲ್ಲದೆ ಕರಾಚಿಯ ಆರು ಉರ್ದು ದೈನಿಕಗಳನ್ನು ನಿಷೇಧಿಸಿತು. ಅಲ್ಲದೆ ಕರಾಚಿ ಬಗೆಗಿನ ಸುದ್ದಿಗಳ ಮೇಲೆ ನಿಯಂತ್ರಣ ಹೇರಿದೆ. ಆದರೆ ಈ ಕ್ರಮಕ್ಕೆ ಬಂದ ತೀವ್ರ ವಿರೋಧದಿಂದ, ಈ ಕ್ರಮವನ್ನು ಬೆನಜಿರ್ ಸರ್ಕಾರ ವಾಪಸು ತೆಗೆದುಕೊಳ್ಳಬೇಕಾಯಿತು.

ಲೋಕ ಸಂಚಾರ

ಶರತ್ಚಂದ್ರ

ಕತಾರ್: ತಂದೆಯನ್ನುರುಳಿಸಿ ಮಗ ರಾಜನಾದ

ಕೊಲ್ಲಿ ದೇಶದ ಶ್ರೀಮಂತ ದೇಶಗಳಲ್ಲೊಂದಾದ ಕತಾರ್‌ನಲ್ಲಿ ರಾಜಕುಮಾರ ತನ್ನ ತಂದೆಯನ್ನು ಅಧಿಕಾರದಿಂದ ಕೆಳಗಿಳಿಸಿ, ತಾನು ಅಧಿಕಾರಗ್ರಹಣ ಮಾಡಿದ್ದಾರೆ. ರಾಜನಾಗಿದ್ದ ಶೇಕ್ ಖಲೀಫ್ ಬಿನ್ ಹಮದ್ ಅಲ್-ಥನಿ ಅವರು ಸ್ವಿಟ್ಜರ್‌ಲ್ಯಾಂಡ್‌ಗೆ ಖಾಸಗಿ ಭೇಟಿಗೆ ಹೋಗಿದ್ದಾಗ, ರಾಜಕುಮಾರ ಹಮದ್ ಅಧಿಕಾರ ಗ್ರಹಣ ಮಾಡಿದ್ದಾರೆ. ತಾನೇ ಕತಾರ್ ನ ರಾಜ ಎಂದು ಘೋಷಿಸಿಕೊಂಡಿದ್ದಾರೆ. ಈ ಅಧಿಕಾರ ಗ್ರಹಣಕ್ಕೆ ಕೊಲ್ಲಿ ಸಹಕಾರ ಮಂಡಳಿ (ಜಿ.ಸಿ.ಸಿ.)ಯ ಎಲ್ಲಾ ನೆರೆಹೊರೆಯ ದೇಶಗಳು ಮಾನ್ಯತೆ ನೀಡಿವೆ. ಅಮೇರಿಕ ಹಾಗೂ ಯೆಮೇನ್ ಗಳು ಈ ಮೊದಲೇ ಮಾನ್ಯತೆ ನೀಡಿದ್ದವು.

ಜಗತ್ತಿನಾದ್ಯಂತ 70 ಸಾವಿರ ನವ-ನಾಜಿಗಳು ಸಕ್ರಿಯ

ಅಮೇರಿಕದ ಯೆಹೂದಿ ಸಂಸ್ಥೆಯೊಂದರ ಪ್ರಕಾರ, ಜಗತ್ತಿನಾದ್ಯಂತ ಸುಮಾರು 70 ಸಾವಿರ ನವ-ನಾಜಿಗಳು ಹಲವಾರು ದೇಶಗಳಲ್ಲಿ ಸಕ್ರಿಯರಾಗಿದ್ದಾರೆ. ಜರ್ಮನಿಯಲ್ಲಿ ಸ್ವಾಭಾವಿಕವಾಗಿಯೇ ಅತಿ ಹೆಚ್ಚು ಅಂದರೆ 50 ಸಾವಿರ ನವ-ನಾಜಿಗಳಿದ್ದಾರೆ. ಹಂಗರಿ ಹಾಗೂ ಚೆಕ್ ಗಳಲ್ಲಿ ತಲಾ ನಾಲ್ಕು ಸಾವಿರ, ಅಮೇರಿಕದಲ್ಲಿ ಮೂರುವರೆ ಸಾವಿರ, ಪೋಲೆಂಡ್ ಹಾಗೂ ಬ್ರಿಟನ್‌ಗಳಲ್ಲಿ ಎರಡು ಸಾವಿರ ಮತ್ತು ಬ್ರೆಜಿಲ್ ನಲ್ಲಿ 1500 ಇದ್ದಾರೆಂದು ಈ ಸಂಸ್ಥೆ ವರದಿ ಮಾಡಿದೆ.

ಈಜಿಪ್ಟ್ ಅಧ್ಯಕ್ಷರ ಹತ್ಯೆಯ ಪ್ರಯತ್ನ ವಿಫಲ

ಈಜಿಪ್ಟ್ ಅಧ್ಯಕ್ಷ ಹುಸ್ನೆ ಮುಬಾರಕ್ ಅವರ ಹತ್ಯೆಯ ಪ್ರಯತ್ನ ನಡೆದು, ಅದು ವಿಫಲಗೊಂಡಿದೆ. ಈಥಿಯೋಪಿಯಾದ ರಾಜಧಾನಿ ಅಡ್ಡೀಸ್ ಅಬಾಬಾದಲ್ಲಿ ನಡೆದ ಆಫ್ರಿಕನ್ ದೇಶಗಳ ಸಂಘಟನೆ (OAU)ನ ವಾರ್ಷಿಕ ಸಭೆಗೆ ಬಂದಿದ್ದ ಮುಬಾರಕ್ ಈ ಹತ್ಯೆಯ ಪ್ರಯತ್ನದ ನಂತರ ಸಭೆಯಲ್ಲಿ ಭಾಗವಹಿಸದೆ ವಾಪಸಾದರು. ಈಜಿಪ್ಟಿನ ಪ್ರತಿನಿಧಿ ಮಂಡಳದ ನಾಯಕತ್ವವನ್ನು ಈ ಸಭೆಯಲ್ಲಿ ಈಜಿಪ್ಟ್ ನ ವಿದೇಶಮಂತ್ರಿ ವಹಿಸಿದ್ದರು. ಈಜಿಪ್ಟ್ ಈ ಹತ್ಯೆಯ ಪ್ರಯತ್ನದಲ್ಲಿ ಸೂಡಾನ್ ಬೇಹುಗಾರಿಕೆಯ ಸಂಸ್ಥೆಯ ಕೈವಾಡ ಇದೆ ಎಂದು ಆರೋಪಿಸಿದೆ. ದೇಶದೊಳಗೂ ಹುಸ್ನಿ ಮುಬಾರಕ್ ಇಸ್ಲಾಮಿಕ್ ಮೂಲಭೂತವಾದಿಗಳ ಭಯೋತ್ಪಾದಕ ಕೃತ್ಯಗಳನ್ನು ಎದುರಿಸುತ್ತಿದ್ದಾರೆ. ಸುಡಾನ್‌ನ ಸರ್ಕಾರ ಇಸ್ಲಾಮಿಕ್ ಮೂಲಭೂತವಾದಿಗಳ ಕೈಯಲ್ಲಿದೆ. ಅವರೇ ಈಜಿಪ್ಟ್‌ನ ಮೂಲಭೂತವಾದಿಗಳಿಗೆ ಬೆಂಬಲ ನೀಡುತ್ತಿದ್ದಾರೆ ಎಂದು ಈಜಿಪ್ಟ್ ಆರೋಪಿಸಿದೆ. ಸೂಡಾನ್ ಈ ಆಪಾದನೆಯನ್ನು ನಿರಾಕರಿಸಿದೆ. ಈ ಆಪಾದನೆಯ ಹುಸಿ ಆಧಾರದ ಮೇಲೆ ಸೂಡಾನ್ ನ ಮೇಲೆ ಆಕ್ರಮಣ ನಡೆಸಲು ಈಜಿಪ್ಟ್ ನ ತಯಾರಿ ನಡೆಸಿದೆ ಎಂದು ಪ್ರತಿ ಆಪಾದನೆ ಮಾಡಿದೆ.

ಈಜಿಪ್ಟ್ 50ರ ದಶಕದಲ್ಲಿ ಅಧ್ಯಕ್ಷ ನಾಸೆರ್‌ರ ನಾಯಕತ್ವದಲ್ಲಿ ಅರಬ್ ರಾಷ್ಟ್ರೀಯತೆಯ ಹೆಮ್ಮೆಯ ನಾಯಕನಾಗಿತ್ತು.ಅಲಿಪ್ತ ಚಳುವಳಿಯ ಸ್ಥಾಪಕಾ ನಾಯಕರಾಗಿ ನಾಸೆರ್ ಸಾಮ್ರಾಜ್ಯಶಾಹಿ ವಿರೋಧಿ ನಿಲುವು ಇದ್ದವರು.ಆದರೆ ಅವರ ನಂತರ ಬಂದ ಅಧ್ಯಕ್ಷ ಅನ್ವರ್ ಸಾದತ್ ಕ್ರಮೇಣ ಈ ಎಲ್ಲಾ ನಿಲುವುಗಳನ್ನು ಸಡಿಲಿಸಿ ಪಶ್ಚಿಮ ಏಷ್ಯಾದಲ್ಲಿ ಇಸ್ರೇಲ್-ಅಮೇರಿಕನ್ ಬೆದರಿಕೆ, ಆಮಿಷಗಳಿಗೆ ಬಲಿಯಾದ ಪ್ರಥಮ ಅರಬ್ ನಾಯಕರಾದರು. ಈ ನಿಲುವನ್ನು ಅರಬ್ ಹಾಗೂ ಈಜಿಪ್ಟ್ ಜನತೆ ಒಪ್ಪಿಕೊಂಡಿಲ್ಲ, ಪ್ರತಿರೋಧಿಸುತ್ತಿದ್ದಾರೆ. ಅನ್ವರ್ ಸಾದತ್ ಹತ್ಯೆಯ ನಂತರ ಅಧಿಕಾರಕ್ಕೆ ಬಂದ ಹುಸ್ನಿ ಮುಬಾರಕ್ ಸಹ ಅದೇ ನಿಲುವುಗಳನ್ನು ಮುಂದುವರೆಸಿದ್ದಾರೆ. ಸರ್ಕಾರದ ಈ ನಿಲುವುಗಳನ್ನು ವಿರೋಧಿಸುವ ಎಲ್ಲಾ ಪ್ರಜಾಪ್ರಭುತ್ವವಾದಿ ಪ್ರಗತಿಪರ ಶಕ್ತಿಗಳನ್ನು ಹತ್ತಿಕ್ಕಲಾಗುತ್ತಿದೆ. ಜನತೆಯ ಈ ಅಸಂತೋಷದ ಲಾಭವನ್ನು ಇಸ್ಲಾಮಿಕ್ ಮೂಲಭೂತವಾದಿಗಳು ಪಡೆಯುತ್ತಿದ್ದಾರೆ. ಇದು ಮೂಲಭೂತವಾದಿ ಗುಂಪುಗಳ ಪ್ರಯತ್ನ ಎಂದು ತೀವ್ರ ಅನುಮಾನವಿದೆ. ಆದರೆ ಸಂಚುಗಾರರ ರಾಷ್ಟ್ರೀಯತೆ ಏನು ಎನ್ನುವುದು ತಿಳಿದಿಲ್ಲ.

ಹತ್ಯೆಯ ಪ್ರಯತ್ನ ಹುಸ್ನಿ ಮುಬಾರಕ್‌ರ ವಾಹನ ಪ್ಯಾಲೆಸ್ಟೀನ್ ರಾಯಭಾರ ಕಛೇರಿಯ ಮುಂದೆ ಹೋಗುವಾಗ ನಡೆದಿದ್ದು ಸಂಚುಗಾರರ ಗುಂಪಿನ ಮೂವರು ಕೊಲ್ಲಲ್ಪಟ್ಟಿದ್ದಾರೆ ಎನ್ನಲಾಗಿದೆ. ಸಂಚುಗಾರರಲ್ಲಿ ಅಡ್ಡಿಸ್ ಅಭಾಬಾದ ಪೋಲೀಸರು ಅವರು ಇಳಿದು ಕೊಂಡಿದ್ದ ಮನೆ ಸುತ್ತುವರಿದಾಗ ಗುಂಡಿನ ಕಾಳಗದಲ್ಲಿ ಇನ್ನಿಬ್ಬರು ಸತ್ತಿದ್ದಾರೆ.

ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಅಮೇರಿಕ ಜಪಾನ್ ಕಾರು ವ್ಯಾಪಾರ ಒಪ್ಪಂದ

ಹೆಚ್ಚು ಕಡಿಮೆ ಮುರಿದು ಬಿದ್ದಿದ್ದ ಕಾರು ವ್ಯಾಪಾರದ ಬಗ್ಗೆ ಅಮೇರಿಕ-ಜಪಾನ್‌ಗಳ ನಡುವೆ ಕಾರು ವಾಣಿಜ್ಯದ ಬಗ್ಗೆ ಮಾತುಕತೆಗಳು, ಕೊನೆಗಳಿಗೆಯಲ್ಲಿ ಕಣ್ಣೊರೆಸುವ ಒಪ್ಪಂದ ಆಗಿದೆ. ಜಪಾನ್ ಮೇಲೆ ದಿಗ್ಬಂಧನ ಹಾಕುವೆನೆಂದು ಬೆದರಿಸಿದ್ದ, ಅಮೇರಿಕ ತನ್ನ ಬೆದರಿಕೆ ಬಿಟ್ಟುಕೊಟ್ಟಿದೆ. ತನ್ನ ಕೆಲವು ಬೇಡಿಕೆಗಳನ್ನು ಸಹ ಈಗ ಆಗಿರುವ ಒಪ್ಪಂದದ ಪ್ರಕಾರ ಜಪಾನಿ ಕಾರು ತಯಾರಕ ಕಂಪನಿಗಳು ಹೆಚ್ಚು ಅಮೇರಿಕನ್ ಬಿಡಿ ಭಾಗಗಳನ್ನು ಖರೀದಿಸುತ್ತಾರೆ. ಅಮೇರಿಕದಲ್ಲಿರುವ ಜಪಾನಿ ಕಾರ್ಖಾನೆಗಳಲ್ಲಿ ಉತ್ಪಾದನೆ ಹೆಚ್ಚಿಸುತ್ತಾರೆ. ಜಪಾನ್ ನಲ್ಲಿ ಅಮೇರಿಕನ್ ಕಾರುಗಳ ಮಾರಾಟಕ್ಕೆ ಹೆಚ್ಚಿನ ಡಾಲರ್‌ಗಳನ್ನು ನೇಮಿಸಲು ಒಪ್ಪಂದ ಆಗಿದೆ. ಆದರೆ ಈ ಎಲ್ಲದರಲ್ಲೂ ಸಂಖ್ಯಾತ್ಮಕ ಗುರಿ (ಅಂದರೆ ಇಷ್ಟು ಡಾಲರು ಬೆಲೆಬಾಳುವ ಬಿಡಿಭಾಗ ಖರೀದಿಸಲೇಬೇಕು. ಇಂತಿಷ್ಟು ಅಮೇರಿಕನ್ ಕಾರುಗಳನ್ನು ಖರೀದಿಸಲೇಬೇಕು)ಯನ್ನು ಕೈ ಬಿಡಲಾಗಿದೆ. ಇದು ಅಮೇರಿಕದ ಮುಖ್ಯ ಬೇಡಿಕೆಯಾಗಿತ್ತು. ಈ ಮುಖ್ಯ ಬೇಡಿಕೆ ಒಪ್ಪದಿರುವ ಒಪ್ಪಂದಕ್ಕೆ ನಿಜವಾಗಿ ಅರ್ಥವಿಲ್ಲ. ಇದರ ಅರ್ಥ ಅಮೇರಿಕ ಸೋತಂತಾಗಿದೆ. ಆದರೆ ಈ ವಿವಾದ ಪದೇ ಪದೇ ಏಳುವ ಸಂಭವವಿದೆ. ಈ ಒಪ್ಪಂದದ ನಂತರವೂ ಅಮೇರಿಕದ ಬಿಡಿ ಭಾಗಗಳ ಖರೀದಿಯಲ್ಲಿ, ಜಪಾನಿನಲ್ಲಿ ಕಾರುಗಳ ಮಾರಾಟದಲ್ಲಿ 'ಸಾಕಷ್ಟು' (ಎಷ್ಟು ಎಂದೂ ನಿರ್ಧರಿಸದಿರುವುದರಿಂದ) ಪ್ರಗತಿ ಆಗಿಲ್ಲ ಎಂದು ಅಮೇರಿಕ ಹೇಳಬಹುದು. 'ಸಾಕಷ್ಟು ಪ್ರಗತಿ ಆಗಿದೆ. ಹಿಂದಿಗಿಂತ ಇವು ಜಾಸ್ತಿ ಆಗಿವೆ ಎಂದು ಜಪಾನ್ ಹೇಳಬಹುದು. ಆದ್ದರಿಂದ ಅಮೇರಿಕ ನೆಲಕ್ಕೆ ಬಿದ್ದರೂ ಮೀಸೆ ಮಣ್ಣಾಗಲಿಲ್ಲ ಎನ್ನಬಹುದು ಅಷ್ಟೇ ಈ ಒಪ್ಪಂದದಿಂದ. ಇಂತಹ ಹಲವು ವಿವಾದಗಳು ಹುಟ್ಟುತ್ತಾ ಹೋದಂತೆ ಡಬ್ಲ್ಯು.ಟಿ.ಓ. ಹಾಗೂ ಗ್ಯಾಟ್ ಒಪ್ಪಂದದ ಅರ್ಥಹೀನತೆ ಎಲ್ಲರಿಗೂ ಮನದಟ್ಟಾಗುತ್ತಾ ಹೋಗುತ್ತದೆ.

ಥಾಯ್‌ಲೆಂಡ್ ಆಳುವ ಪಕ್ಷಕ್ಕೆ ಸೋಲು -ಹೊಸ ಸಮ್ಮಿಶ್ರ ಸರ್ಕಾರ ಸಂಭವ

ಥಾಯ್ ಲೆಂಡ್‌ನಲ್ಲಿ ಆಳುವ ಡೆಮೊಕ್ರಾಟಿಕ್ ಪಕ್ಷ ಸೋಲನ್ನನುಭವಿಸಿದೆ. ಪ್ರಮುಖ ವಿರೋಧ ಪಕ್ಷವಾದ ಚಾರ್ಟ್‌ಥಾಯ್ (ಥಾಯ್‌ದೇಶ) 92 ಸೀಟುಗಳನ್ನು ಗಳಿಸಿ ಅತಿದೊಡ್ಡ ಪಕ್ಷವಾಗಿ ಹೊಮ್ಮಿದೆ. ಈ ವರೆಗಿನ ಆಳುವ ಪಕ್ಷ ಡೆಮೊಕ್ರಾಟಿಕ್ ಪಕ್ಷ 86 ಸೀಟುಗಳನ್ನು ಗಳಿಸಿ ಎರಡನೇ ಸ್ಥಾನದಲ್ಲಿದೆ. ಚಾರ್ಟ್ ಥಾಯ್ ಇತರ ವಿರೋಧ ಪಕ್ಷಗಳ ಜತೆ ಸೇರಿ ಸಮ್ಮಿಶ್ರ ಸರ್ಕಾರ ರಚಿಸುವ ಸಂಭವವಿದೆ. ನ್ಯೂ ಆಸ್ಪಿರೇಷನ್ ಪಕ್ಷ 3ನೇ ಸ್ಥಾನದಲ್ಲಿದ್ದು, 57 ಸೀಟುಗಳಿಸಿದೆ. ನಾಲ್ಕನೇ ಸ್ಥಾನದಲ್ಲಿರುವ ಚಾರ್ಟ್ ಪಟ್ಟಾನಾ (ಅಭಿವೃದ್ಧಿ) 53 ಸೀಟುಗಳಿಸಿದೆ. ಚಾರ್ಟ್ ಥಾಯ್‌ನ ನಾಯಕ ಬಸ್ ಹಾನ್ ಸಿಲ್ಪಾ ಆರ್ಚಾ ಪ್ರಧಾನಿಯಾಗಲಿದ್ದು ಅವರು ಆರು ಪಕ್ಷಗಳ ಸಮ್ಮಿಶ್ರ ಸರ್ಕಾರದ ಸಾಧ್ಯತೆ ಇದೆ ಎಂದಿದ್ದಾರೆ. ನ್ಯೂ ಆಸ್ಪಿರೇಷನ್, ಫಲಾಂಗ್ ಧರ್ಮ, ಸೋಶಿಯಲ್ ಆಕ್ಷನ್ ಪಾರ್ಟಿ, ಪ್ರಜಾಕೊನ್ ಥಾಯ್(ಥಾಯ್ ನಾಗರಿಕರು) ಮತ್ತು ವುಲವೋನ್ ಆ ಆರು ಪಕ್ಷಗಳು.

ಇರಾನ್‌ನಲ್ಲಿ ವಿದೇಶಿ ಹಸ್ತಕ್ಷೇಪದ ವಿರುದ್ಧ ಕಮ್ಯುನಿಸ್ಟ್ ಪಕ್ಷದ ಎಚ್ಚರಿಕೆ

ತುದೇ ಇರಾನ್‌ನ ಕಮ್ಯುನಿಸ್ಟ್ ಪಕ್ಷದ ಹೆಸರು. ಈ ಪಕ್ಷದ ಮುಖಪತ್ರಿಕೆ ನಾಮೆಹ್ ಮಾರ್ ಡೊಮ್' ಲೇಖನವೊಂದರಲ್ಲಿ, ಇರಾನ್ ಮೇಲೆ ದಿಗ್ಬಂಧನ ಹೂಡುವ ಮೂಲಕ ಅಮೇರಿಕ ದೇಶದ ಆಂತರಿಕ ವ್ಯವಹಾರದಲ್ಲಿ ಹಸ್ತಕ್ಷೇಪ ಮಾಡುತ್ತಿದೆ ಎಂದು ಕಟುವಾಗಿ ಟೀಕಿಸಿದರು.

ಇರಾನ್‌ನಲ್ಲಿ ಅಮೇರಿಕದ ಹಸ್ತಕ್ಷೇಪಕ್ಕೆ ದೊಡ್ಡ ಚರಿತ್ರೆಯೇ ಇದೆ. ಅದೇ ರೀತಿ ಇರಾನ್‌ನಲ್ಲಿ ಈಗ ದಿಗ್ಬಂಧನದ ಹೆಸರಲ್ಲಿ ತನ್ನದೆ ಹಿತಾಸಕ್ತಿಗೆ ಅನುಕೂಲಕರವಾದ ಸರ್ಕಾರ ಸ್ಥಾಪಿಸುವುದೇ ಅದರ ಉದ್ದೇಶ. ಇರಾನ್‌ನ ಅಣುಶಕ್ತಿ ಕಾರ್ಯಕ್ರಮ ಇದಕ್ಕೆ ಕಾರಣ ಎನ್ನುವುದು ಬರಿಯ ನೆವ ಅಷ್ಟೇ. ಇರಾನ್ ನ ಮೂಲಭೂತವಾದಿ ಸರ್ಕಾರ ಅಭದ್ರವಾಗಿದ್ದು, ಬೆಳೆಯುತ್ತಿರುವ ಸಾಮಾಜಿಕ ಪ್ರತಿರೋಧದ ಎದುರಲ್ಲಿ ಅದು ಪತನ ಹೊಂದುವುದು. ಇದು ಆಳುವ ಪಕ್ಷದೊಳಗಿನ ಬಿಕ್ಕಟ್ಟಿನಿಂದಲೂ ತೀವ್ರಗೊಳ್ಳುತ್ತಿದೆ. ಆದ್ದರಿಂದ ಇದರ ಬದಲಿಗೆ ಬರಬಹುದಾದ ಪ್ರಜಾಸತ್ತಾತ್ಮಕ ಪ್ರಗತಿಪರ ಸರ್ಕಾರ ರಚನೆ ತಡೆಯುವುದೇ ಅಮೇರಿಕದ ಉದ್ದೇಶ. ಇರಾನ್ ಜಗತ್ತಿನ ಅತ್ಯಂತ ಸಮೃದ್ಧ ತೈಲ ಪೂರೈಕೆ ನಡೆಯುವ ಆಯಕಟ್ಟಿನ ಜಾಗದಲ್ಲಿರುವ ಪ್ರಬಲ ದೇಶ. ಆದ್ದರಿಂದ ಇರಾನ್‌ಗೆ ಸಾಮ್ರಾಜ್ಯಶಾಹಿಯ ದೂರಗಾಮಿ ಯೋಜನೆಗಳಲ್ಲಿ ಪ್ರಮುಖ ಪಾತ್ರವಿರುತ್ತದೆ. ಹಿಂದೆಯೂ *1953*ರಲ್ಲಿ ಇರಾನ್‌ನ ಪ್ರಗತಿ ಪರ ಸರ್ಕಾರವನ್ನು ಸಿಐಎ ಹಾಗೂ ಎಂ.ಐ.6 (ಬ್ರಿಟಿಷ್ ಬೇಹುಗಾರಿಕಾ ಸಂಸ್ಥೆ) ಸೇರಿ ಉರುಳಿಸಿ ದೊರೆ ಷಾನ ಕೈಗೊಂಬೆ ಸರ್ಕಾರ ಸ್ಥಾಪಿಸಿದ್ದು ಇರಾನ್‌ನ ಜನತೆ ಮರೆತಿಲ್ಲ. ಎರಡು ದಶಕಗಳ ಕಾಲ ಈ ಕೈಗೊಂಬೆ ಸರ್ಕಾರದ ಆಡಳಿತದಲ್ಲಿ ಇರಾನನ್ನು ಸಾಮ್ರಾಜ್ಯಶಾಹಿ ಕೊಳ್ಳೆ ಹೊಡೆದು, ದಮನದಿಂದ ನರಕವಾಗಿಸಿತ್ತು. ಈ ಷಾನ ಕೈಗೊಂಬೆ ಸರ್ಕಾರವನ್ನು ಕಿತ್ತೊಗೆದ *1979*ರ ಇರಾನ್‌ನ ಕ್ರಾಂತಿಯನ್ನು ಹಾದಿಗೆಡಿಸಲು ಬೇರೆ ಬೇರೆ ಸಂಚು, ದಾರಿಗಳ ಮೂಲಕ ಪ್ರಯತ್ನಿಸಿತು. ಇದರಲ್ಲಿ ಇರಾನ್ ಮೇಲೆ ಇರಾಕ್‌ಗೆ ಕುಮ್ಮಕ್ಕಿನ ಮೂಲಕ ಹೊರಿಸಲಾದ ಭಾರಿ ಆಕ್ರಮಣ ಹಾಗೂ ಯುದ್ಧ ಸಹ ಸೇರಿದೆ. ಇವೆಲ್ಲದರ ಫಲವಾಗಿ *1979*ರ ಕ್ರಾಂತಿ ಪ್ರಜಾಸತ್ತಾತ್ಮಕ ಪ್ರಗತಿಪರ ದಾರಿ ಹಿಡಿಯುವ ಬದಲು ಭಯೋತ್ಪಾದಕ, ದಮನಕಾರಿ ಇಸ್ಲಾಮಿಕ್ ಮೂಲಭೂತವಾದಿ ಸರ್ಕಾರಕ್ಕೆ ಆಸ್ಪದ ಕೊಟ್ಟಿತು.

ಅಮೇರಿಕ ಅಂತಹುದೇ ಇನ್ನೊಂದು ಪಿತೂರಿ ಹೂಡುತ್ತಿದೆ. ಇದನ್ನು ಇರಾನ್ ನ ಎಲ್ಲಾ ವಿರೋಧಪಕ್ಷಗಳು ಅರಿತು, ಈ ದಿಗ್ಬಂಧನವನ್ನು ವಿರೋಧಿಸಬೇಕು. ಇರಾನ್‌ನ ಇಸ್ಲಾಮಿಕ್ ಮೂಲಭೂತವಾದಿ ಸರ್ಕಾರ ಉರುಳಿಸುವುದು ನಮ್ಮ ಉದ್ದೇಶ. ಇದಕ್ಕಾಗಿ ಎಲ್ಲಾ ಪ್ರಜಾಸತ್ತಾತ್ಮಕ ಹಾಗೂ ಪ್ರಗತಿಪರ ಶಕ್ತಿಗಳು ಒಂದಾಗಿ ಹೋರಾಡಬೇಕು. ಆದರೆ ಇದರಲ್ಲಿ ಸಾಮ್ರಾಜ್ಯಶಾಹಿ ಮೂಗು ತೂರಿಸುವ ಅಗತ್ಯ ಇಲ್ಲ ಎಂದು ತುದೇ ತನ್ನ ನಿಲುವು ಸ್ಪಷ್ಟಪಡಿಸುತ್ತಾ ಹೇಳಿದೆ.

KRNM/BGS-405 MAG (2) PRB DECR 319-78/79

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಪಿ.ರಾಮಚಂದ್ರರಾವ್. ಸಂಪಾದಕರು: ಪಿ.ರಾಮಚಂದ್ರರಾವ್. ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27. ಫೋನ್ ನಂ. 2236462

ಮುದ್ರಣ: ರಾಜಾ ಪ್ರಿಂಟರ್ಸ್, ಸಂಪಂಗಿರಾಮನಗರ, ಬೆಂಗಳೂರು. -27

ಬಲು ಕಷ್ಟದಿಂದ ಬದುಕಿರುವವರ ಮೇಲೆ ಅತೀ ತೀವ್ರ ಧಾಳಿ ಪ್ರತಿರೋಧಿಸಲು ಕೃಷಿಕೂಲಿಕಾರ ಸಂಘಟನೆಯ ನಿರ್ಧಾರ

ಆಗಸ್ಟ್ 7: ಕೇಂದ್ರೀಯ ಕಾನೂನು ದಿನಾಚರಣೆ

ನರಸಿಂಹರಾವ್ ಸರಕಾರದ ಹೊಸ ಆರ್ಥಿಕ [illegible]ು ಅತಿ ತೀವ್ರ ಧಾಳಿ ನಡೆಸಿರುವುದು ಈಗಾಗಲೇ ಬಲುಕಷ್ಟದಿಂದ ಜೀವನ ಸಾಗಿಸುತ್ತಿರುವ ಕೃಷಿ ಕೂಲಿಕಾರರ ಮೇಲೆ. ಆದರೆ ಈ ಧಾಳಿಯನ್ನು ಎದುರಿಸಲು ಸಾಧ್ಯ. ಇತ್ತೀಚೆಗೆ ನಡೆದ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಜನರಲ್ ಕೌನ್ಸಿಲ್ ಸಭೆಯಲ್ಲಿ ವ್ಯಕ್ತ ಗೊಂಡ ಭಾವನೆಗಳು ಏನೇ ಕಷ್ಟ ಬಂದರೂ ಈ ಧಾಳಿಯನ್ನು ಎದುರಿಸಿಯೇ ಎದುರಿಸುತ್ತೇವೆ ಎಂಬ ವಿಶ್ವಾಸವನ್ನು ತೋರಿಸಿವೆ; ಅತ್ಯಂತ ಬಡವರ, ಅತ್ಯಂತ ದಲಿತರ ಮೇಲೆ ಯಾವುದೇ ಧಾಳಿ ನಡೆದರೂ ಅದಕ್ಕೆ ಸಂಘಟಿತ ಪ್ರತಿರೋಧ ಇರುತ್ತದೆ ಎಂಬ ವಿಶ್ವಾಸ ವ್ಯಕ್ತಗೊಂಡಿತು ಎಂದಿದ್ದಾರೆ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಕಾರ್ಯದರ್ಶಿ ಸುನೀತ್ ಚೋಪ್ರಾ.

ಸಂಘದ ಜನರಲ್ ಕೌನ್ಸಿಲ್ ಸಭೆ ಬೆಂಗಳೂರಿನಲ್ಲಿ ಜುಲೈ 1 ಹಾಗೂ 2ರಂದು ನಡೆ ಯಿತು. ದೇಶಾದ್ಯಂತದಿಂದ 41 ಸಂಗಾತಿಗಳು ಇಬ್ಬರು ವೀಕ್ಷಕರು ಭಾಗವಹಿಸಿದ್ದ ಈ ಸಭೆ ಇದುವರೆಗೆ ನಡೆದ ಜನರಲ್ ಕೌನ್ಸಿಲ್ ಸಭೆ ಗಳಲ್ಲಿ ಅತ್ಯುತ್ತಮ ಹಾಜರಿಯಿದ್ದ ಸಭೆ ಎನ್ನಲಾಗಿದೆ. ಸಂಘದ ಅಖಿಲ ಭಾರತ ಅಧ್ಯಕ್ಷಪತ್ತೂರು ರಾಮಯ್ಯ ಸಭೆಯ ಅಧ್ಯಕ್ಷತೆ ವಹಿಸಿದ್ದರು.

ಜನರಲ್ ಕೌನ್ಸಿಲ್ ಸಭೆ ಕೃಷಿ ಕೂಲಿಕಾರರು ಎದುರಿಸುತ್ತಿರುವ ಹಲವು ಹತ್ತು ಸಮಸ್ಯೆಗಳನ್ನು ಚರ್ಚಿಸಿತು. ಕನಿಷ್ಟ ಕೂಲಿ ಅನುಷ್ಠಾನ, ಕೂಲಿ ಏರಿಕೆ, ರೇಶನ್ ಕಾರ್ಡ್, ಮನೆ ನಿವೇಶನ, ಬದುಕುಳಿಯಲು ಭೂಮಿ, ಭೂಮಿಯನ್ನು ಆಹಾರ ಧಾನ್ಯ ಬೆಳೆಸಲು ಬಳಸುವುದನ್ನು ಬಿಟ್ಟು ಹಣದ ಬೆಳೆ ಬೆಳೆಯಲು ಅಥವಾ ಸಿಗಡಿ ಬೆಳೆಸುವುದಕ್ಕೋ ಬಳಸುವುದನ್ನು ತಡೆಯುವುದು, ಯಾಂತ್ರೀಕರಣ, ಅಗ್ಗದ ವಲಸೆ ಕಾರ್ಮಿಕರನ್ನು ಬಳಸಿ ಕೂಲಿ ತಗ್ಗಿಸುವುದು ಇವನ್ನೆಲ್ಲಾ ಚರ್ಚಿಸಲಾಯಿತು.

ಅದೇ ರೀತಿ ಭೂ ಹೋರಾಟ, ಕೂಲಿ ಹೋರಾಟ ಹಾಗೂ ಸಂಘದ ಸದಸ್ಯತ್ವದ ಹೆಚ್ಚಳದ ಬಗ್ಗೆಯೂ ಚರ್ಚಿಸಲಾಯಿತು. ಹೊಸ -ಹೊಸ ಹೋರಾಟಗಳ ಮೂಲಕ ಹೊಸ ವಿ ಭಾಗಗಳನ್ನು ತಲುಪಲು ಪ್ರಯತ್ನಿಸಿದಲ್ಲಿ ಸಂಘದ ಸದಸ್ಯತ್ವ ಹೆಚ್ಚಿದೆ(ಕರ್ನಾಟಕದಲ್ಲಿ ಧಾರವಾಡ, ರಾಯಚೂರು, ಬಳ್ಳಾರಿಯಲ್ಲಿನ ಹೋರಾಟಗಳಿಂದ 10334ರಿಂದ 13500ಕ್ಕೆ ಹೆಚ್ಚಿದೆ), ಆ ದರೆ ಕೆಲವು ರಾಜ್ಯಗಳಲ್ಲಿ ಭೂ ಹೋರಾಟಗಳು ಚುನಾವಣಾ ಯಶಸ್ಸುಗಳ ಫಲವನ್ನು ಕ್ರೋಢೀಕರಿಸಲು ಆಗಿಲ್ಲ, ಆದ್ದರಿಂದ ಒಟ್ಟು ಸದಸ್ಯತ್ವ 20 ಲಕ್ಷದ ಸುತ್ತಲೇ ಇದೆ. ಇದನ್ನು 26,70,000 ಕ್ಕೇರಿಸಲು ಜನರಲ್ ಕೌನ್ಸಿಲ್ ಸಭೆ ನಿರ್ಧರಿಸಿದೆ. ಸೆಪ್ಟೆಂಬರ್‌ರವರೆಗೆ ಗ್ರಾಮ, ಪ್ರದೇಶ ಸಮ್ಮೇಳನಗಳು, ಅಕ್ಟೋಬರ್‌ನಲ್ಲಿ ಜಿಲ್ಲಾ ಸಮ್ಮೇಳನಗಳು ಹಾಗೂ ನಂತರ ರಾಜ್ಯ ಸಮ್ಮೇಳನಗಳನ್ನು ನಡೆಸಲು ನಿರ್ಧರಿಸಲಾಯಿತು. ಆಂಧ್ರದಲ್ಲಿ ಈ ವರ್ಷದ ಕೊನೆ ಅಥವಾ ಮುಂದಿನ ವರ್ಷದ ಆರಂಭದಲ್ಲಿ ನಡೆಯಲಿರುವ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ನಾಲ್ಕನೇ ಅಖಿಲ ಭಾರತ ಸಮ್ಮೇಳನದ ಪೂರ್ವ ಭಾವಿಯಾಗಿ ಇವು ನಡೆಯಲಿವೆ.

ಹೋರಾಟಗಳನ್ನು ವಿಸ್ತರಿಸಲು, ಆ ಮೂಲಕ ಸಂಘಟನೆಯನ್ನು ವಿಸ್ತರಿಸಲು ಅನುಕೂಲ ಸನ್ನಿವೇಶ ಇದೆ ಎಂದು ಗಮನಿಸಿದ ಜನರಲ್ ಕೌನ್ಸಿಲ್ ಸಭೆ ಸಂಕಷ್ಟ ಪೀಡಿತ ಕೃಷಿಕೂಲಿಕಾರರಿಗೆ ತಕ್ಷಣ ಪರಿಹಾರ ನೀಡಲು ಭೂಮಿಗಾಗಿ ಹಾಗೂ ಕೂಲಿಗಾಗಿ ಹೋರಾಟವನ್ನು ತೀವ್ರಗೊಳಿಸಲು ನಿರ್ಧರಿಸಿದೆ. ಕೃಷಿಕೂಲಿಕಾರರಿಗೆ ಒಂದು ಸಮಗ್ರ ರಾಷ್ಟ್ರೀಯ ಶಾಸನವನ್ನು ತರುವಲ್ಲಿ ಇನ್ನು ವಿಳಂಬ ಸಲ್ಲ ಎಂದು ತೋರಿಸಲು ಆಗಸ್ಟ್ 7ರಂದು 'ಕೇಂದ್ರ ಶಾಸನ ದಿನ' ಆಚರಿಸಲು ಸಭೆ ನಿರ್ಧರಿಸಿತು. ಆ ದಿನ ರಾಜ್ಯಗಳಲ್ಲಿ ರಾಜ್ಯಪಾಲರು ಈ ವಿಷಯವನ್ನು ಕೇಂದ್ರ ಸರಕಾರದ ಗಮನಕ್ಕೆ ತರುವಂತೆ ಮಾಡಲಾಗುವುದು, ಮುಂಬರುವ ಸಂಸತ್ ಅಧಿವೇಶನದಲ್ಲಿ ಸಂಸತ್ತಿನ ಮುಂದೆ ಈ ಶಾ ಸನವನ್ನು ಮಂಡಿಸಲು ಒತ್ತಾಯಿಸಲಾಗುವುದು.

ಸಿಎನ್ಎನ್-ದೂರದರ್ಶನ ಒಪ್ಪಂದ
ಅಮೇರಿಕಾದ ಕಣ್ನೋಟಕ್ಕೆ ಭಾರತದಲ್ಲಿ ನೆಲೆ ಕೊಡಬೇಕೇ?
ಸಿಪಿಐ(ಎಂ) ಪೊಲಿಟ್ ಬ್ಯೂರೋ ಖಂಡನೆ

ದೂರದರ್ಶನ ಮತ್ತು ಅಮೇರಿಕಾದ ಟೆಲಿವಿಷನ್ ಕಂಪೆನಿ ಸಿಎನ್ಎನ್ ಇಂಟರ್‌ನ್ಯಾಶನಲ್ ನಡುವೆ ಆಗಿರುವ ಒಪ್ಪಂದ ದೇಶದ ಅಗತ್ಯಗಳನ್ನಾಗಲೀ ಹಿತಾಸಕ್ತಿಯನ್ನಾಗಲೀ ಪೂರೈಸುವಂತದ್ದಲ್ಲ, ಆದ್ದರಿಂದ ಅದನ್ನು ಮರುವಿಮರ್ಶೆ ಮಾಡಬೇಕು ಎಂದು ಸಿಪಿಐ(ಎಂ) ಪೊಲಿಟ್‌ಬ್ಯೂರೋ ಒತ್ತಾಯಿಸಿದೆ.

ದೂರದರ್ಶನ ಒಂದುಭಾರತೀಯಉಪಗ್ರಹ ಚಾನೆಲನ್ನುಬಿಟ್ಟುಕೊಟ್ಟುದಿನವಿಡೀತನ್ನಕಾರ್ಯಕ್ರಮಗಳನ್ನು ಭಾರತದಲ್ಲಿ ಬಿತ್ತರಿಸಲು ಸಿಎನ್ಎನ್‌ಗೆ ಅವಕಾಶ ನೀಡಿದೆ. ಈ ಸೌಲಭ್ಯವನ್ನು ಒಂದು ಖಾಸಗೀ ಕಂಪನಿಗೆ ಅದರಲ್ಲೂ ಅಮೇರಿಕನ್ ಕಂಪೆನಿಗೆ ಕೊಟ್ಟಿರುವ ಮೊದಲ ಒಪ್ಪಂದ ಇದು.

ರಾವ್ ಸರಕಾರದ ಇಲೆಕ್ಟ್ರಾನಿಕ್ ಮಾಧ್ಯಮ ನೀತಿ ಅದರ ಆರ್ಥಿಕ ನೀತಿಗಳ ಪ್ರತಿಬಿಂಬವೇ ಆಗಿದೆ. ದೂರದರ್ಶನ ತನ್ನ ಟ್ರಾನ್ಸ್‌ಪೋಂಡರ್ ಗಳನ್ನು ಭಾರತೀಯ ಕಂಪನಿಗಳಿಗೆ ಲೀಸಿಗೆ ಕೊಡಲು ಸಿದ್ಧವಿರಲಿಲ್ಲ, ಆದರೆ ವಿದೇಶೀ ಕಂಪನಿ ಗಳಿಗೆ ದುಂಬಾಲು ಬೀಳುತ್ತಿತ್ತು ಎಂಬುದು ಗಮನಾರ್ಹ ಎಂದಿರುವ ಪೊಲಿಟ್ ಬ್ಯೂರೋ ಸಿಎನ್ಎನ್‌ಅಂತರ್ರಾಷ್ಟ್ರೀಯ ಸುದ್ದಿಗಳನ್ನು "ವಸ್ತು ನಿಷ್ಠ"ವಾಗಿ ಒದಗಿಸುತ್ತದೆ ಎಂಬ ವಾದ ಆತ್ಮ ವಂಚನೆಯಷ್ಟೇ ಎಂದಿದೆ. ಸಿಎನ್ಎನ್ ಬಿತ್ತರಿಸುವ ಸುದ್ದಿಗಳು-ವಿಶ್ಲೇಷಣೆಗಳು ಅಮೇರಿಕಾದ ಕಣ್ನೋಟವನ್ನು ನೀಡಬಹುದಷ್ಟೇ. ವಿದೇಶೀ ಮಾಧ್ಯಮ ಕಂಪನಿಗಳಿಗೆ ತನ್ನ ಸೌಲಭ್ಯಗಳನ್ನು ನೀಡಬೇಕಾದ ಅಗತ್ಯ ದೂರದರ್ಶನಕ್ಕೇನೂ ಇರಲಿಲ್ಲ, ಇಂತಹ ಸುದ್ದಿಗಳಲ್ಲಿ ಆಸಕ್ತಿ ಇರುವವರಿಗೆ ಆಗಲೇ ಕೇಬಲ್ ಟೆಲಿವಿಷನ್ ಮೂಲಕ ಅವಕಾಶವಿದ್ದೇ ಇದೆ.

ಈ ಒಪ್ಪಂದದ ಬಗ್ಗೆ ಸುದ್ದಿ ಮತ್ತು ಪ್ರಸಾರ ಸಚಿವಾಲಯದ ಸ್ಥಾಯೀ ಸಮಿತಿಯಲ್ಲಾಗಲಿ, ಸಂಸತ್ತಿನಲ್ಲಾಗಲೀ ಚರ್ಚೆಯೇ ಆಗಿಲ್ಲ. ಕಳೆದ ಸಂಸತ್ ಅಧಿವೇಶನದಲ್ಲಿ ಸರಕಾರ ಇಂತಹ ಒಂದು ಒಪ್ಪಂದದ ವಿಚಾರ ಪ್ರಕಟಿಸಿದಾಗ ಸಿಪಿಐ(ಎಂ) ಸೇರಿದಂತೆ ಹಲವು ಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿದ್ದವು.

ಸುದ್ದಿ ಮತ್ತು ಪ್ರಸಾರ ಮಂತ್ರಿಗಳು ಈ ಒಪ್ಪಂದಕ್ಕೆ ಕಾರಣವಾದ ಸಂದರ್ಭದ ಬಗ್ಗೆ ಒಂದು ಪೂರ್ಣ ವಿವರಣೆಯನ್ನು ನೀಡಬೇಕು ಎಂದು ಪೊಲಿಟ್‌ಬ್ಯೂರೋ ಒತ್ತಾಯಿಸಿದೆ. ಈ ಒಪ್ಪಂದದ ಮರುವಿಮರ್ಶೆಯಾಗಬೇಕೆಂದೂ ಅದು ಒತ್ತಾಯಿಸಿದೆ. ಸ್ವದೇಶೀ ಸೌಲಭ್ಯಗಳನ್ನು ವಿದೇಶೀ ಮಾಧ್ಯಮ ಕಂಪನಿಗಳಿಗೆ ವಹಿಸದೆಯೇ ನಮ್ಮ ಜನಗಳ ಸಾಮಾಜಿಕ ಮತ್ತು ಸಾಂಸ್ಕೃತಿಕ ಅಗತ್ಯಗಳನ್ನು ಪೂರೈಸಬಲ್ಲ ಪೂರ್ಣ ಪ್ರಮಾಣದ ಕಾರ್ಯಕ್ರಮಗಳನ್ನು ಒದಗಿಸುವಂತೆ ಭಾರತದಲ್ಲಿ ಟೆಲಿವಿಷನ್‌ನ್ನು ಸಿದ್ಧಗೊಳಿಸಲು ಸಾಧ್ಯ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಅಭಿಪ್ರಾಯಪಟ್ಟಿದೆ.

ಇದು ನಿಮಗೆ ಗೊತ್ತೇ?

ನರಸಿಂಹರಾವ್ ಸರಕಾರದ ಹೊಸ ಆರ್ಥಿಕ ನೀತಿ, ಹಣದುಬ್ಬರ ಅತೀ ಹೆಚ್ಚು ತಟ್ಟಿರುವುದು

ಅತೀ ಬಡ ವಿಭಾಗವಾದ, ಹಣದುಬ್ಬರವನ್ನು ತಾಳಿಕೊಳ್ಳಲು ಶಕ್ತಿಯಿಲ್ಲದ ಕೃಷಿ ಕೂಲಿಕಾರರನ್ನು. ಅವರಲ್ಲೂ ಕೃಷಿ ಕೂಲಿಕಾರರ ಈಗಾಗಲೇ ಅತ್ಯಂತ ಕೆಳಮಟ್ಟದಲ್ಲಿರುವ ಜೀವನ ಮಟ್ಟ ಅತ್ಯಂತ ಹೆಚ್ಚು ಕುಸಿದದ್ದು ಭೂಮಾಲಕರ ಆಟಾಟೋಪ ಅತ್ಯಂತ ಹೆಚ್ಚು ಇರುವ ಉತ್ತರಪ್ರದೇಶ ಮತ್ತು ರಾಜಾಸ್ತಾನದಲ್ಲಿ-ಅನುಕ್ರಮವಾಗಿ *21.9%* ಹಾಗೂ *28%* ದಷ್ಟು ಇಳಿದಿದೆ. ಅತೀ ಕಮ್ಮಿ ಇಳಿದದ್ದು ಭೂ ಸುಧಾರಣೆ ಯಶಸ್ವಿಯಾಗಿ ನಡೆದಿರುವ ಪಶ್ಚಿಮ ಬಂಗಾಳ ಹಾಗೂ ಕೇರಳಗಳಲ್ಲಿ-ಅನುಕ್ರಮವಾಗಿ *9.5%* ಮತ್ತು *11.9%*. ಬೆಂಗಳೂರಿನಲ್ಲಿ ನಡೆದ ಅಖಿಲ ಭಾರತ ಕೃಷಿ ಕೂಲಿಕಾರರ ಸಂಘದ ಜನರಲ್ ಕೌನ್ಸಿಲ್ ಸಭೆಯಲ್ಲಿ ಮಂಡಿಸಿದ ಪ್ರಧಾನ ಕಾರ್ಯದರ್ಶಿಯವರವರದಿಗಮನಿಸಿದಸಂಗತಿಯಿದು.

ಕೊಜೆಂಟ್ರಿಕ್ಸ್ ವಿರುದ್ಧ ಪ್ರಚಂಡ ಜನತಾ ಆಂದೋಲನ

ಪುಟ 1ರಿಂದ

ಆ ವಿಷಯದಲ್ಲಿ ಏನು ಮಾಡಲಾಗಿಲ್ಲ. ಎಡರಂಗ ಸರಕಾರದ ಶರತ್ತುಗಳಿಗೆ ಒಪ್ಪಿ B.O.T. ಆಧಾರದ ಮೇಲೆ ಜಂಟಿ ವಲಯದಲ್ಲಿ ವಿದ್ಯುತ್ ಸ್ಥಾವರ ಸ್ಥಾಪಿಸಲು ವಿದೇಶೀ ಕಂಪನಿಗಳು ಮುಂದೆ ಬಂದಿವೆ ಎಂದು ಡಾ.ಸೇನ್ ವಿವರಿಸಿದರು. ವಾಸ್ತವವಾಗಿ ವಿದ್ಯುತ್ ಸ್ಥಾವರಕ್ಕೆ ಹಾಕಿದ ಬಂಡವಾಳ 10-12 ವರ್ಷಗಳಲ್ಲಿ ಹಣ ವಾಪಸು ಬಂದ ಮೇಲೆ ಕೇವಲ ಇಂಧನದ ಖರ್ಚು ಇರುವುದರಿಂದ ಆಗ ವಿದ್ಯುತ್ ಉತ್ಪಾದನೆ ಖರ್ಚು ಕಮ್ಮಿಯಾಗಬೇಕು. ಹಾಗಿರುವಾಗ ಸದಾ ಒಂದೇ ದರ ಹಾಕುತ್ತೇವೆನ್ನುವ ವಿದೇಶೀ ಕಂಪನಿಗಳಿಗೆ ನಮ್ಮ ಹಣ ಸೂರೆ ಮಾಡಲು ಅವಕಾಶ ನೀಡಬಾರದು ಎಂದು ಡಾ.ಸೇನ್ ಒತ್ತಿ ಹೇಳಿದರು.

ಬಂಪರ್ ಆಹಾರ ಉತ್ಪಾದನೆ ತಂದ ವಿದ್ಯುತ್ ನೀತಿ ಕೈ ಬಿಡಬೇಕೇ?

ವಿದ್ಯುತ್ ಪ್ರಶ್ನೆ ಈಗ ರಾಜಕೀಯ ವಾತಾವರಣವನ್ನೇ ನಡುಗಿಸುವ ಪ್ರಶ್ನೆಯಾಗಿದೆ ಎಂದು ಆರಂಭಿಸಿದ ಕಾಂ.ಬಾಲಾನಂದನ್ ಎನ್ರೋನ್ ಒಂದು ಖಾಸಗಿ ಕಂಪೆನಿ ಅದು ಮಹಾರಾಷ್ಟ್ರ ವಿದ್ಯುಚ್ಛಕ್ತಿ ಮಂಡಳಿಯೊಂದಿಗೆ ಒಂದು ಒಪ್ಪಂದ ಮಾಡಿಕೊಂಡಿದೆ. ಆ ಒಪ್ಪಂದವನ್ನು ಪಾಲಿಸುವುದು, ಪಾಲಿಸದಿರುವುದು ಅವರಿಬ್ಬರಿಗೆ ಬಿಟ್ಟಿದ್ದು. ಅಮೇರಿಕನ್ ಸರಕಾರಕ್ಕೆ ಅಲ್ಲೇನಿದೆ ಕೆಲಸ ಎಂದು ಪ್ರಶ್ನಿಸಿದರು.

ನರಸಿಂಹರಾವ್ ಸರಕಾರ ಆಹಾರ ಉತ್ಪಾದನೆ ಹೆಚ್ಚಳದ ಬಗ್ಗೆ ಹೇಳಿಕೊಳ್ಳುತ್ತಿದೆ. ಆದರೆ ಇದು ಹೇಗೆ ಸಾಧ್ಯವಾಯಿತು ಎಂದು ಹೇಳುವುದೇ? ವಿದ್ಯುತ್ ವಲಯದಲ್ಲಿ ಕ್ರಾಸ್-ಸಬ್ಸಿಡೈಸೇಶನ್ ಅಂದರೆ ಒಂದು ಗುಂಪಿನ ಬಳಕೆದಾರರಿಂದ ಹೆಚ್ಚು ಹಣ ಪಡೆದು ಇನ್ನೊಂದು ಗುಂಪಿನ ಬಳಕೆದಾರರಿಗೆ ಅಗ್ಗದಲ್ಲಿ ವಿದ್ಯುತ್ ಒದಗಿಸಿದ್ದರಿಂದಾಗಿ ಇದು ಸಾಧ್ಯವಾಯಿತು. ಆದರೆ ಅದೇ ಸರಕಾರ ಈಗ ಖಾಸಗೀಯವರಿಗೆ ಎಲ್ಲಾ ಸವಲತ್ತು ಕೊಟ್ಟು ಈ ವ್ಯವಸ್ಥೆಯನ್ನು ಬುಡಮೇಲು ಮಾಡಿದೆ ಎಂದರು.

ಕರ್ನಾಟಕದಲ್ಲಿ ಬಹಳಷ್ಟು ಜಲ ವಿದ್ಯುತ್ ಉತ್ಪಾದನೆಯ ಅವಕಾಶವಿದೆ. ಜಲ ವಿದ್ಯುತ್ ಅಗ್ಗದ ಹಾಗೂ ಪರಿಸರ ಮಾಲಿನ್ಯ ತರದ ಒಂದು ಮೂಲ. ದೇವೇಗೌಡರು ಎನ್ರೋನ್ ಮಾದರಿ ನೀತಿಯನ್ನು ವಿರೋಧಿಸುವ ಹಾಗೂ ಕೈಬಿಟ್ಟ ಜಲ ವಿದ್ಯುತ್ ಯೋಜನೆಗಳನ್ನು ಮತ್ತೆ ಎತ್ತಿಕೊಳ್ಳುವ ಧೈರ್ಯ ತೋರಬೇಕು ಎಂದರು. ವಿದ್ಯುಚ್ಛಕ್ತಿ ಮಂಡಳಿಗಳು ಸ್ವತಂತ್ರವಾಗಿ ದಕ್ಷವಾಗಿ ಕೆಲಸ ಮಾಡುವಂತೆ ಅವನ್ನು ಬಲಪಡಿಸಬೇಕು. ಒಂದು ಸರಿಯಾದ ವಿದ್ಯುತ್ ನೀತಿಗಾಗಿ ಚಳುವಳಿ ಒಂದು ದೊಡ್ಡ ಕೆಲಸ. ಇದರಲ್ಲಿ ವಿದ್ಯುತ್ ಇಂಜಿನಿಯರುಗಳು ಹಾಗೂ ವಿದ್ಯುತ್ ನೌಕರರು ಗಮನಾರ್ಹ ಪಾತ್ರ ವಹಿಸಬೇಕೆಂದು ಕಾಂ. ಬಾಲಾನಂದನ್ ಕರೆ ನೀಡಿದರು.

ಕರ್ನಾಟಕ ಪ್ರಾಂತ ರೈತ ಸಂಘದ ಅಧ್ಯಕ್ಷರಾದ ಪಿ.ರಾಮಚಂದ್ರರಾವ್‌ರು ಮಾತನಾಡುತ್ತಾ ಎಲ್ಲಾ ವಿಭಾಗದ ಜನ ಈ ಹೋರಾಟದಲ್ಲಿ ಆಸಕ್ತಿ ತಳೆಯಬೇಕು, ಸಿಐಟಿಯು ಹಾಗೂ ರೈತ ಸಂಘಕ್ಕೆ ಒಂದು ಪರ್ಯಾಯ ನೀತಿ ಸಾಧ್ಯ ಎಂಬುದನ್ನು ರೈತ-ಕಾರ್ಮಿಕರವರೆಗೆ ತಲುಪಿಸಲು ಸಾಧ್ಯವಾಗಬೇಕು, ಏಕೆಂದರೆ ಇದು ರಾಜ್ಯದ ಅಭಿವೃದ್ಧಿಯ ಪ್ರಶ್ನೆ ಎಂದರು.

ಅಧ್ಯಕ್ಷ ಭಾಷಣ ಮಾಡುತ್ತಾ ಕಾಂ. ಸೂರಿಯವರು ಕೊಜೆಂಟ್ರಿಕ್ಸ್ ಬರಬೇಕಾದರೆ ನಮ್ಮ ಶರತ್ತಿನ ಮೇಲೆ ಬರಲಿ ಎಂದು ಕೊಜೆಂಟ್ರಿಕ್-ವಿರೋಧಿ ಜನಾಂದೋಲನ ನಡೆಸಲು ರಾಜ್ಯದ ಕಾರ್ಮಿಕರಿಗೆ, ರೈತರಿಗೆ ಕರೆ ನೀಡಿದರು.

ಹೋಟೇಲುಗಳಲ್ಲಿ ಬಾಲ ಕಾರ್ಮಿಕರು:
ಸೆಪ್ಟಂಬರ್ 20 ರಂದು ಪ್ರತಿಭಟನಾ ದಿನ
ನವಂಬರ್ 7 ರಿಂದ 14 ಬಾಲ ಕಾರ್ಮಿಕ ರಾಷ್ಟ್ರೀಯ ಪ್ರತಿಭಟನಾ ವಾರ

ಜೂನ್ 20 ರಿಂದ 30 ರವರೆಗೆ ಬೆಂಗಳೂರಿನಲ್ಲಿ ಹೋಟೇಲು ಉದ್ದಿಮೆಯಲ್ಲಿ ಬಾಲ ಕಾರ್ಮಿಕರ ಸಮಸ್ಯೆ ಕುರಿತಂತೆ ಒಂದು ಅಖಿಲ ಭಾರತ ಕಾರ್ಯಾಗಾರ ನಡೆಯಿತು. ಇದು ಐ.ಎಲ್.ಓ ಹಾಗು ಸಿ.ಐ.ಟಿ.ಯು ಜಂಟಿಯಾಗಿ ಪ್ರಾಯೋಜಿಸಿದ ಕಾರ್ಯಾಗಾರವಾಗಿತ್ತು ಹಾಗು 1995-96ರ ಸಿ.ಐ.ಟಿ.ಯು-ಐ.ಎಲ್.ಓ ಬಾಲಕಾರ್ಮಿಕ ಪ್ರಾಜೆಕ್ಟಿನ ಒಂದು ಭಾಗವಾಗಿತ್ತು. ನ್ಯೋಡಾದಲ್ಲಿರುವ ರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಫಲೋ ಕಾ. ಮಹಾವೀರ್ ಜೈನ್ ಕಮ್ಮಾಟವನ್ನು ಉದ್ಘಾಟಿಸಿದರು. ಸಿಐ.ಟಿ.ಯು ಉಪಾಧ್ಯಕ್ಷರಾದ ಎಸ್. ಸೂರ್ಯನಾರಾಯಣರಾವ್ ಉದ್ಘಾಟನಾ ಅಧಿವೇಶನದ ಅಧ್ಯಕ್ಷತೆ ವಹಿಸಿದ್ದರು. ಸಿಐಟಿಯು ರಾಷ್ಟ್ರೀಯ ಕಾರ್ಯದರ್ಶಿ ಪಿ.ಕೆ. ಗಂಗೂಲಿ ಹಾಗೂ ಕರ್ನಾಟಕ ರಾಜ್ಯ ಸಿಐಟಿಯು ಪ್ರಧಾನ ಕಾರ್ಯದರ್ಶಿ ಹಾಗೂ ಈ ಕಾರ್ಯಾಗಾರದ ಸಂಯೋಜಕರಾದ ವಿ.ಜೆ.ಕೆ ನಾಯರ್ ಉದ್ಘಾಟನಾ ಅಧಿವೇಶನದಲ್ಲಿ ಮಾತನಾಡಿದ ಇತರ ಪ್ರಮುಖರು. ದಿಲ್ಲಿ, ಪಶ್ಚಿಮ ಬಂಗಾಳ, ಮಹಾರಾಷ್ಟ್ರ, ಆಂಧ್ರ ಪ್ರದೇಶ, ತಮಿಳುನಾಡು, ಕೇರಳ, ಕರ್ನಾಟಕ ಹಾಗೂ ಪಾಂಡಿಚೇರಿಯಿಂದ ಹೋಟೇಲು ಕಾರ್ಮಿಕ ಸಂಘಗಳ ಮುಖಂಡರು ಈ ಕಾರ್ಯಾಗಾರದಲ್ಲಿ ಭಾಗವಹಿಸಿದರು.

ಉದ್ಘಾಟನಾ ಭಾಷಣ ಮಾಡುತ್ತಾ ಡಾ. ಮಹಾವೀರ್ ಜೈನ್ ಬಾಲ ಕಾರ್ಮಿಕರ ಸಮಸ್ಯೆ ಒಂದು ಸಾಮಾಜಿಕ ಅನಿಷ್ಟ. ಆದ್ದರಿಂದ ಅದನ್ನು ನಿರ್ಮೂಲ ಮಾಡಬೇಕು ಎಂದರು. ಈ ಸಾಮಾಜಿಕ ಅನಿಷ್ಟದ ವಿರುದ್ಧ ಜನ ಜಾಗೃತಿ ಮೂಡಿಸಬೇಕು, ಇದರಲ್ಲಿ ಕಾರ್ಮಿಕ ಸಂಘಗಳು ಒಂದು ಮಹತ್ವದ ಪಾತ್ರ ವಹಿಸಬೇಕು ಎಂದು ಅವರು ಒತ್ತಿ ಹೇಳಿದರು.

ಕಾರ್ಯಾಗಾರವನ್ನುದ್ದೇಶಿಸಿ ಮಾತನಾಡುತ್ತಾ ಕಾಂ. ಪಿ.ಕೆ. ಗಂಗೂಲಿ ಬಾಲಕಾರ್ಮಿಕರ ಸಮಸ್ಯೆಗೆ ಕಾರಣಗಳನ್ನು ಗುರುತಿಸಿದರು. ಹೆಚ್ಚುತ್ತಿರುವ ಬಡತನ ಮತ್ತು ನಿರುದ್ಯೋಗದಿಂದಾಗಿ ತಂದೆ-ತಾಯಿಗಳು ಮಕ್ಕಳನ್ನು ಕೆಲಸಕ್ಕೆ ಕಳುಹಿಸಬೇಕಾಗಿ ಬರುತ್ತದೆ. ಬಾಲ ಕಾರ್ಮಿಕರ ಸಮಸ್ಯೆ ಬಂಡವಾಳಶಾಹಿ ವ್ಯವಸ್ಥೆ ಸೃಷ್ಟಿಸಿರುವ ಸಮಸ್ಯೆ, ಆದ್ದರಿಂದ ಎಲ್ಲಾ ಬಂಡವಾಳಶಾಹಿ ದೇಶಗಳಲ್ಲಿ ಅದು ವ್ಯಾಪಕವಾಗಿದೆ. ಹಿಂದಿನ ಸಮಾಜವಾದಿ ದೇಶಗಳಲ್ಲಿ ಅದನ್ನು ನಿರ್ಮೂಲ ಮಾಡಲಾಗಿತ್ತು. ಆದರೆ ಬಂಡವಾಳಶಾಹಿಯೊಂದಿಗೆ ಅದು ಅಲ್ಲಿಯೂ ಮತ್ತೆ ಕಾಣಿಸಿಕೊಳ್ಳುತ್ತಿದೆ. ಬಡತನ ನಿವಾರಣೆ ಹಾಗೂ ಉದ್ಯೋಗಾವಕಾಶ ಸೃಷ್ಟಿಸುವ ಕಾರ್ಯಕ್ರಮಗಳನ್ನು ಸರಕಾರ ಹಾಕಿಕೊಳ್ಳುವಂತೆ ಹೋರಾಟಗಳನ್ನು ನಡೆಸಬೇಕಾದ ಅಗತ್ಯವನ್ನು ಅವರು ಒತ್ತಿ ಹೇಳಿದರು. ಅದೇ ವೇಳೆಗೆ ಈ ಪಿಡುಗಿನ ವಿರುದ್ಧ ಜನರಲ್ಲಿ ಪ್ರಜ್ಞೆ ಮೂಡಿಸಲು ಶೈಕ್ಷಣಿಕ ಪ್ರಚಾರವನ್ನು ನಡೆಸಬೇಕು ಎಂದು ಹೇಳುತ್ತಾ ಇದು ಸಿಐಟಿಯುನ ಈ ಪ್ರಾಜೆಕ್ಟ್‌ನ ಉದ್ದೇಶ ಎಂದರು.

ಕಾಂ. ವಿ.ಜೆ.ಕೆ.ನಾಯರ್ ಕಾರ್ಯಾಗಾರದ ವಿಷಯದ ಕುರಿತಾದ ಪ್ರಬಂಧ ಮಂಡಿಸಿದರು. ಚರ್ಚೆಯಲ್ಲಿ ಪಾಲ್ಗೊಂಡವರು ಒಟ್ಟಾರೆಯಾಗಿ ಬಾಲಕಾರ್ಮಿಕರ ಸಮಸ್ಯೆ, ನಿರ್ದಿಷ್ಟವಾಗಿ ಹೋಟೇಲು ಉದ್ಯಮದಲ್ಲಿ ಅದರ ಸ್ವರೂಪದ ಎಲ್ಲಾ ಅಂಶಗಳ ಬಗ್ಗೆ ಮಾತನಾಡಿದರು. ಕಾರ್ಯಾಗಾರದಲ್ಲಿ ಮೂಡಿ ಬಂದ ಹಲವು ಸಲಹೆ-ಸೂಚನೆಗಳನ್ನು ಸ್ವೀಕರಿಸಿ ಆ ಆಧಾರದ ಮೇಲೆ ಬೇಡಿಕೆಗಳನ್ನು ರೂಪಿಸಲಾಯಿತು.

ಆ ಬೇಡಿಕೆಗಳು ಹೀಗಿವೆ:

1. ಬಡತನ ನಿವಾರಣೆ ಕಾರ್ಯಕ್ರಮ, ಭೂಸುಧಾರಣೆ ಮತ್ತು ಉದ್ಯೋಗವಕಾಶ ನಿರ್ಮಾಣ
2. ಉದ್ಯೋಗ ಸೌಲಭ್ಯ, ಎಲ್ಲಾ ಕಾರ್ಮಿಕರಿಗೆ ಅಗತ್ಯ ಆಧಾರಿತ ಕೂಲಿ
3. ಮಾಧ್ಯಮಿಕ ಮಟ್ಟದವರಗೆ ಪುಕ್ಕಟೆ ಹಾಗೂ ಕಡ್ಡಾಯ ಶಿಕ್ಷಣ ಮತ್ತು ಪುಕ್ಕಟೆ ಮಧ್ಯಾಹ್ನದ ಊಟ ಹಾಗೂ ಪುಕ್ಕಟೆ ಪುಸ್ತಕಗಳು
4. ಬಾಲಕಾರ್ಮಿಕ ಶಾಸನವನ್ನು ತಿದ್ದುಪಡಿ ಮಾಡಿ ಸಮಿತಿಗಳಲ್ಲಿ ಕಾರ್ಮಿಕ ಸಂಘಗಳನ್ನು ಸೇರಿಸುವಂತೆ, ಹೋಟೇಲುಗಳಲ್ಲಿ ಉದ್ಯೋಗ ಬಾಲಕಾರ್ಮಿಕರಿಗೆ ಅನಾಹುತಕಾರಿ ಎಂದು ನೋಟಿಫೈ ಮಾಡಬೇಕು.
5. ವಿವಿಧ ಕಾರ್ಮಿಕ ಕಾನೂನುಗಳಲ್ಲಿ ಕಾರ್ಮಿಕರಿಗೆ ಸಂಬಂಧಪಟ್ಟ ಎಲ್ಲಾ ಅಂಶಗಳ ಅನುಷ್ಠಾನ.
6. ಎಲ್ಲಾ ಜನಗಳಿಗೆ ಸಾಮಾಜಿಕ ಭದ್ರತಾ ಕ್ರಮಗಳು
7. ವಯಸ್ಸಿನ ತಾರತಮ್ಯವಿಲ್ಲದೆ ಹೋಟೇಲುಗಳಲ್ಲಿ ಎಲ್ಲಾ ಕಾರ್ಮಿಕರಿಗೆ ಸಮಾನ ಕೂಲಿ
8. ಯುವಜನ ಮತ್ತು ಮಕ್ಕಳಿಗೆ ಕೆಲಸದ ಅವಧಿಯನ್ನು ಕಾನೂನಿನ ಪ್ರಕಾರ ಇರುವ 4½ ಗಂಟೆಗೆ ಇಳಿಸಬೇಕು.
9. ಹೋಟೇಲುಗಳಲ್ಲಿ ಜೀತಕ್ಕಿರುವ ಮಕ್ಕಳ ಬಿಡುಗಡೆಗೆ ಸರಕಾರೀ ಯಂತ್ರದ ಬಳಕೆ.
10. ಅಬಕಾರಿ ಕಾನೂನನ್ನು ತಿದ್ದುಪಡಿಮಾಡಿ ಮಕ್ಕಳನ್ನು ಬಾರ್ ಗಳಲ್ಲಿ ಉದ್ಯೋಗಕ್ಕೆ ಹಚ್ಚಲು ನಿಷೇಧ ತರಬೇಕು.
11. ಹೋಟೇಲು ಕಾರ್ಮಿಕರಿಗೆ ಮುಖ್ಯವಾಗಿ ಯುವ ಹಾಗೂ ಬಾಲ ಕಾರ್ಮಿಕರಿಗೆ ಸರಕಾರ ಹಾಸ್ಟೆಲ್ ಗಳನ್ನು ನಡೆಸಬೇಕು.
12. ಹೋಟೇಲುಗಳಲ್ಲಿ ಮಕ್ಕಳಿಗೆ ಲೈಂಗಿಕ ಕಿರುಕುಳ ನಿಲ್ಲಿಸಬೇಕು.
13. ಹೋಟೇಲು/ರೆಸ್ಟೋರೆಂಟ್‌ಗಳಲ್ಲಿ ಬಾಲಕಿಯರನ್ನು ಕೆಲಸಕ್ಕೆ ಹಚ್ಚುವುದನ್ನು ತಡೆಯಬೇಕು.

ಸೆಪ್ಟೆಂಬರ್ 20, 1995ರಂದು ಹೋಟೇಲುಗಳಲ್ಲಿ ಬಾಲಕಾರ್ಮಿಕರ ಸಮಸ್ಯೆಯ ವಿರುದ್ಧ ಅಖಿಲ ಭಾರತ ಮಟ್ಟದ ಪ್ರತಿಭಟನಾ ದಿನಾಚರಣೆ ನಡೆಸಲು ನಿರ್ಧರಿಸಲಾಯಿತು. ಅಲ್ಲದೆ ಸಿಐಟಿಯು ನವಂಬರ್ 7ರಿಂದ 14ರ ವರೆಗೆ ನಡೆಯಲಿರುವ ಬಾಲ ಕಾರ್ಮಿಕರ ಸಮಸ್ಯೆ ಕುರಿತಾದ ರಾಷ್ಟ್ರೀಯ ಪ್ರತಿಭಟನಾ ವಾರಾಚರಣೆಯಲ್ಲಿ ಪಾಲ್ಗೊಳ್ಳಲು ನಿರ್ಧರಿಸಲಾಯಿತು.